

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 25 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 247 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಭೂ ಪರಿವರ್ತನಾ ಅರ್ಜಿಗಳಿಗೆ
30 ದಿನದಲ್ಲಿ ಮುಕ್ತಿ


● ಜಿಲ್ಲಾಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಆದೇಶ ● ಈ ಅವಧಿಯಲ್ಲಿ ಡಿಸಿ ಯಾವ ನಿರ್ಧಾರ ಕೈಗೊಳ್ಳದಿದ್ದಲ್ಲಿ ಸ್ವಯಂ ಚಾಲಿತ ಭೂ ಪರಿವರ್ತನೆ ಘೋಷಣೆ

ಬೆಂಗಳೂರು, ಡಿ.24(ಕೆಎಂಶಿ)– ಭೂ ಪರಿವರ್ತನೆ ಅರ್ಜಿಗಳನ್ನು 30 ದಿನದೊಳಗೆ ಇತ್ಯರ್ಥ ಪಡಿಸುವಂತೆ ಜಿಲ್ಲಾಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣಬೈರೇಗೌಡ ಇಂದಿಲ್ಲಿ ಆದೇಶ ಹೊರಡಿಸಿದ್ದಾರೆ.

ವಿಡಿಯೊ ಕಾನ್ಫರೆನ್ಸ್ ಮೂಲಕ ಕರ್ನಾಟಕ ಭೂಕಂದಾಯ ಕಾಯಿದೆ 1964ರ ತಿದ್ದುಪಡಿಗೆ ಅಂತಿಮ ಅಧಿಸೂಚನೆ ಹೊರಡಿಸಿದ್ದು ಇದರನ್ವಯ ಇನ್ನು ಮುಂದೆ ಭೂ ಪರಿವರ್ತನೆ ಮಾಡುವಂತೆ ಆದೇಶಿಸಿದರು. ಭೂ ಪರಿವರ್ತನೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಜಿಲ್ಲಾಧಿಕಾರಿಗಳು 30 ದಿನಗಳ ಒಳಗಾಗಿ ಸಂಬಂಧಿತ ಇಲಾಖೆ ಜೊತೆ ಚರ್ಚಿಸಿ, ಪರಿವರ್ತನೆಗೆ ಅವಕಾಶ ನೀಡಬಹುದು ಅಥವಾ ತಿರಸ್ಕರಿಸಬಹುದು.

ನಿಗದಿತ ಸಮಯದಲ್ಲಿ ಜಿಲ್ಲಾಧಿಕಾರಿಗಳು ಯಾವ ನಿರ್ಧಾರವನ್ನೂ ತೆಗೆದುಕೊಳ್ಳದಿದ್ದಲ್ಲಿ, ಸ್ವಯಂಚಾಲಿತವಾಗಿ ಭೂ ಪರಿವರ್ತನೆಗೆ ಅವಕಾಶ ಲಭ್ಯವಾಗಲಿದೆ. ಮಾಸ್ಟರ್ ಪ್ಲಾನ್ ಪ್ರಕಾರ ಭೂ ಬಳಕೆಗೆ ಪರಿವರ್ತನೆ ಅವಶ್ಯಕತೆ ತೆಗೆದು ಹಾಕಲಾಗಿದೆ. ಇಂತಹ ಪ್ರಕರಣಗಳಲ್ಲಿ ನೇರವಾಗಿ ನಕ್ಷೆ ಅನುಮೋದನೆಗೆ ಹೋಗಬಹುದು.

ಮಾಸ್ಟರ್ ಪ್ಲಾನ್ ಹೊರಗಿನ ಹಾಗೂ ಪರಿಭಾವಿತ ಭೂ ಪರಿವರ್ತನೆಗೆ ಈ ಹಿಂದೆ ಮೂರು–ನಾಲ್ಕು ತಿಂಗಳು ಸಮಯವಾಗುತ್ತಿತ್ತು, ಅದು ಇನ್ನು 30 ದಿನಗಳೊಳಗೆ ಆಗಬೇಕಿದೆ.



ಸಣ್ಣ ಕೈಗಾರಿಕೆಗಳಿಗೆ ಎರಡು ಎಕರೆವರೆಗೆ ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆ ಅಗತ್ಯವಿಲ್ಲ. ನವೀಕರಿಸಬಹುದಾದ ಇಂಧನ ಯೋಜನೆಗೆ ಪರಿವರ್ತನೆ ಅವಶ್ಯಕತೆ ಇಲ್ಲ. ಇಲಾಖಾ ಅನುಮತಿ ಪಡೆದಿದ್ದರೆ ಸಾಕು.

ತಿದ್ದುಪಡಿ ಮೂಲಕ ಕಂದಾಯ ನ್ಯಾಯಾಲಯಗಳನ್ನು ಪಾರದರ್ಶಕ, ನಿಯಮಬದ್ಧವಾಗಿ ನಡೆಸಲು ಹಾಗೂ ಸಾರ್ವಜನಿಕರಿಗೆ ಸರಳ, ಸುಲಲಿತ ನ್ಯಾಯದಾನ ನೀಡಲು ಸರ್ಕಾರ ಬಯಸಿದೆ ಎಂದರು.

ಭೂ ಪರಿವರ್ತನೆ ಸರಳೀಕೃತವಾಗಿಸಿ ರಾಜ್ಯವನ್ನು ಅಭಿವೃದ್ಧಿ ಪಥದತ್ತ ಸಾಗಿಸಲು ಹಾಗೂ ಬಂಡವಾಳ ಹೂಡಿಕೆಗೆ ಹೂಡಿಕೆದಾರರ ಸ್ನೇಹಿಯಾಗಿ ಖರೀದಿಸಲಾದ ಭೂಮಿಗೆ ಪರಿವರ್ತನೆ ನೀಡಲು ತಿದ್ದುಪಡಿ ತರಲಾಗಿದೆ.

ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಕಂದಾಯ ನ್ಯಾಯಾಲಯಗಳನ್ನು ಹೇಗೆ ನಡೆಸಬೇಕು ಎಂಬುದಕ್ಕೆ ಈ ಹಿಂದೆ ಯಾವುದೇ ಸ್ಪಷ್ಟ ನಿಯಮ ಇರಲಿಲ್ಲ, ಪರಿಣಾಮವಾಗಿ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಅನೇಕ ಆದೇಶ ಗಳನ್ನು ಹೊರಡಿಸಿರುವ ಉದಾಹರಣೆಗಳು ಸಾಕಷ್ಟಿವೆ.

ಆರ್‌ಸಿಸಿಎಂಎಸ್ ಸೇರಿದಂತೆ ಡಿಜಿಟೈಜೇಷನ್ ಮುಖಾಂತರ ಆದೇಶಗಳನ್ನು ನೀಡಲಾಗುವುದು. ಇವಿಗಳಿಂದ ಸುಧಾರಣಾ ಕಾನೂನುಗಳಿಗೆ ನ್ಯಾಯಿಕಬಲ ಒದಗಿಸಲಾಗಿದೆ. ಆದ್ದರಿಂದ ಅದಕ್ಕೂ ನಿಯಮ ರೂಪಿಸಿ ಸರಿಪಡಿಸಲಾಗಿದೆ. ಕಾನೂನು ಮೀರಿ ಯಾರೂ ನ್ಯಾಯದಾನ ನೀಡಲು ಸಾಧ್ಯವಿಲ್ಲ.

ಕಂದಾಯ ನ್ಯಾಯಾಲಯಗಳನ್ನು ಆನ್‌ಲೈನ್ ಮುಖಾಂತರ ನಡೆಸಲು ಕಾನೂನು ತರಲಾಗಿದೆ. ವಾದಿ ಹಾಗೂ ಪ್ರತಿವಾದಿಗಳು ಕಚೇರಿಗಳಿಗೆ ಸುತ್ತುವುದರ ಬದಲಿಗೆ ಆನ್‌ಲೈನ್ ಮುಖಾಂತರವೇ ನ್ಯಾಯಾಲಯ ಕಲಾಪಗಳಲ್ಲಿ ಭಾಗವಹಿಸುವ ಸುಲಭ ಮಾರ್ಗ ನೀಡಲಾಗಿದೆ.

ಒಟ್ಟಾರೆ ಆಡಳಿತದಲ್ಲಿ ಸರಳೀಕರಣ, ಪಾರದರ್ಶಕತೆ ಜಾರಿಗೊಳಿಸುವ ಮುಖಾಂತರ ಸುಧಾರಣೆ ತರುವುದು ನಮ್ಮ ಮೂಲ ಉದ್ದೇಶವಾಗಿದೆ ಎಂದರು.

ಮೈಸೂರಲ್ಲಿ ಸಂಭ್ರಮದ ಕ್ರಿಸ್‌ಮಸ್

● ಸೆಂಟ್ ಫಿಲೋಮಿನಾ ಸೇರಿದಂತೆ ಎಲ್ಲಾ ಚರ್ಚ್‌ಗಳಲ್ಲಿ ವಿಶೇಷ ಪ್ರಾರ್ಥನೆ ● ಎಲ್ಲೆಡೆ ದೀಪಾಲಂಕಾರ; ವಿವಿಧ ಪ್ರತಿಕೃತಿ ಆಕರ್ಷಣೆ ● ನಾನಾ ರೀತಿಯ ಕೇಕ್, ಸಿಹಿ ಹಂಚಿ ಸಂಭ್ರಮ

ಮೈಸೂರು, ಡಿ.24(ವಿವಿಹೆಚ್)– ಕ್ರೈಸ್ತರ ಆರಾಧ್ಯ ದೈವ ಯೇಸು ಕ್ರಿಸ್ತನ ಜನ್ಮದಿನದ ಪ್ರಯುಕ್ತ ಜಗತ್ತಿನಾದ್ಯಂತ ಶಾಂತಿ, ಮಾನವೀಯ ಸಂದೇಶದೊಂದಿಗೆ ಆಚರಿಸಲ್ಪಡುವ ಕ್ರಿಸ್‌ಮಸ್ ಹಬ್ಬವನ್ನು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸಡಗರ, ಸಂಭ್ರಮದಿಂದ ಆಚರಿಸಲಾಯಿತು.

ಮೈಸೂರಿನ ಲಷ್ಕರ್ ಮೊಹಲ್ಲಾದ ಅಶೋಕ ರಸ್ತೆಯಲ್ಲಿರುವ ಸಂತ ಫಿಲೋಮಿನಾ ಚರ್ಚ್ ಸೇರಿದಂತೆ ನಗರದ ವಿವಿಧ 40ಕ್ಕೂ ಅಧಿಕ ಚರ್ಚ್‌ಗಳಲ್ಲಿ ಬುಧವಾರ ರಾತ್ರಿ 12ಕ್ಕೆ ಯೇಸುಕ್ರಿಸ್ತನ ಆರಾಧನೆಯೊಂದಿಗೆ ಕ್ರಿಸ್‌ಮಸ್ ಹಬ್ಬ, ಬಲಿಪೂಜೆ ಆಚರಣೆ ಕಳೆಗಟ್ಟಿತು.

ಕ್ರಿಸ್‌ಮಸ್ ಮುನ್ನಾ ದಿನವಾದ ಬುಧವಾರ ಚರ್ಚ್‌ನಲ್ಲಿ ನೆರೆದಿದ್ದ ಕ್ರೈಸ್ತ ಬಾಂಧವರು ಯೇಸು ಕ್ರಿಸ್ತನ ಸ್ಮರಿಸುವ ಪ್ರಾರ್ಥನಾ ಗೀತೆಗಳನ್ನು ಹಾಡಿದರು. ಫಿಲೋಮಿನಾ ಚರ್ಚ್‌ನಲ್ಲಿ ಸಂಜೆಯಿಂದಲೇ ಸಾವಿರಾರು ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರು. ಚರ್ಚ್ ಆವರಣದಲ್ಲಿ ನಿರ್ಮಿಸಲಾಗಿದ್ದ ಐಫೆಲ್ ಟವರ್ ಪ್ರತಿಕೃತಿ, ಬಾಲ ಯೇಸುವಿನ ಜನನ ಸ್ಥಳ ಮಾದರಿ, ವಿದ್ಯುತ್ ದೀಪಾಲಂಕಾರವನ್ನು ಕಣ್ತುಂಬಿಕೊಂಡರು.

ಮಧ್ಯರಾತ್ರಿ 11 ಗಂಟೆಗೆ ದಿವ್ಯ ಬಲಿಪೂಜೆ ನಡೆಯಿತು. ವಿಶೇಷ ಪೂಜೆ, ಪ್ರಾರ್ಥನೆ ಜೊತೆಗೆ ಕ್ಯಾರಲ್ ಗೀತೆ ಚರ್ಚ್ ಆವರಣದಲ್ಲಿ ಮೊಳಗಿತು. 11.30ರ ವೇಳೆಗೆ ಮೈಸೂರು ಬಿಷಪ್ ಫ್ರಾನ್ಸಿಸ್ ಸೆರಾವೊ ಎಸ್‌ಜೆ ಅವರು ಬಾಲಯೇಸುವನ್ನು ಗೋದಲಿಯಲ್ಲಿ ಪ್ರತಿಷ್ಠಾಪಿಸಿದರು. ಈ ವೇಳೆ ನೆರೆದಿದ್ದ ಕ್ರೈಸ್ತ ಬಾಂಧವರಿಗೆ ಕ್ರಿಸ್‌ಮಸ್ ವಿಶೇಷ ಸಂದೇಶ ಹಾಗೂ ಹೊಸ ವರ್ಷದ ಶುಭಾಷಯವನ್ನು ಕೋರಿದರು. ಬಾಲ ಯೇಸು ಪ್ರತಿಷ್ಠಾಪನೆ ವೇಳೆ ರೆವರೆಂಡ್ ಫಾದರ್ ಅಲೆಕ್ಸ್ ಪ್ರಶಾಂತ್ ಸಿಕ್ವೇರಾ, ಸಹಾಯಕ ಪ್ರೊಕ್ಯುರೇಟರ್ ಫಾ. ಯೇಸು ಪ್ರಸಾದ್, ಸಹಾಯಕ ಪ್ಯಾರಿಷ್ ಪಾದ್ರಿ ಫಾ. ಜೀವನ್ ಪ್ರೀತ್, ಸಹಾಯಕ ಪ್ಯಾರಿಷ್ ಪಾದ್ರಿ ಫಾ. ಆಲ್ಬರ್ಟ್ ಭಾಸ್ಕರ್ ಜೊತೆಯಾಗಿದ್ದರು.

ಯೇಸುವಿನ ಜನನದೊಂದಿಗೆ ದೇವರು ಮಾನವ ರೂಪ ತಾಳಿದ ಬಗ್ಗೆ ಕ್ರಿಶ್ಚಿಯನ್ನರ ಪವಿತ್ರ ಗ್ರಂಥ ಬೈಬಲ್‌ನ ಅಧ್ಯಾಯಗಳ ಪಠಣೆ ಮಾಡಲಾಯಿತು. ಎಲ್ಲರಿಗೂ ಒಳ್ಳೆಯದನ್ನು ಮಾಡುವಂತೆ ಕ್ರೈಸ್ತ ಬಾಂಧವರು ಯೇಸುವಿನಲ್ಲಿ ಪ್ರಾರ್ಥಿಸಿದರು. ಈ ವೇಳೆ ಮಾತನಾಡಿದ ಫಿಲೋಮಿನಾ ಚರ್ಚ್‌ನ ಧರ್ಮಗುರುಗಳಾದ ಅಲೆಕ್ಸ್ ಪ್ರಶಾಂತ್ ಸಿಕ್ವೆರಾ, ಪ್ರೀತಿ, ಮಾನವೀಯತೆ, ಏಕತೆಯಿಂದ ಜೀವಿಸಲು ಯೇಸುವಿನಲ್ಲಿ ಪ್ರಾರ್ಥಿಸಲಾಯಿತು.

■ 6ನೇ ಪುಟಕ್ಕೆ



ಮೈಸೂರಿನ ಸಂತ ಫಿಲೋಮಿನಾ ಚರ್ಚ್ ಆವರಣದಲ್ಲಿ ನಿರ್ಮಿಸಲಾಗಿರುವ ಗೋದಲಿಯಲ್ಲಿ ಮೈಸೂರು ಬಿಷಪ್ ಫ್ರಾನ್ಸಿಸ್ ಸೆರಾವೊ ಎಸ್‌ಜೆ ಅವರು ಬಾಲ ಯೇಸುವನ್ನು ಪ್ರತಿಷ್ಠಾಪಿಸಿದರು.

ಅಧಿಕಾರ ಹಂಚಿಕೆ ವಿಚಾರದಲ್ಲಿ ಹೈಕಮಾಂಡ್ ಮಧ್ಯಪ್ರವೇಶ ಮಾಡಲ್ಲ

ತುಮಕೂರು: ರಾಜ್ಯ ಕಾಂಗ್ರೆಸ್‌ನಲ್ಲಿ ತಲೆದೋರಿರುವ ಅಧಿಕಾರ ಹಂಚಿಕೆ ವಿವಾದದಲ್ಲಿ ಹೈಕಮಾಂಡ್ ಮಧ್ಯ ಪ್ರವೇಶ ಮಾಡುವುದಿಲ್ಲ ಎಂದು ಮಾಜಿ ಸಚಿವ ಕೆಎನ್ ರಾಜಣ್ಣ ಅಭಿಪ್ರಾಯಪಟ್ಟಿದ್ದಾರೆ.



ತುಮಕೂರಿನಲ್ಲಿ ಮಾತನಾಡಿದ ಅವರು, ಸಿಎಂ ಬದಲಾವಣೆ ಗೊಂದಲ ನಾವು ಸೃಷ್ಟಿ ಮಾಡಿದ್ದಲ್ಲ, ನೀವೇ ಸೃಷ್ಟಿ ಮಾಡಿರೋದು ಅದನ್ನು ನೀವೇ ಬಗೆಹರಿಸಿಕೊಳ್ಳಿ ಎಂದು ಹೈಕಮಾಂಡ್ ಸಂದೇಶ ಸಾರಿದೆ. ಇದರ ಅರ್ಥ ಸಿಎಂ ಬದಲಾವಣೆ ವಿಚಾರದಲ್ಲಿ ಹೈಕಮಾಂಡ್ ಮಧ್ಯಪ್ರವೇಶ ಮಾಡೋದಿಲ್ಲ ಅನ್ನೋದು ನನ್ನ ಭಾವನೆ. ಇದರಲಿ ಹೈಕಮಾಂಡ್‌ಗೆ ಬೊಟ್ಟು ಮಾಡಿ ತೋರಿಸುವ ಅಗತ್ಯ ಇಲ್ಲ. ಇದು ಇಲ್ಲೇ ಹಲವರಿಂದ ಸೃಷ್ಟಿಯಾದ ಗೊಂದಲ ಎಂದರು.

ಜನವರಿ ಅಥವಾ ಫೆಬ್ರವರಿಯಲ್ಲಿ ಸಂಪುಟ ಪುನಾರಚನೆ ಆಗಬಹುದು. ಸಿಎಂ ಸಿದ್ದರಾಮಯ್ಯ ದೆಹಲಿಗೆ ಹೋಗಿ ಹೈಕಮಾಂಡ್ ಭೇಟಿಯಾದ ಮೇಲೆ ಸಂಪುಟ ಪುನಾರಚನೆ ಆಗಬಹುದು. ಸದ್ಯ ಹೈಕಮಾಂಡ್ ಬ್ಯುಸಿ ಇದ್ದಾರೆ. ಹೈಕಮಾಂಡ್ ನಿರ್ಣಯದ ಮೇಲೆ ಎಲ್ಲವೂ ನಿಂತಿದೆ. ಸಿದ್ದರಾಮಯ್ಯರಿಗೆ ತೊಂದರೆ ಆಗುತ್ತೋ ಬಿಡುತ್ತೋ ಅನ್ನೋದು ■ 6ನೇ ಪುಟಕ್ಕೆ

ಅಧಿಕಾರ ಹಸ್ತಾಂತರ ಸಂಬಂಧ ಯಾರಿಗೂ ತೊಂದರೆ ಕೊಡಲ್ಲ!

ಬೆಂಗಳೂರು, ಡಿ.24(ಕೆಎಂಶಿ)– ಅಧಿಕಾರ ಹಸ್ತಾಂತರ ಕುರಿತಂತೆ ರಾಹುಲ್ ಗಾಂಧಿ ಭೇಟಿ ಮಾಡಿ ತೊಂದರೆ ಕೊಡುವುದಿಲ್ಲ ಎಂದಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಾನ್ ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ಇರುತ್ತೇನೆ ಎನ್ನುವ ಮೂಲಕ ನಾನಾ ಊಹಾಪೋಹಗಳಿಗೆ ಎಡೆ ಮಾಡಿಕೊಟ್ಟಿದ್ದಾರೆ.



ದೆಹಲಿಯ ಕರ್ನಾಟಕ ಭವನದಲ್ಲಿ ರಾಜ್ಯದ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಸುದ್ದಿಗಾರರಿಗೆ ಮಾಹಿತಿ ನೀಡಿದ ಶಿವಕುಮಾರ್, ಅಧಿಕಾರ ಹಸ್ತಾಂತರ ಕುರಿತಂತೆ ಬಂದ ಪ್ರಶ್ನೆಗಳಿಗೆ ನಿರಾಸಕ್ತರಾಗಿ ಉತ್ತರಿಸಿದರು.


ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ಹಸ್ತಾಂತರ ವಿಷಯವನ್ನು ರಾಹುಲ್ ಗಾಂಧಿ ಅಂಗಳಕ್ಕೆ ಹಾಕಿದರೆ, ಶಿವಕುಮಾರ್, ಯಾರನ್ನೂ ಹೊಣೆಯಾಗಿಸದೆ, ಕಾರ್ಯಕರ್ತನಾಗಿಯೇ ಇರುತ್ತೇನೆ ಎಂದರು. ಕಳೆದ ಮೂರು–ನಾಲ್ಕು ದಶಕಗಳಿಂದ ಪಕ್ಷದ ಎಲ್ಲಾ ಹಂತಗಳಲ್ಲಿ ದುಡಿದಿದ್ದೇನೆ. ಅಂದೂ ಸಾಮಾನ್ಯ ಕಾರ್ಯಕರ್ತ, ಇಂದೂ ಸಾಮಾನ್ಯ ಕಾರ್ಯಕರ್ತನಾಗಿರಲು ಬಯಸುತ್ತೇನೆ. ವಿದೇಶದಿಂದ ರಾಹುಲ್ ನಿನ್ನೆಯಷ್ಟೇ ಹಿಂತಿರುಗಿದ್ದಾರೆ. ■ 6ನೇ ಪುಟಕ್ಕೆ

ಮೈಸೂರು ಕೇಂದ್ರೀಯ ಸಂಪರ್ಕ ಬ್ಯೂರೋ ಕಚೇರಿ ಸ್ಥಗಿತ ಬೇಡ

▶ ಕೇಂದ್ರ ವಾರ್ತಾ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಪತ್ರ ಬರೆದ ಸಚಿವ ಹೆಚ್.ಡಿ. ಕುಮಾರಸ್ವಾಮಿ
▶ ಮೈಸೂರು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಮಹತ್ವ ಹೊಂದಿರುವುದರ ಬಗ್ಗೆ ಪತ್ರದಲ್ಲಿ ಉಲ್ಲೇಖ



ಹೆಚ್.ಡಿ. ಕುಮಾರಸ್ವಾಮಿ





ಅಶ್ವಿನಿ ವೈಷ್ಣವ್

ನವದೆಹಲಿ: ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಅಧೀನದಲ್ಲಿ ಮೈಸೂರಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೇಂದ್ರೀಯ ಸಂಪರ್ಕ ಬ್ಯೂರೋ (ಸೆಂಟ್ರಲ್ ಬ್ಯೂರೋ ಆಫ್ ಕಮ್ಯುನಿಕೇಷನ್–CBC) ಕಚೇರಿಯನ್ನು ಸ್ಥಗಿತಗೊಳಿಸುವ ಕ್ರಮ ಕೈಗೊಳ್ಳಬಾರದು ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದ್ದಾರೆ. ಮೈಸೂರಿನ ಹಾರ್ಡಿಂಜ್ ಸರ್ಕಲ್‌ನಲ್ಲಿ ಈ ಕಚೇರಿ ಇದೆ.

ಈ ಬಗ್ಗೆ ಕೇಂದ್ರದ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಪತ್ರ ಬರೆದಿರುವ ಕುಮಾರಸ್ವಾಮಿ, ಮೈಸೂರಿನಲ್ಲಿ ಕೇಂದ್ರೀಯ ಸಂಪರ್ಕ ಬ್ಯೂರೋವನ್ನು ಮತ್ತಷ್ಟು ಉನ್ನತೀಕರಿಸಿ ಯಥಾಸ್ಥಿತಿಯಲ್ಲಿ ಮುಂದುವರಿಸುವುದು ಅತ್ಯಗತ್ಯವಾಗಿದೆ. ರಾಜ್ಯದಲ್ಲಿಯೇ ಮೈಸೂರು ನಗರಕ್ಕೆ ಐತಿಹಾಸಿಕ ಪ್ರಾಮುಖ್ಯತೆ ಹೊಂದಿದೆ. ಇಲ್ಲಿಗೆ ದೇಶ ವಿದೇಶಗಳಿಂದ ಅಸಂಖ್ಯಾತ ■ 6ನೇ ಪುಟಕ್ಕೆ

ವಸತಿ ಸಚಿವ ಜಮೀರ್ ಆಪ್ತ ಕಾರ್ಯದರ್ಶಿ ಸರ್ಫರಾಜ್‌ರ ಮೈಸೂರು, ಕೊಡಗು, ಕೋಟೆ ಆಸ್ತಿಗಳ ಮೇಲೆ ಲೋಕಾಯುಕ್ತ ದಾಳಿ

ಬೆಂಗಳೂರು, ಡಿ.24(ಕೆಎಂಶಿ)– ವಸತಿ ಸಚಿವ ಜಮೀರ್ ಅಹಮದ್ ಖಾನ್ ಆಪ್ತ ಕಾರ್ಯದರ್ಶಿ ಸರ್ದಾರ್ ಸರ್ಫರಾಜ್ ಖಾನ್ ಅವರ ಕೊಡಗಿನ 2 ಕಾಫಿ ತೋಟ, ಮೈಸೂರಿನ ಹೆಚ್.ಡಿ. ಕೋಟೆಯ ಕಬಿನಿ ಹಿನ್ನೀರಿನ ಪ್ರದೇಶದಲ್ಲಿನ ರೆಸಾರ್ಟ್, 7 ಮನೆಗಳ ಮೇಲೆ ಲೋಕಾಯುಕ್ತ ಇಂದು ಬೆಳ್ಳಂಬೆಳಗ್ಗೆ ಏಕಕಾಲಕ್ಕೆ ದಾಳಿ ನಡೆಸಿ ದಾಖಲೆಗಳನ್ನು ವಶಪಡಿಸಿಕೊಂಡಿದೆ.

ಮಹತ್ವದ ದಾಖಲೆಗಳು ವಶಕ್ಕೆ

ಸರ್ಫರಾಜ್ ಖಾನ್ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಕೆಎಎಸ್ ಹಿರಿಯ ಶ್ರೇಣಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಸುಮಾರು ಏಳೆಂಟು ಸಚಿವರಿಗೆ ಆಪ್ತ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದು, ಜಮೀರ್ ಸೇರಿದಂತೆ ಕೆಲವು ರಾಜಕಾರಣಿಗಳಿಗೆ ಆಪ್ತರಾಗಿದ್ದರು.

ಸರ್ಫರಾಜ್ ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡು ಕೋಟ್ಯಾಂತರ ರೂ. ಆಸ್ತಿ ಸಂಪಾದನೆ ಮಾಡಿದ್ದಾರೆಂದು ದಾಖಲೆ ಸಮೇತ ಲೋಕಾಯುಕ್ತಕ್ಕೆ ದೂರು ನೀಡಿದ್ದ ಹಿನ್ನೆಲೆಯಲ್ಲಿ 50 ಅಧಿಕಾರಿಗಳು ಮತ್ತು ಸಿಬ್ಬಂದಿ ಬೆಳ್ಳಂಬೆಳಗ್ಗೆ ಅವರ ಹಲಸೂರಿನ ನಿವಾಸ ಸೇರಿದಂತೆ ನಗರದಲ್ಲಿನ ಒಟ್ಟು ಏಳು ಮನೆಗಳು, ಕೊಡಗಿನಲ್ಲಿರುವ 2 ಕಾಫಿ ಎಸ್ಟೇಟ್ ಮತ್ತು ರೆಸಾರ್ಟ್ ಮೇಲೆ ದಾಳಿ ನಡೆಸಿ ಅಪಾರ ಆಸ್ತಿ–ಪಾಸ್ತಿ ವಶಕ್ಕೆ ಪಡೆದಿದೆ.

ನಕಲಿ ದಾಖಲೆ ಸೃಷ್ಟಿಸಿ ಮಾಜಿ ಎಂಎಲ್ಸಿ ಸಿದ್ದರಾಜುರವರ
22 ಕೋಟಿ ಮೌಲ್ಯದ 22 ನಿವೇಶನ ಮಾರಾಟ ಯತ್ನ!


■ ಮಾಹಿತಿ ತಿಳಿದು ಸಬ್‌ರಿಜಿಸ್ಟ್ರಾರ್ ಕಚೇರಿಗೆ ಅವರು ಧಾವಿಸುತ್ತಿದ್ದಂತೆ ಆಸಾಮಿ ಪರಾರಿ
■ ಭೂ ಮಾಫಿಯಾ ಪ್ರಭಾವಿಗಳ ಆಸ್ತಿಯನ್ನೇ ಬಿಡುತ್ತಿಲ್ಲ ಇನ್ನು ಜನಸಾಮಾನ್ಯರ ಪಾಡೇನು?!
■ ಬೋಗಾದಿ ಪಟ್ಟಣ ಪಂಚಾಯ್ತಿಯಿಂದ ಇ–ಖಾತಾ, ಇ–ಸ್ವತ್ತು, ಇ–ಆಸ್ತಿ ಪ್ರತಿ ಪಡೆಯಲಾಗಿದೆ

ಮೈಸೂರು, ಡಿ.24(ಎಂಟಿವೈ)– ನಕಲಿ ದಾಖಲೆ ಸೃಷ್ಟಿಸಿಕೊಂಡು, ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು ಅವರಿಗೆ ಸೇರಿದ 22 ಕೋಟಿ ರೂ. ಮೌಲ್ಯದ 22 ನಿವೇಶನಗಳನ್ನು ಮಾರಾಟ ಮಾಡಲು ಯತ್ನಿಸಿದ್ದು, ವಿಷಯ ತಿಳಿದು, ಉಪ ನೋಂದಣಾಧಿಕಾರಿ ಕಚೇರಿಗೆ ಸಿದ್ದರಾಜು ಬರುತ್ತಿದ್ದಂತೆ ಆಸಾಮಿ ಪರಾರಿಯಾದ ಘಟನೆ ಬುಧವಾರ ಬೆಳಗ್ಗೆ ಬೆಳಕಿಗೆ ಬಂದಿದೆ.

ಮೈಸೂರು ತಾಲೂಕಿನ ಜಯಪುರ ಹೋಬಳಿಯ ಕೇರ್ಗಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗೆ ಸೇರಿದ ಭೂಮಿಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು 'ಚಾಮುಂಡಿ ಸೂರು ನಗರ' ಬಡಾವಣೆ ಅಭಿವೃದ್ಧಿಪಡಿಸಿದ್ದು, ಅದರಲ್ಲಿನ 22 ನಿವೇಶನಗಳಿಗೆ ವ್ಯಕ್ತಿಯೊಬ್ಬ ನಕಲಿ ದಾಖಲೆ ಸೃಷ್ಟಿಸಿ, ಮಾರಾಟಕ್ಕೆ ಯತ್ನಿಸಿದ್ದಾನೆ. ಅದಕ್ಕಾಗಿ ನಿವೇಶನದ ಮಾಲೀಕರಾದ ಸಿದ್ದರಾಜು ಅವರ ನಕಲಿ ಆಧಾರ್ ಕಾರ್ಡ್, ಪಾನ್ ಕಾರ್ಡ್ ಬಳಸಿ, ಬೋಗಾದಿ ಪಟ್ಟಣ ಪಂಚಾಯ್ತಿಯಲ್ಲಿ ಪಡೆದ ಇ–ಖಾತಾ/ ಇ–ಸ್ವತ್ತು/ ಇ–ಆಸ್ತಿ ಪ್ರತಿ ಸಲ್ಲಿಸಿ, ನಿವೇಶನಗಳನ್ನು ■ 6ನೇ ಪುಟಕ್ಕೆ



ನಕಲಿ ದಾಖಲೆ ಸೃಷ್ಟಿಸಿ ತಮ್ಮ ಒಡೆತನದ ನಿವೇಶನಗಳನ್ನು ಮಾರಾಟ ಮಾಡಲು ವ್ಯಕ್ತಿಯೊಬ್ಬ ಯತ್ನಿಸಿರುವ ಸಂಬಂಧ ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು ಅವರು ಮೈಸೂರಿನ ವಿಜಯನಗರದ ಪಶ್ಚಿಮ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಉಪನೋಂದಣಾಧಿಕಾರಿ ಎನ್.ಶ್ರೀಕಾಂತ್ ಅವರಿಗೆ ತಕರಾರು ಅರ್ಜಿ ಸಲ್ಲಿಸಿದರು.







ದ್ವೇಷ ಭಾಷಣ ವಿಧೇಯಕ ಖಂಡಿಸಿ ಮೈಸೂರಲ್ಲಿ ಬಿಜೆಪಿ ಪ್ರತಿಭಟನೆ



ದ್ವೇಷ ಭಾಷಣ ಮಸೂದೆ ಖಂಡಿಸಿ, ದ್ವೇಷ ಭಾಷಣ ಮಸೂದೆ ಕರಡು ಪ್ರತಿಯನ್ನು ಹರಿದು ಹಾಕಿ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಮಂಡಲದಿಂದ ಅಗ್ರಹಾರದ ನೂರೊಂದು ಗಣಪತಿ ದೇವಸ್ಥಾನ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

> “ಅಂಬೇಡ್ಕರ್ ಸಂವಿಧಾನದಲ್ಲಿ ಭಾಷಣದ ಬಗ್ಗೆ ತಿಳಿಸಲಾಗಿದೆ. ಆದರೆ ಸರ್ಕಾರ ದ್ವೇಷ ಭಾಷಣ ಜಾರಿ ಮಾಡುವ ಮೂಲಕ ಕಾಂಗ್ರೆಸ್ ಸಂವಿಧಾನ ವಿರೋಧಿಗಳಾಗಿದ್ದಾರೆ. ಈ ಕುರಿತು ರಾಜ್ಯಪಾಲರಿಗೆ ಮನವಿ ಮಾಡುತ್ತೇವೆ. ಸುಗ್ರೀವಾಜ್ಞೆಗೂ ತಡೆ ಮಾಡುತ್ತೇವೆ.
> –ಟಿ.ಎಸ್.ಶ್ರೀವತ್ಸ, ಶಾಸಕ

ಮೈಸೂರು, ಡಿ.24(ಜಿಎ)–ರಾಜ್ಯ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ದ್ವೇಷ ಭಾಷಣ, ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ ವಿರೋಧಿಸಿ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಮಂಡಲದಿಂದ ಅಗ್ರಹಾರದ ನೂರೊಂದು ಗಣಪತಿ ದೇವಸ್ಥಾನ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಶಾಸಕ ಟಿ.ಎಸ್.ಶ್ರೀವತ್ಸ ನೇತೃತ್ವದಲ್ಲಿ 101 ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ನಂತರ ದೇವಸ್ಥಾನ ಮುಂಭಾಗ ಜಮಾಯಿಸಿ ದ್ವೇಷ ಭಾಷಣ ಮಸೂದೆ ಪ್ರತಿಯನ್ನು ಹರಿದು ಹಾಕಿ, 'ಹಿಂಪಡೆಯಿರಿ ಹಿಂಪಡೆಯಿರಿ ದ್ವೇಷ ಭಾಷಣ ಮಸೂದೆ ಹಿಂಪಡೆಯಿರಿ', 'ಸಂವಿಧಾನದಲ್ಲಿ ಇಲ್ಲದ್ದು ಈ ಮಸೂದೆಯಲ್ಲಿ ಏನಿದೆ', 'ಕಾಂಗ್ರೆಸ್ ಸರ್ಕಾರದ ಸರ್ವಾಧಿಕಾರಿ ಧೋರಣೆಗೆ ಧಿಕ್ಕಾರ', 'ಸಂವಿಧಾನ ವಿರೋಧಿ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ', 'ದ್ವೇಷ ಭಾಷಣ ಮಸೂದೆಯನ್ನು ಹಿಂಪಡೆಯಿರಿ', 'ವಾಕ್ ಸ್ವಾತಂತ್ರ್ಯ ಕಸಿದು ಕೊಳ್ಳುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ ಎಂಬ ಪ್ಲೇ ಕಾರ್ಡ್ ಹಿಡಿದು ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಅನುಷ್ಠಾನಕ್ಕೆ ತರುತ್ತಿರುವ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ ಸಂವಿಧಾನಕ್ಕೆ ವಿರುದ್ಧವಾಗಿದ್ದು, ನಾಗರಿಕರ ಮೂಲ ಹಕ್ಕುಗಳನ್ನು ಕಸಿದು ಕೊಳ್ಳುತ್ತದೆ. ವಾಕ್, ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆ ಆಗಿದೆ. ಅಂಬೇಡ್ಕರ್ ಅವರು ಸಂವಿಧಾನದಡಿ ನೀಡಿದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಂಗ್ರೆಸ್ ಸರ್ಕಾರ ಕಿತ್ತುಕೊಳ್ಳುತ್ತಿದೆ. ಈ ವಿಧೇಯಕ ಸರ್ಕಾರದ ವಿರುದ್ಧ ಮಾತನಾಡುವವರ ಬಾಯಿ ಮುಚ್ಚಿಸುವ ಸಾಧನವಾಗಿದೆ. ಇದರಡಿ ದ್ವೇಷ ಭಾಷಣಕ್ಕೆ ನೀಡಿರುವ ವ್ಯಾಖ್ಯಾನವೇ ಅಸ್ಪಷ್ಟವಾಗಿದೆ. ಸರ್ಕಾರದ ನೀತಿಗಳ ವಿರುದ್ಧ ಟೀಕೆ, ಸಾಮಾಜಿಕ ಚರ್ಚೆ, ವ್ಯಂಗ್ಯ ಮಾಡುವುದು ಅಥವಾ ಸತ್ಯ ಹೇಳುವುದನ್ನೂ ದ್ವೇಷ ಎಂದು ಪರಿಗಣಿಸುವ ಅಪಾಯವಿದೆ. ಜನರು ಭಯದಿಂದ ಮಾತನಾಡದೆ ಇರುವುದು ಸರ್ಕಾರದ ಉದ್ದೇಶವೇ ಎಂಬ ಪ್ರಶ್ನೆ ಮೂಡುತ್ತಿದೆ. ಇದು ಪ್ರಜಾಪ್ರಭುತ್ವದ ಮೂಲತತ್ವಕ್ಕೆ ಹಾನಿ ಮಾತ್ರವಲ್ಲ ಪ್ರಜಾಪ್ರಭುತ್ವದ ಕತ್ತು ಹಿಸುಕುವ ಯತ್ನ ಎಂದು ದೂರಿದರು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಇದು ಹಿಂದೂಗಳ ಭಾವನೆಗೆ ಧಕ್ಕೆ ತರುವ ಕರಾಳ ಮಸೂದೆಯಾಗಿದ್ದು, ಅಧಿವೇಶನದಲ್ಲಿ ಚರ್ಚೆಗೆ ಅವಕಾಶ ನೀಡದೆ, ವಿಪಕ್ಷಗಳು ಸಭಾತ್ಯಾಗ ಮಾಡಿದಾಗ ಅನುಮೋದನೆ ಪಡೆದುಕೊಂಡಿದ್ದಾರೆ. ಸದನದಲ್ಲಿ ಮಸೂದೆ ಮಂಡಿಸಿ, ವಿಪಕ್ಷಗಳಿಗೆ ಚರ್ಚೆಗೆ ಅವಕಾಶ ನೀಡಿ ನಂತರ ಅನುಮೋದನೆ ಪಡೆಯಬೇಕು. ಆದರೆ, ಚರ್ಚೆಯನ್ನೇ ಮಾಡದೆ ನೇರವಾಗಿ ಬಿಲ್ ಪಾಸ್ ಮಾಡಿದ್ದಾರೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ವಕ್ತಾರ ಎಂ.ಜಿ.ಮಹೇಶ್, ಮಂಡಲ ಅಧ್ಯಕ್ಷ ಗೋಪಾಲ್ ರಾಜೇಅರಸ್, ಜೋಗಿ ಮಂಜು, ಉಪೇಂದ್ರ, ರಾಕೇಶ್, ಮೋಹನ್, ಉಮೇಶ್, ನಿಶಾಂತ್, ಪ್ರದೀಪ್ ಇತರರು ಪಾಲ್ಗೊಂಡಿದ್ದರು.

ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಹಿಂದೂ ಸಂಘಟನೆಯಿಂದ ಪ್ರತಿಭಟನೆ



ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ಹಿಂಸಾಚಾರ ಖಂಡಿಸಿ ಹಿಂದೂ ರಾಷ್ಟ್ರೀಯ ಸಮನ್ವಯ ಸಮಿತಿಯಿಂದ ಡಿಸಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಡಿ.24(ಜಿಎ)–ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಹಿಂಸಾಚಾರ, ದೌರ್ಜನ್ಯ ಖಂಡಿಸಿ ಹಿಂದೂ ರಾಷ್ಟ್ರೀಯ ಸಮನ್ವಯ ಸಮಿತಿ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ಅಮಾನುಷ ಹಿಂಸೆ, ನರಮೇಧ ಮತ್ತು ಧಾರ್ಮಿಕ ದೌರ್ಜನ್ಯ ನಡೆಯುತ್ತಿದೆ. ಅಲ್ಪಸಂಖ್ಯಾತ ಹಿಂದೂ ಸಮುದಾಯದ ವಿರುದ್ಧ ನಡೆಯುತ್ತಿರುವ ಹಿಂಸಾಚಾರ, ದಾಳಿ, ಆಸ್ತಿ ನಾಶ ಮತ್ತು ಧಾರ್ಮಿಕ ಹಿಂಸೆ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಇದು ಗಂಭೀರ ಮಾನವೀಯ ಮತ್ತು ನೈತಿಕ ಸಂಕಷ್ಟಕ್ಕೆ ಕಾರಣವಾಗಿದೆ. ಇವು ನಿರಂತರವಾಗಿ ನಡೆಯುತ್ತಿರುವ ಸಂಘಟಿತ ಹಿಂಸೆಯ ಭಾಗವೆಂದು ವರದಿಗಳು ತಿಳಿಸುತ್ತಿವೆ.

ಅನ್ವರ್‌ಹಾದಿ ಹತ್ಯೆಯ ನಂತರ ದೇಶದ ಹಲವು ಭಾಗಗಳಲ್ಲಿ ಹಿಂದೂ ಸಮುದಾಯದ ಮೇಲೆ ದಾಳಿಗಳು ನಡೆದಿವೆ. ದೀಪುಚಂದ್ರದಾಸ್ ಎಂಬ ಯುವಕನ ಹತ್ಯೆಯ ಘಟನೆ ಅಲ್ಪಸಂಖ್ಯಾತರ ಭದ್ರತೆ ಕುರಿತು ಗಂಭೀರ ಆತಂಕಕ್ಕೆ ಕಾರಣವಾಗಿದೆ. ಇಂತಹ ಕೃತ್ಯಗಳು ಮೂಲಭೂತ ಮಾನವ ಹಕ್ಕುಗಳ ಉಲ್ಲಂಘನೆಯಾಗಿವೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.


ಹಿಂದೂಗಳ ಮನೆಗಳು, ದೇವಸ್ಥಾನಗಳು, ವ್ಯಾಪಾರ ಸಂಸ್ಥೆಗಳನ್ನು ಉದ್ದೇಶಪೂರ್ವಕವಾಗಿ ಗುರಿಯಾಗಿಸಲಾಗಿದೆ. ಬೆದರಿಕೆ, ಆಸ್ತಿ ನಾಶ, ಅಪಹರಣ ಮತ್ತು ಬಲವಂತದ ಧಾರ್ಮಿಕ ಪರಿವರ್ತನೆಯಂತಹ ಘಟನೆಗಳು ನಡೆಯುತ್ತಿವೆ. ಇದರಿಂದ ಹಿಂದೂಗಳಲ್ಲಿ ಭೀತಿಯ ವಾತಾವರಣ ನಿರ್ಮಾಣವಾಗಿದೆ. ಇಂತಹ ದಾಳಿಗಳು 2013, 2014 ಮತ್ತು 2018ರ ಚುನಾವಣಾ ಅವಧಿಯಲ್ಲೂ ನಡೆದಿದ್ದವು. 2021ರ ದುರ್ಗಾಪೂಜೆ ಸಂದರ್ಭದಲ್ಲಿ ನೂರಾರು ದೇವಸ್ಥಾನಗಳು ಮತ್ತು ಮನೆಗಳ ಮೇಲೆ ದಾಳಿ ನಡೆದಿದ್ದು, ಅನೇಕರು ಪ್ರಾಣ ಕಳೆದುಕೊಂಡಿದ್ದರು. ಇದೀಗ ಮತ್ತೆ ಪುನರಾವರ್ತನೆಯಾಗಿದ್ದು, ಬಾಂಗ್ಲಾದೇಶದ ಹಿಂದೂಗಳಿಗೆ ತಕ್ಷಣ ರಕ್ಷಣೆ ಒದಗಿಸಲು ಕೇಂದ್ರ ಸರ್ಕಾರ ತುರ್ತು ಮಧ್ಯಪ್ರವೇಶ ಮಾಡಿ ಜಾಗತಿಕ ಮಟ್ಟದಲ್ಲಿ ಹಿಂದೂಗಳ ಸುರಕ್ಷತೆ ಖಚಿತಪಡಿಸಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಮುಖಂಡ ಗೋಪಾಲ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಪ್ರಗತಿಪರ ರೈತರಿಗೆ ಸನ್ಮಾನ...



ಮೈಸೂರಿನ ಹೊಸಮಠದ ನಟರಾಜ ಸಭಾಂಗಣದಲ್ಲಿ ಬಸವ ಭಾರತ ಫೌಂಡೇಷನ್‌ನಿಂದ ರೈತ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ಶರಣ ಒಕ್ಕಲಿಗ ಮುದ್ದಣ್ಣರ ಸ್ಮರಣೋತ್ಸವದಲ್ಲಿ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು. ಈ ವೇಳೆ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ವಿಶ್ವಗುರು ಬಸವಣ್ಣ ವೈರಾಗ್ಯನಿಧಿ ಅಕ್ಕಮಹದೇವಿ ವಿರಕ್ತಾಶ್ರಮದ ಮಹಾಲಿಂಗ ಸ್ವಾಮೀಜಿ, ಶರಣ ತತ್ವ ಚಿಂತಕ ಶಿವಬುದ್ಧಿ, ಫೌಂಡೇಷನ್ ಅಧ್ಯಕ್ಷ ಶರಣ ವಿ.ಶಿವರುದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಆಚಾರ್ಯತ್ರಯರ ಜಯಂತಿ



ಮೈಸೂರಿನ ಬಿಇಎಂಎಲ್ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ಶ್ರೀ ಆಚಾರ್ಯತ್ರಯರ ಜಯಂತಿ, ನಿವೃತ್ತ ಸದಸ್ಯರಿಗೆ ಸನ್ಮಾನ, ವಿದ್ಯಾರ್ಥಿವೇತನ ವಿತರಣೆ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ 2026ನೇ ಸಾಲಿನ ದಿನದರ್ಶಿಕೆಯನ್ನು ಬೆಮೆಲ್ ಸಂಸ್ಥೆಯ ನಿರ್ದೇಶಕ ದೇವಿಪ್ರಸಾದ್ ಸತ್ಪತಿ ಬಿಡುಗಡೆ ಮಾಡಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜಿಲ್ಲಾ ಪ್ರತಿನಿಧಿ ಡಾ.ಕೆ.ವಿ.ಲಕ್ಷ್ಮೀದೇವಿ, ರಾಜ್ಯ ಸಂಘಟನಾ ಕಾರ್ಯದರ್ಶಿ ನಂ.ಶ್ರೀಕಂಠಕುಮಾರ್, ವೆಂಕಟೇಶ್, ಎಂ.ಗುರುಪ್ರಸಾದ್, ಡಿ.ಎನ್.ಕೇಶವಮೂರ್ತಿ, ಎಸ್.ಬಿ.ಶ್ರೀನಿವಾಸ್, ಸಂಘದ ಗೌರವ ಅಧ್ಯಕ್ಷ ಹೆಚ್.ಆರ್.ವೆಂಕಟ್ ಕೃಷ್ಣಪ್ರಸಾದ್, ಅಧ್ಯಕ್ಷ ಗಣೇಶ್ ಜಿ.ಗುರ್ಖಿ, ಪದಾಧಿಕಾರಿಗಳಾದ ವಿ.ವಿಠಲ, ಹೆಚ್.ಎಸ್.ಮಂಜುನಾಥ್, ಎಂ.ಬಾಲಕೃಷ್ಣ, ಎ.ಎನ್.ರಾಂ ಪ್ರಕಾಶ್, ಆರ್.ದಿಲೀಪ್, ಎಂ.ಜಿ.ಪವನ್‌ಕುಮಾರ್, ಆರ್.ಡಿ.ಪಂಡಿತ್, ಕೃಷ್ಣಕಾಂತ, ವಿ.ಎಸ್.ಗೋವಿಂದಪ್ರಸಾದ್ ಇತರರು ಉಪಸ್ಥಿತರಿದ್ದರು.

ಮೈಸೂರು ವಿವಿ 106ನೇ ವಾರ್ಷಿಕ ಘಟಿಕೋತ್ಸವ

ಮೈಸೂರು, ಡಿ. 24– ಮೈಸೂರು ವಿಶ್ವವಿದ್ಯಾನಿಲಯದ 106ನೇ ವಾರ್ಷಿಕ ಘಟಿಕೋತ್ಸವವನ್ನು ಜ.5ರಂದು ಬೆಳಗ್ಗೆ 11.30 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಏರ್ಪಡಿಸಲಾಗಿದೆ. ರಾಜ್ಯಪಾಲರು ಹಾಗೂ ಕುಲಾಧಿಪತಿ ಥಾವರ್ ಚಂದ್ ಗೆಹ್ಲೋಟ್ ಅಧ್ಯಕ್ಷತೆ ವಹಿಸುವರು. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ವಿಶ್ರಾಂತ ಅಧ್ಯಕ್ಷ ಡಾ.ಎಸ್.ಸೋಮನಾಥ್ ಘಟಿಕೋತ್ಸವ ಭಾಷಣ ಮಾಡುವರು. ಉನ್ನತ ಶಿಕ್ಷಣ ಸಚಿವರು ಆದ ಮೈಸೂರು ವಿವಿ ಸಮ ಕುಲಾಧಿಪತಿ ಡಾ.ಎಂ.ಸಿ.ಸುಧಾಕರ್ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ಜ.4ಕ್ಕೆ ಗಾಣಿಗರ ಸಂಘದಿಂದ ಪ್ರತಿಭಾ ಪುರಸ್ಕಾರ, ಕ್ಯಾಲೆಂಡರ್ ಬಿಡುಗಡೆ

ಮೈಸೂರು, ಡಿ.24(ಜಿಎ)–ಮೈಸೂರು ಜಿಲ್ಲಾ ಗಾಣಿಗರ ಸಂಘದ ವತಿಯಿಂದ ಜ.4ರಂದು ಬೆಳಗ್ಗೆ 10.30ಕ್ಕೆ ಜೆಎಸ್‌ಎಸ್ ಆಸ್ಪತ್ರೆ ಬಳಿಯ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸಭಾಂಗಣದಲ್ಲಿ ಸಮುದಾಯದವರಿಗೆ ಪ್ರತಿಭಾ ಪುರಸ್ಕಾರ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ ಹಾಗೂ ನೂತನ ಸಾಲಿನ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಉಮೇಶ್ ಈ ವಿಷಯ ತಿಳಿಸಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮ ಉದ್ಘಾಟಿಸುವರು. ರಾಜ್ಯ ಗಾಣಿಗರ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಶ್ವಾಸ್‌ಕುಮಾರ್, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್ ಗೌಡ, ಜಿ.ಡಿ.ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಮಾಜಿ ಸಚಿವ ಸಾ.ರಾ.ಮಹೇಶ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಅನಂತು, ಅರಣ್ಯ ವಸತಿ ವಿಹಾರ ಧಾಮಗಳ ಮಾಜಿ ಅಧ್ಯಕ್ಷ ಅಪ್ಪಣ್ಣ, ಬಿಜೆಪಿ ಓಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಮತ್ತಿತರರು ವಿದ್ಯಾರ್ಥಿಗಳಿಗೆ ಮತ್ತು ಸಮಾಜಕ್ಕೆ ಹಿತ ನುಡಿ ಆಡುವರು ಎಂದರು. ಸುದ್ದಿಗೋಷ್ಠಿಯಲ್ಲಿ ಮಹದೇವ ಗಾಣಿಗ, ರಮೇಶ್, ಮಂಜುನಾಥ್, ವಿಜಯ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



ಮೆರವಣಿಗೆಗೆ ಚಾಲನೆ...

ಕಿಚ್ಚ ಸುದೀಪ್ ನಟನೆಯ ಮಾರ್ಕ್ ಚಿತ್ರದ ಸ್ಟಾರ್ಸ್ ಮೆರವಣಿಗೆಗೆ ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಯುವ ಉದ್ಯಮಿಯೂ ಆದ ಚಿತ್ರ ನಿರ್ಮಾಪಕ ಸಂದೇಶ್ ಅವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ ಹಾಗೂ ನೂರಾರು ಸಂಖ್ಯೆಯಲ್ಲಿ ಸುದೀಪ್ ಅಭಿಮಾನಿಗಳು ಉಪಸ್ಥಿತರಿದ್ದರು.

ಸೀ ಫುಡ್, ಅವರೆಕಾಳು ದೇಸಿ ಆಹಾರ ಮೇಳ

ಮೈಸೂರು,ಡಿ.24– ಕ್ರಿಸ್‌ಮಸ್ ಮತ್ತು ಹೊಸ ವರ್ಷ–2026 ರ ಪ್ರಯುಕ್ತ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ ಹೋಟೆಲ್ ಮಯೂರ ಹೊಯ್ಸಳ ಮೈಸೂರು ವತಿಯಿಂದ ಡಿಸೆಂಬರ್ 25 ಮತ್ತು 26ರಂದು ಸೀ ಫುಡ್ ಆಹಾರ ಮೇಳ ಹಾಗೂ ಡಿಸೆಂಬರ್ 31 ಮತ್ತು ಜನವರಿ 1ರಂದು ಅವರೆಕಾಳು ದೇಸಿ ಆಹಾರ ಮೇಳವನ್ನು ಹೋಟೆಲ್ ಮಯೂರ ಹೊಯ್ಸಳದಲ್ಲಿ ಸಂಜೆ 7ರಿಂದ 10.30 ಗಂಟೆಯವರೆಗೆ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ. ಸಂ: 8970650014 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ಮನುಸ್ಮೃತಿ ದಹನದ ದಿನದ ಅಂಗವಾಗಿ ವಿಚಾರ ಸಂಕಿರಣ


ಮೈಸೂರು, ಡಿ.24–ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಮತ್ತು ಮೈಸೂರು ವಿವಿಯ ಸಂಶೋಧಕರ ಸಂಘದ ಸಂಯುಕ್ತಾಶ್ರಯದಲ್ಲಿ 98ನೇ ವರ್ಷದ ಮನುಸ್ಮೃತಿ ದಹನ ದಿನದ ಅಂಗವಾಗಿ ಡಿ.25ರಂದು ಬೆಳಗ್ಗೆ 10.30ಕ್ಕೆ ವಿಚಾರ ಸಂಕಿರಣ ಏರ್ಪಡಿಸಲಾಗಿದೆ.

ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ನಡೆಯಲಿರುವ ವಿಚಾರ ಸಂಕಿರಣವನ್ನು ಉರಿಲಿಂಗ ಪೆದ್ದಿ ಮಠದ ಪೀಠಾಧಿಪತಿ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಉದ್ಘಾಟಿಸಲಿದ್ದು, ಪ್ರೊ. ಕಾಳೇಗೌಡ ನಾಗವಾರ ಅಧ್ಯಕ್ಷತೆ ವಹಿಸಲಿದ್ದಾರೆ. ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಪ್ರಾಸ್ತಾವಿಕ ನುಡಿ ನುಡಿಯಲಿದ್ದಾರೆ.

'ಬಾಬಾ ಸಾಹೇಬ್ ಅಂಬೇಡ್ಕರ್ ಮನುಸ್ಮೃತಿ ಸುಟ್ಟಿದ್ದು ಏಕೆ?' ವಿಷಯವನ್ನು ಹಿರಿಯ ವಿಚಾರವಾದಿ ಶಿವಶಂಕರ್ ಮಂಡಿಸಲಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಡಿ.ಚಂದ್ರಶೇಖರಯ್ಯ, ವಿಚಾರವಾದಿ ಸಿ.ಹರಕುಮಾರ್, ಸಂಶೋಧಕರ ಸಂಘದ ಉಪಾಧ್ಯಕ್ಷ ಮಲ್ಲೇಶ್ ಬಾಚಹಳ್ಳಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಹಿರಿಯ ವೈದ್ಯಾಧಿಕಾರಿ ಡಾ.ಎಸ್.ರಂಗನಾಥಯ್ಯ, ಹಿರಿಯ ದಸಂಸ ಹೋರಾಟಗಾರ ಹರಿಹರ ಆನಂದಸ್ವಾಮಿ, ಹಿರಿಯ ಜಾನಪದ ವಿದ್ವಾಂಸ ಡಾ. ಜನಾರ್ಧನ್ ಜೆನ್ನಿ, ಹಿರಿಯ ವಕೀಲ ತಿಮ್ಮಯ್ಯ ಅವರನ್ನು ಅಭಿನಂದಿಸಲಾಗುವುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ನಿಧನ



ಶಕುಂತಲಾ ಜೆ. ಕುಮಾರ್

ಮೈಸೂರು, ಡಿ. 24–ಮೈಸೂರಿನ ವಿ.ವಿ.ಮೊಹಲ್ಲಾದ ಗೋಕುಲಂ ರಸ್ತೆ ನಿವಾಸಿ ದಿವಂಗತ ಡಾ.ಹೆಚ್.ವಿ.ಜೀವೇಂದ್ರ ಕುಮಾರ್ ಅವರ ಪತ್ನಿ ಶಕುಂತಲಾ ಜೆ.ಕುಮಾರ್ (90) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಆರ್.ಸಣ್ಣರಾಮೇಗೌಡ



ಮೈಸೂರಿನ ವಿನಾಯಕ ನಗರ ನಿವಾಸಿ, ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಲೈಬ್ರೇರಿಯನ್ ಎಂ.ಆರ್.ಸಣ್ಣರಾಮೇಗೌಡ (93) ಅವರು ನಿಧನರಾದರು. ಮೃತರು ಪತ್ನಿ, ನಾಲ್ವರು ಮಕ್ಕಳು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.12.2025 ಗುರುವಾರ, ಮಳೆ ನಕ್ಷತ್ರ: ಮೂಲ, 16.12.2025 ರಿಂದ 28.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಹಾರ್ಟ್ ಸಂಸ್ಥೆ :** ಸಂಧಿವಾತ ಮತ್ತು ಮೂಳೆ ರೋಗ ಕುರಿತು ಉಚಿತ ತಪಾಸಣೆ, ರಕ್ತ ಪರೀಕ್ಷೆ, ಚಿಕಿತ್ಸಾ ಶಿಬಿರ, ಸ್ಥಳ: ಸಂಧಿವಾತ ಮತ್ತು ಕೀಲು ರೋಗ ಚಿಕಿತ್ಸಾ ಕೇಂದ್ರ, ಅಗ್ರಹಾರ, ಬೆಳಗ್ಗೆ 9 ರಿಂದ.
- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಗಾಣಿಗ ಮಹಾಸಭಾ :** ಗಾಣಿಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಅಭಿನಂದನಾ ಸಮಾರಂಭ, ಕ್ಯಾಲೆಂಡರ್ ಬಿಡುಗಡೆ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಮಹಾಸಭಾ ಅಧ್ಯಕ್ಷ ಡಾ. ಕೆ. ವಿಜಯಕುಮಾರ್, ಕ್ಯಾಲೆಂಡರ್ ಬಿಡುಗಡೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಶಾಸಕರಾದ ಡಾ. ಡಿ. ತಿಮ್ಮಯ್ಯ, ಶ್ರೀವತ್ಸ, ಜಿ.ಡಿ. ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಡಾ. ಶುಶ್ರುತ್‌ಗೌಡ, ಡಾ. ಯೋಗೇಶ್, ಕುಮಾರ್, ಸ್ಥಳ: ಗಾಣಿಗರ ವಿದ್ಯಾರ್ಥಿ ನಿಲಯ, ಈಜುಕೊಳದ ರಸ್ತೆ, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.
- **ಕರ್ನಾಟಕ ಪ್ರತಿಭಾ ಅಕಾಡೆಮಿ, ಮೈಸೂರು ಜಿಲ್ಲಾ ಘಟಕ :** ಪ್ರತಿಭಾ ಪುರಸ್ಕಾರ, ಉದ್ಘಾಟನೆ : ಶಾಸಕ ಅನಿಲ್ ಚಿಕ್ಕಮಾದು, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ವಿದ್ಯಾರ್ಥಿಗಳಿಗೆ ಸನ್ಮಾನಿಸುವವರು : ಶಾಸಕ ಡಿ. ರವಿಶಂಕರ್, ಪ್ರಾಸ್ತಾವಿಕ ನುಡಿ : ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಡಾ. ಎ.ಬಿ. ರಾಮಚಂದ್ರಪ್ಪ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.
- **ತ್ರಯವಿನ್ಯಾಸ್ ಶ್ರೀವಿದ್ಯಾ ಫೌಂಡೇಷನ್, ಓರಿಯೆಂಟಲ್ ರಿಸರ್ಚ್ ಫೌಂಡೇಷನ್ :** ಶ್ರೀವಿದ್ಯಾ ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಶ್ರೀ ವಿದ್ಯಾರಣ್ಯ ಭಾರತಿ ಸ್ವಾಮೀಜಿ, ಶ್ರೀ ಮಧುಸೂದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು : ಶಾಸಕರಾದ ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮಾಜಿ ಶಾಸಕ ಪಿ. ಮಂಜುನಾಥ್, ಸ್ಥಳ: ಶ್ರೀ ಕೃಷ್ಣರಾಜ ಒಡೆಯರ್ ಸೆನೆಟ್ ಭವನ, ಮಾನಸಗಂಗೋತ್ರಿ, ಸಂಜೆ 5.30ಕ್ಕೆ.
- **ಪರಂಪರೆ :** ಶ್ರೀ ಮದ್ಭಾಗವತ ಉಪನ್ಯಾಸ ಸರಣಿ, ಸುರಭಿ ಗಾನ ಕಲಾಮಂದಿರದ ವಿದ್ಯಾರ್ಥಿಗಳಿಂದ ಭಜನೆ, ಡಾ. ವೀಣಾ ಬನ್ನಂಜೆ ಅವರಿಂದ ಭಾಗವತ ಉಪನ್ಯಾಸ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಎ.ಎಸ್. ನಾಗಲಕ್ಷ್ಮಿ ಹಾಗೂ ಎ.ಎನ್. ಶೀಲಾ, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.05 ಕ್ಯಾನ್ಸರ್–ತಪ್ಪು ತಿಳುವಳಿಕೆ ಈ ಕುರಿತ ಪ್ರಾಯೋಜಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಡಿನಲ್ಲಿನ ಕಥೆಗಳು.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 6.50 ಕೃಷಿರಂಗ, ಕಿಸಾನ್‌ವಾಣಿ, ಪ್ರಾಯೋಜಕರು–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ. ವಿಶೇಷ ಕಾರ್ಯಕ್ರಮ: ಮಣ್ಣು ಬದುಕಿನ ಮೂಲ, ಪ್ರಕೃತಿಯ ಒಡಲು, ಭಾಗವಹಿಸುತ್ತಾರೆ–ಮೈಸೂರು ತಾಲ್ಲೂಕು ಎಲಚ ಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಬಿ.ಎಂ.ಗೌರಿಶಂಕರ್, ಡಿ.ಕೆ.ಸಾನಿಕ, ಟಿ.ಕೆ. ಗಾನವಿ, ಸಂಹಿತ ಎನ್. ಗೌಡ ಮತ್ತು ಎಂ. ಅನನ್ಯ, ಪ್ರಸ್ತುತಿ–ಎನ್. ಕೇಶವ ಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ನಾಟಕ – ಪ್ರಳಯ

- **ಭರತಾಂಜಲಿ ನೃತ್ಯ ಶಾಲೆ :** ಸಮರ್ಪಣೆ–2025 ಮತ್ತು ಸಮಾಗಮ, ಡಾ. ಶೀಲಾ ಶ್ರೀಧರ್ ಮತ್ತು ಶಾಶ್ವತಿ ರಘುನಂದನ್ ಅವರ ಶಿಷ್ಯರಿಂದ ಭರತನಾಟ್ಯ ಪ್ರದರ್ಶನ, ಮುಖ್ಯ ಅತಿಥಿಗಳು : ಪ್ರಮತಿ ಹಿಲ್‌ವ್ಯೂ ಅಕಾಡೆಮಿ ಕಾರ್ಯದರ್ಶಿ ಹೆಚ್.ವಿ. ರಾಜೀವ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಿ.ಟಿ. ಪ್ರಕಾಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಶಿವಮೊಗ್ಗದ ನಟನಂ ಬಾಲನಾಯ ಕೇಂದ್ರದ ಸಂಸ್ಥಾಪಕ, ನಿರ್ದೇಶಕ ಎಸ್. ಕೇಶವಕುಮಾರ್ ಪಿಳ್ಳೈ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6 ರಿಂದ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀವೇಣುಗೋಪಾಲಸ್ವಾಮಿ ದೇವಸ್ಥಾನ, ತ್ಯಾಗರಾಜ ರಸ್ತೆ, ಸಂಜೆ 6.30 ರಿಂದ.
- **ಶ್ರೀ ಮಹಾಜನ ಸಭಾ ಟ್ರಸ್ಟ್ :** ತಿರುಪ್ಪಾವೈ ಪಾರಾಯಣ, ಡಾ. ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾದೇವಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್ ಆವರಣ, ಶ್ರೀ ರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6.30 ರಿಂದ.
- **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ 'ವಿಗಡ ವಿಕ್ರಮರಾಯ' ನಾಟಕ ಪ್ರದರ್ಶನ, ನಿರ್ದೇಶನ : ಸಾಲಿಯಾನ್ ಉಮೇಶ್ ನಾರಾಯಣ, ಸ್ಥಳ: ವನರಂಗ, ರಂಗಾಯಣ, ಸಂಜೆ 6.30ಕ್ಕೆ.
- **ನಾಗಮಂಗಲ ತಾಲೂಕು ಮೈಸೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ :** ವಾರ್ಷಿಕ ಮಹಾಸಭೆ, ಕ್ಯಾಲೆಂಡರ್ ಬಿಡುಗಡೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ವಿಶ್ವಮಂಜುಸ್ವಾಮಿ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.
- **ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ :** ಕ್ರಿಸ್‌ಮಸ್ ಮತ್ತು ಹೊಸ ವರ್ಷ–2026ರ ಪ್ರಯುಕ್ತ ಸೀ ಫುಡ್ ಅಹಾರ ಮೇಳ, ಸ್ಥಳ: ಹೋಟೆಲ್ ಮಯೂರ ಹೊಯ್ಸಳ, ಸಂಜೆ 7 ರಿಂದ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣ ಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ನೈಸ್ ಯೋಜನೆ ಸಂಬಂಧ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ ರಿಟ್‌ನಲ್ಲಿ ನನ್ನ ಪಾರ್ಟಿ ಮಾಡಿದ್ದಾರೆ

● ರಾಜ್ಯ ಸರ್ಕಾರದ ವಿರುದ್ಧ ಮಾಜಿ ಪ್ರಧಾನಿ ದೇವೇಗೌಡರ ವಾಗ್ದಾಳಿ ● ಈ ಒಪ್ಪಂದ ಆದಾಗ ಸಿದ್ದರಾಮಯ್ಯ ಹಣಕಾಸು ಮಂತ್ರಿ ಆಗಿದ್ದರು! ● ಇಳಿವಯಸ್ಸಿನಲ್ಲೂ ನಾನು ವಕೀಲರಿಗೆ ಶುಲ್ಕ ಕೊಟ್ಟು ಹೋರಾಡಬೇಕಿದೆ



ಬುಧವಾರ ಮಾಜಿ ಪ್ರಧಾನಿ ದೇವೇಗೌಡರು ಬೆಂಗಳೂರಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದರು.

ಬೆಂಗಳೂರು, ಡಿ.24– ಬೆಂಗಳೂರು–ಮೈಸೂರು ಇನ್ಫ್ರಾಸ್ಟ್ರಕ್ಚರ್ ಯೋಜನೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನಲ್ಲಿ ರಿಟ್ ಅರ್ಜಿಯೊಂದು ಸಲ್ಲಿಕೆಯಾಗಿದ್ದು, ಅದರಲ್ಲಿ ನನ್ನನ್ನು ಕೂಡ ಪಾರ್ಟಿ ಮಾಡಿದ್ದಾರೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ತಿಳಿಸಿದ್ದಾರೆ.

ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಅರ್ಜಿಯಲ್ಲಿ ರಾಜ್ಯ ಸರ್ಕಾರ, ಕೆಲವು ರೈತರು ಹಾಗೂ ನನ್ನನ್ನೂ ಸೇರಿಸಿ ಪಾರ್ಟಿ ಮಾಡಲಾಗಿದೆ ಎಂದರು.

ನಾನು ಈ ರಾಜ್ಯದಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಸಿದ್ದರಾಮಯ್ಯ ಅವರು ಹಣಕಾಸು ಸಚಿವರಾಗಿದ್ದರು. ಬಿಎಂಐಸಿ ಯೋಜನೆಗೆ ಹಣಕಾಸು ಇಲಾಖೆಯ ಸಹಮತಿಯೂ ಇತ್ತು. ಆಗ ಯೋಜನೆಗೆ ಒಪ್ಪಂದ (ಎಂಓಯು) ಮಾಡಿಕೊಳ್ಳಲಾಗಿತ್ತು. ಆ ಒಪ್ಪಂದದ ಎಲ್ಲಾ ಮಾಹಿತಿಯೂ ಅವರಿಗೆ ಕೂಡ ಇದೆ ಎಂದು ಮಾಜಿ ಪ್ರಧಾನಿಗಳು ಹೇಳಿದರು.

ಈ ಯೋಜನೆಯು ಬೆಂಗಳೂರು ನಗರ, ಮಂಡ್ಯ, ಮೈಸೂರು ಸೇರಿದಂತೆ ನಾಲ್ಕು ಜಿಲ್ಲೆಗಳಿಗೆ ಸಂಬಂಧಿಸಿದ್ದಾಗಿತ್ತು. ಐದು ಟೌನ್‌ಶಿಪ್‌ಗಳು, ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡುವ ಬಗ್ಗೆ ಒಪ್ಪಂದವಾಗಿತ್ತು. ಈ ಇಳಿವಯಸ್ಸಿನಲ್ಲೂ ನಾನು ವಕೀಲರಿಗೆ ಶುಲ್ಕ ಕೊಟ್ಟು ನ್ಯಾಯಾಲಯದಲ್ಲಿ ಹೋರಾಟ ಮಾಡಬೇಕಾಗಿದೆ. ನೈಸ್ ಕಂಪನಿ ವಿಚಾರದಲ್ಲಿ ಕಾನೂನು ಸಲಹೆಗಾರರಿಗೆ 55 ಲಕ್ಷ ರೂಪಾಯಿ ಕೊಡುತ್ತಿದ್ದಾರಂತೆ. ರಾಜ್ಯ ಸರ್ಕಾರದ ಅಡ್ವೋಕೇಟ್ ಜನರಲ್, ಕಾನೂನು ಸಲಹೆಗಾರರು ಇದ್ದರೂ ಸಹ ಇನ್ನೊಬ್ಬರನ್ನು ನೈಸ್ ಕಂಪನಿಗೆ ಸಂಬಂಧಿಸಿದಂತೆ ಕಾನೂನು ಸಲಹೆಗಾರರನ್ನು ನೇಮಿಸಿಕೊಂಡಿದ್ದಾರೆ ಎಂದು ಅವರು ಕಟುವಾಗಿ ಟೀಕಿಸಿದರು.

ನನಗೆ ಇನ್ನೂ ಹೋರಾಟದ ಕೆಚ್ಚಿದೆ. ಹೋರಾಟ ಮಾಡುವ ಶಕ್ತಿ ಇದೆ. ಒಂದು ಲಕ್ಷಕ್ಕೂ ಹೆಚ್ಚು ನೌಕರರು ಹೊರಗುತ್ತಿಗೆ ಮೂಲಕ ಕೆಲಸ ಮಾಡುತ್ತಿದ್ದಾರೆ. ಲಕ್ಷಾಂತರ ಹುದ್ದೆಗಳು ಭರ್ತಿಯಾಗದೇ ಹಾಗೆಯೇ ಖಾಲಿ ಉಳಿದಿವೆ. ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿದರೆ ಎಷ್ಟು ಹೊರಗುತ್ತಿಗೆ ನೌಕರರು ಕೆಲಸ ಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ ಎಂದು ದೇವೇಗೌಡರು ದೂರಿದರು.

ಈಗಿನ ಮುಖ್ಯಮಂತ್ರಿಗಳಿಗೆ ಬಡವರ ಬಗ್ಗೆ ಎಲ್ಲಿಲ್ಲದ ಅನುಕಂಪ ಇದೆ. ಮುಖ್ಯಮಂತ್ರಿ ಕಚೇರಿಯಲ್ಲೇ ಏಳೆಂಟು ಮಂದಿ ಕ್ಯಾಬಿನೆಟ್ ದರ್ಜೆ ಪಡೆದುಕೊಂಡು ಕರ್ತವ್ಯ ನಿರ್ವಹಣೆ ಮಾಡುತ್ತಿದ್ದಾರೆ. ಇದು ಇವರ ಆಡಳಿತದ ವೈಖರಿ ಎಂದು ದೇವೇಗೌಡರು ಲೇವಡಿ ಮಾಡಿದರು.

ಕೇಂದ್ರವನ್ನು ದೂರಿದರೆ ಪ್ರಯೋಜನ ಇಲ್ಲ: ರಾಜ್ಯ ಸರ್ಕಾರ ಪ್ರತೀ ವಿಷಯಕ್ಕೂ ಕೇಂದ್ರ ಸರ್ಕಾರವನ್ನು ದೂರುತ್ತಾ ಕೂತರೆ ಪ್ರಯೋಜನ ಇಲ್ಲ. ಅದರಿಂದ ಏನೂ ಸಾಧನೆ ಮಾಡಲು ಸಾಧ್ಯವಿಲ್ಲ. ಸಿದ್ದರಾಮಯ್ಯ ಅವರು ಹಣಕಾಸು ಸಚಿವರಾಗಿದ್ದಾಗ ಕೇಂದ್ರ ಸರ್ಕಾರದಲ್ಲಿ ಡಾ. ಮನಮೋಹನ ಸಿಂಗ್ ಅವರು ಹಣಕಾಸು ಸಚಿವರಾಗಿದ್ದರು. ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ನೀಡಲಾಗಿದ್ದ ಭರವಸೆಯಂತೆ ರೈತರ ಸಾಲದ ಮೇಲಿನ ಸುಸ್ತಿ ಬಡ್ಡಿ ಮನ್ನಾ ಮಾಡಲು ಪತ್ರ ಬರೆದಾಗ ಕೇಂದ್ರ ಮನಮೋಹನ್ ಸಿಂಗ್, ಆಗಿನ ಪ್ರಧಾನಿ ಪಿ.ವಿ. ನರಸಿಂಹರಾವ್, ನಬಾರ್ಡ್ ಯಾರೂ ಕೂಡ ಒಪ್ಪಿಗೆ ಕೊಡಲಿಲ್ಲ ಎಂದು ದೇವೇಗೌಡರು ಹೇಳಿದರು.

ಈಗ ನೋಡಿದರೆ ರಾಜ್ಯ ಸರ್ಕಾರ ಬೆಳಗಿನಿಂದ ಸಂಜೆಯವರೆಗೂ ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತ ಕಾಲಹರಣ ಮಾಡುತ್ತಿದೆ. ಹೀಗೆ ಟೀಕೆ ಮಾಡುತ್ತಾ ಹೋದರೆ ಆಗುವ ಪ್ರಯೋಜನ ಏನು. ಮುಖ್ಯಮಂತ್ರಿ ಆದವರು ಪ್ರಧಾನಿಗಳ ಅಧ್ಯಕ್ಷತೆಯಲ್ಲಿ ನಡೆಯುವ ದಿಶಾ ಸಭೆಗೆ ಹೋಗಿ ರಾಜ್ಯಕ್ಕೆ ಏನು ಬೇಕು ಎಂಬುದರ ಬಗ್ಗೆ ಚರ್ಚೆ ಮಾಡಿ ಹೋರಾಟ ಮಾಡಬೇಕು. ಸಂಸದರಾಗಿ ನಾವು ನಮ್ಮ ಕರ್ತವ್ಯ ನಿಭಾಯಿಸುವುದರಲ್ಲಿ ಹಿಂದೆ ಬೀಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಪಕ್ಷದ ಸಮಾವೇಶಗಳನ್ನು ಮಾಡುತ್ತೇವೆ: ಜನವರಿ 30ರಂದು ಸಂಸತ್‌ನ ಜಂಟಿ ಅಧಿವೇಶನ ಶುರುವಾಗುತ್ತಿದ್ದು, ಅದಕ್ಕೂ ಮೊದಲೇ ಜನವರಿ 23ರಿಂದ 25ರ ನಡುವೆ ಹಾಸನ ಹಾಗೂ ಬಾಗಲಕೋಟೆ ಭಾಗದಲ್ಲಿ ಪಕ್ಷದ ವತಿಯಿಂದ ತಲಾ ಒಂದು ಸಮಾವೇಶ ನಡೆಸಲಾಗುವುದು. ಈ ಬಗ್ಗೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ತಿಳಿಸಿದ್ದೇನೆ. ರಾಜ್ಯ ಸರ್ಕಾರದ ವೈಫಲ್ಯಗಳು ಕುಮಾರಸ್ವಾಮಿ ಆಡಳಿತಾವಧಿಯಲ್ಲಿ ಜಾರಿಗೊಳಿಸಿದ್ದ ಜನಪರ ಕಾರ್ಯಕ್ರಮಗಳನ್ನು ಮುಂದುವರೆಸದಿರುವುದರ ಬಗ್ಗೆ ಸಮಾವೇಶದಲ್ಲಿ ಪ್ರಸ್ತಾಪಿಸಲಾಗುವುದು ಎಂದರು.

ಗಾಂಧೀಜಿ ಮೇಲೆ ಕಾಂಗ್ರೆಸ್ ಅಕ್ಕರೆ ಗೊತ್ತಿದೆ!!

ನರೇಗಾ ಯೋಜನೆ ಹೆಸರನ್ನು ಬದಲಾವಣೆ ಮಾಡಿದರು ಎನ್ನುವ ಕಾರಣಕ್ಕೆ ಕಾಂಗ್ರೆಸ್ ನಾಯಕರು ನರೇಂದ್ರ ಮೋದಿ ಅವರ ಬಗ್ಗೆ ಟೀಕೆ ಮಾಡುತ್ತಿದ್ದಾರೆ. ಆದರೆ, ಕಾಂಗ್ರೆಸ್‌ನವರು ಆಡಳಿತ ನಡೆಸುತ್ತಿದ್ದಾಗ ಮಹಾತ್ಮ ಗಾಂಧೀಜಿ ಅವರಿಗೆ ಎಷ್ಟು ಗೌರವ ನೀಡಿದ್ದಾರೆ ಎನ್ನುವುದು ನನಗೆ ಗೊತ್ತಿದೆ ಎಂದು ಮಾಜಿ ಪ್ರಧಾನಿಗಳಾದ ದೇವೇಗೌಡರು ಕಟುವಾಗಿ ಟೀಕಿಸಿದರು.

ನರೇಗಾ ಹೆಸರು ಬದಲಾವಣೆ ವಿಚಾರಕ್ಕೆ ಕಾಂಗ್ರೆಸ್ ಪ್ರತಿರೋಧ ವಿಚಾರದ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು; ಮಹಾತ್ಮಾ ಗಾಂಧಿ ಅವರ ಬಗ್ಗೆ ಇಷ್ಟೊಂದು ಕಾಳಜಿ, ಕಳಕಳಿ ಇರುವವರು ಇಂದಿರಾ ಗಾಂಧಿ, ರಾಜೀವ್ ಗಾಂಧಿ ಆಳ್ವಿಕೆ ಮಾಡಿದ ಸಂದರ್ಭದಲ್ಲಿ ಎಲ್ಲಿಯಾದರೂ ಗಾಂಧೀಜಿ ಅವರ ಒಂದು ಪೋಸ್ಟರ್ ನೋಡಿದೀರಾ, ಎಲ್ಲಿಯಾದರೂ ಮಹಾತ್ಮಾ ಗಾಂಧಿ ಅವರ ಫೋಟೋ ಇಟ್ಟುಕೊಂಡು ಚುನಾವಣೆ ನಡೆಸಿದ್ದಾರಾ ಎಂದು ಕಿಡಿಕಾರಿದರು.

ಈಗ ನೋಡಿದರೆ ಕಾಂಗ್ರೆಸ್‌ನವರು ಇಷ್ಟು ಜೋರಾಗಿ ಪ್ರತಿಭಟನೆ ಮಾಡುತ್ತಿದ್ದಾರೆ! ಕರ್ನಾಟಕದ ಗ್ಯಾರಂಟಿ ಬಿಹಾರದವರೆಗೂ ಹೋಯಿತು. ಅಲ್ಲಿ ವರ್ಕ್ ಆಗಲಿಲ್ಲ. ಮೋದಿ ಅವರಿಗೆ ದೇಶ ನಡೆಸಲು ಗೊತ್ತು. ಎಲ್ಲೆಲ್ಲಿ ಹಣ ಪೋಲಾಗ್ತಾ ಇದೆ ಅಂತ ಕೂಡ ಅವರಿಗೆ ಗೊತ್ತು. ಯಾವ ರಾಜ್ಯ ಹೇಗೆಲ್ಲಾ ಹಣ ಖರ್ಚು ಮಾಡುತ್ತಿದೆ ಎಂಬುದು ಕೂಡ ಅವರಿಗೆ ಗೊತ್ತು. ನಾನೇನು ಮೋದಿ ಅವರನ್ನು ಹೊಗಳಲು ಬಂದಿಲ್ಲ ಎಂದು ಹೇಳಿದರು.

ನರೇಗಾಗೆ 60:40 ಅನುಪಾತದಲ್ಲಿ ಅನುದಾನ ಹಂಚಿಕೆ ಮಾಡಿದ್ದಾರೆ. ಕೆಲಸದ ದಿನಗಳನ್ನು ಹೆಚ್ಚು ಮಾಡಿದ್ದಾರೆ. ರಾಮನ ಹೆಸರು ಇಟ್ಟುಕೊಂಡಿದ್ದಾರೆ ಅಂತಾರೆ. ನಮ್ಮ ಮನೆಗೆ ಬನ್ನಿ, ರಾಮ ಕೃಷ್ಣಾ ವೆಂಕಟೇಶ್ವರ ಎಲ್ಲರ ಫೋಟೋಗಳು ಇವೆ.ರಾಮ ಪುರುಷೋತ್ತಮ ಅಂತ ವಾಲ್ಮೀಕಿ ಹೇಳಿದ್ದಾರೆ. ಇದರ ಬಗ್ಗೆ ಇಷ್ಟು ಜಿಜ್ಞಾಸೆ ಯಾಕೆ ಎಂದು ಮಾಜಿ ಪ್ರಧಾನಿಗಳು ತಿರುಗೇಟು ನೀಡಿದರು. ವಿಧಾನ ಪರಿಷತ್ ಸದಸ್ಯ ಟಿ.ಎನ್.ಜವರಾಯಿಗೌಡ, ಮಾಜಿ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿ, ಚೌಡರೆಡ್ಡಿ ತೂಪಲ್ಲಿ ಮುಂತಾದವರು ಹಾಜರಿದ್ದರು.

ಪ್ರೇಕ್ಷಕರ ಮನಸೂರೆಗೊಂಡ ಭರತನಾಟ್ಯ





ಮೈಸೂರಿನ ಕಿರುರಂಗ ಮಂದಿರದಲ್ಲಿ ಬುಧವಾರ ನೃತ್ಯ ಸ್ವರ ಸಂಸ್ಥೆ ವಿದ್ಯಾರ್ಥಿನಿಯರು ಭರತನಾಟ್ಯ ಪ್ರದರ್ಶನ ನೀಡಿದರು. ಎನ್.ಕೀರ್ತನಾ ಏಕವ್ಯಕ್ತಿ ನೃತ್ಯ ಪ್ರದರ್ಶನ ನೀಡಿದ್ದನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಡಿ.24(ಪಿಎಂ)– ನೃತ್ಯ ಸ್ವರ ಸಂಸ್ಥೆಯ ವಿದ್ಯಾರ್ಥಿನಿಯರು ಹಾಗೂ ವಿದುಷಿ ಕೀರ್ತನಾ ಅವರು ವಿವಿಧ ಪ್ರಕಾರದ ಭರತನಾಟ್ಯ ಪ್ರದರ್ಶನದ ಮೂಲಕ ಪ್ರೇಕ್ಷಕರ ಮನಸೂರೆಗೊಂಡರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ನೃತ್ಯ ಸ್ವರ ಸಂಸ್ಥೆಯ ಮೊದಲನೇ ವಾರ್ಷಿಕೋತ್ಸವದಲ್ಲಿ 'ನೃತ್ಯ ಸಂಭ್ರಮ–2025' ಶೀರ್ಷಿಕೆಯಡಿ ಹೀಗೆ ವಿವಿಧ ಪ್ರಕಾರದ ಭರತನಾಟ್ಯದ ಮೂಲಕ ನೃತ್ಯ ಕಲಾವಿದೆಯರು ಪ್ರೇಕ್ಷಕರ ಕಣ್ಮನ ಸೆಳೆದರು.

ಸೋನಾಲಿ, ಸನ್ನಿಧಿ, ಸಾನ್ವಿ, ಮೌಲ್ಯ ಹಾಗೂ ಹೇಮಾವತಿ ಪುಷ್ಪಾಂಜಲಿ ಪ್ರಕಾರದ ನೃತ್ಯ ಪ್ರದರ್ಶನ ನೀಡಿದರು. ಸರಸ್ವತಿ ರಾಗ ಹಾಗೂ ಆದಿ ತಾಳದಲ್ಲಿ ಮೂಡಿಬಂದ ಗೀತೆಗೆ ಇವರು ಹೆಜ್ಜೆ ಹಾಕಿ ನೋಡುಗರಲ್ಲಿ ಬೆರಗು ಮೂಡಿಸಿದರು.

ಅಲ್ಲದೆ, ಜತಿಸ್ವರ, ದೇವರ ನಾಮಗಳು ಮೊದಲಾದ ನೃತ್ಯ ಪ್ರಕಾರದಲ್ಲಿ ಸಂಸ್ಥೆ ವಿದ್ಯಾರ್ಥಿನಿಯರು ಗಮನ ಸೆಳೆದರು. ಕುಮಾರಿ ವಿದುಷಿ ಎನ್.ಕೀರ್ತನಾ, ಸುಮಾರು 20 ನಿಮಿಷ ಏಕವ್ಯಕ್ತಿ ಭರತನಾಟ್ಯ ಪ್ರದರ್ಶನ ನೀಡಿದರು. ಇವರು ಭರತನಾಟ್ಯದ ಶಬ್ಧಂ ಪ್ರಕಾರದಲ್ಲಿ ರಾಮಾಯಣ ಕೆಲ ದೃಶ್ಯಾವಳಿಗಳನ್ನು ಮನೋಜ್ಞವಾಗಿ ಅನಾವರಣಗೊಳಿಸಿ ನೆರೆದವರಿಂದ ಚಪ್ಪಾಳೆ ಗಿಟ್ಟಿಸಿದರು.

ಇದಕ್ಕೂ ಮುನ್ನ ಸಂಗೀತ ವಿವಿ ಭರತನಾಟ್ಯಂ ಉಪನ್ಯಾಸಕಿ ಡಾ.ಭುವನೇಶ್ವರಿ ಉದ್ಘಾಟನೆ ನೆರವೇರಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ನೃತ್ಯ ವಿದ್ಯಾಪೀಠದ ಸಂಸ್ಥಾಪಕ ನಿರ್ದೇಶಕಿ ವಿದುಷಿ ಸಿ.ಎನ್. ಅನಿತ, ನೃತ್ಯ ಸ್ವರ ಸಂಸ್ಥೆ ಕಾರ್ಯದರ್ಶಿ ಪಿ.ಶೋಭಾ ಮತ್ತಿತರರು ಹಾಜರಿದ್ದರು.

ವೈದ್ಯಕೀಯ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ

ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಹಿರಿಯ ವಿದ್ಯಾರ್ಥಿ ಡಾ.ರವೀಶ್‌ಗೆ ಸನ್ಮಾನ



ಮೈಸೂರಿನ ಯಾದವಗಿರಿಯಲ್ಲಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಬುಧವಾರ ವೈದ್ಯಕೀಯ ಶಿಕ್ಷಣದಲ್ಲಿನ ಅಪೂರ್ವ ಸಾಧನೆಗಾಗಿ ಡಾ.ರವೀಶ್ ಸುರೇಶ್ ಬನ್ನಿಹಟ್ಟಿ ಅವರನ್ನು ಅಭಿನಂದಿಸಲಾಯಿತು. ಮೈಸೂರು ಶ್ರೀ ರಾಮಕೃಷ್ಣ ಆಶ್ರಮ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಕರೆಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾನಂದಜೀ ಮಹಾರಾಜ್ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಡಿ.24(ಪಿಎಂ)– ಏಮ್ಸ್, ನಿಮ್ಹಾನ್ಸ್ ಸೇರಿ ದೇಶದ ಪ್ರತಿಷ್ಠಿತ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ವೈದ್ಯಕೀಯ ಡಾಕ್ಟರೇಟ್ (ಡಿಎಂ) ಎಂಸಿಹೆಚ್ ಕೋರ್ಸ್‌ಗಳ (ಸೂಪರ್ ಸ್ಪೆಷಾಲಿಟಿ) ಪ್ರವೇಶಕ್ಕೆ ನಡೆಯುವ ಐಎನ್‌ಐ ಎಸ್‌ಎಸ್ ಡಿಎಂ ಪ್ರವೇಶ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ಸ್ಥಾನ ಪಡೆದ ಡಾ.ರವೀಶ್ ಸುರೇಶ್ ಬನ್ನಿಹಟ್ಟಿ ಅವರನ್ನು ಮೈಸೂರಿನ ಯಾದವಗಿರಿಯಲ್ಲಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಬುಧವಾರ ಸನ್ಮಾನಿಸಿ ಅಭಿನಂದಿಸಲಾಯಿತು.

ಮೂಲತಃ ಭದ್ರಾವತಿ ತಾಲೂಕಿನ ಹೊಸಹಳ್ಳಿಯವರಾದ ರವೀಶ್ ಅವರು ತಮ್ಮ ಪ್ರೌಢಶಾಲಾ ಹಾಗೂ ಪಿಯು ಶಿಕ್ಷಣವನ್ನು ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಪೂರೈಸಿದ್ದರು. ಅಲ್ಲದೇ 2016ರಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ ಟಾಪರ್ ಆಗಿ ಹೊರಹೊಮ್ಮಿದ್ದರು. ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಹಿರಿಯ ವಿದ್ಯಾರ್ಥಿಯಾದ ಡಾ.ರವೀಶ್ ಸುರೇಶ್ ಬನ್ನಿಹಟ್ಟಿ ಅವರ ಈ ಅಪೂರ್ವ ಸಾಧನೆ ಗುರುತಿಸಿ ಇಂದು ಅಭಿನಂದಿಸಲಾಯಿತು.

ಸನ್ಮಾನಿತರಾದ ಡಾ.ರವೀಶ್ ಅವರು ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸುಗಳಿಸುವ ಕುರಿತು ಮಾರ್ಗದರ್ಶನ ನೀಡಿದರು. ಅವರು ವಿದ್ಯಾರ್ಥಿಗಳಲ್ಲಿದ್ದ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ಮೈಸೂರು ಶ್ರೀ ರಾಮಕೃಷ್ಣ ಆಶ್ರಮ ಅಧ್ಯಕ್ಷರೂ ಆದ ಬೇಲೂರು ರಾಮಕೃಷ್ಣ ಮಠ ಮತ್ತು ಮಿಷನ್‌ನ ಟ್ರಸ್ಟಿ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥ (ಕರೆಸ್ಪಾಂಡೆಂಟ್) ಸ್ವಾಮಿ ಯುಕ್ತೇಶಾನಂದಜೀ ಮಹಾರಾಜ್, ಸ್ವಾಮಿ ಮಹಿಪಾಲನಂದಜೀ ಮಹಾರಾಜ್ ಹಾಗೂ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಪ್ರಾಂಶುಪಾಲ ಟಿ.ಕೆ.ಚಂದ್ರಶೇಖರ್ ಉಪಸ್ಥಿತರಿದ್ದರು ಎಂದು ವಿದ್ಯಾಶಾಲೆಯ ಪ್ರಕಟಣೆ ತಿಳಿಸಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.24–ಅಗ್ರಹಾರ ಫೀಡರ್ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಕಾಮಗಾರಿ ನಿಮಿತ್ತ ಡಿ.26 ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಶಂಕರ ಮಠ, ಉತ್ತಾರಾಧಿಮಠ, ಅಗ್ರಹಾರ, ರಾಮಾನುಜ ರಸ್ತೆ 1ರಿಂದ 4ನೇ ಕ್ರಾಸ್, ಸುಣ್ಣದ ಕೇರಿ, ತ್ಯಾಗರಾಜ ರಸ್ತೆ ಹೊಸಕೇರಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಮೈಸೂರಲ್ಲಿ ಡ್ರಂಕ್ ಅಂಡ್ ಡ್ರೈವ್ ಅಭಿಯಾನ

ಮೈಸೂರು ನಗರ ಪೊಲೀಸರು ಡಿ.24ರಿಂದ 30ರವರೆಗೆ ಡ್ರಂಕ್ ಅಂಡ್ ಡ್ರೈವ್ ಅಭಿಯಾನ ಆರಂಭಿಸಿದ್ದಾರೆ. ಬುಧವಾರ ರಾತ್ರಿ ಸಂಚಾರ ಪೊಲೀಸರು ಮೈಸೂರಿನ ಹಲವೆಡೆ ವಾಹನಗಳ ಚಾಲಕರ ತಪಾಸಣೆ ನಡೆಸಿ ಪಾನಮತ್ತರಾಗಿದ್ದವರ ಮೇಲೆ ಕಾನೂನು ಕ್ರಮ ಜರುಗಿಸಿದರು.



ಬಾಲ ಸನ್ಯಾಸ ಪದ್ಧತಿ ಇರುವುದೇ ಉಡುಪಿ ಶ್ರೀ ಕೃಷ್ಣ ಮಠದಲ್ಲಿ ಮಾತ್ರ

● ಹಿರಿಯ ಪ್ರವಚನಕಾರ ವಿದ್ವಾನ್ ಬೆ.ನಾ.ವಿಜಯೇಂದ್ರಾಚಾರ್ಯರು ವಿವರಣೆ ● ವಿಶ್ವೇಶ ತೀರ್ಥ ಶ್ರೀಗಳು 'ವಿಶ್ವ ಸನ್ಯಾಸಿ' ಎಂದರೆ ತಪ್ಪಿಲ್ಲ!



ಪರ್ಯಾಯ ಪೂರ್ವ ಪರಿಕ್ರಮ ಯಾತ್ರೆ ಪ್ರಯುಕ್ತ ಕೃಷ್ಣ ಭಕ್ತರ ಭೇಟಿಗಾಗಿ ಮೈಸೂರಿಗೆ ಆಗಮಿಸಿರುವ ಶಿರೂರು ಮಠದ ಭಾವಿ ಪರ್ಯಾಯ ಶ್ರೀಗಳಾದ ವೇದ ವರ್ಧನತೀರ್ಥ ಶ್ರೀಪಾದಂಗಳವರನ್ನು ಗೌರವಪೂರ್ವಕವಾಗಿ ಸ್ವಾಗತಿಸಲಾಯಿತು.

ಮೈಸೂರು, ಡಿ.24(ಎಸ್‌ಪಿಎನ್)– 'ಬಾಲ ಸನ್ಯಾಸ ಪದ್ಧತಿ' ಇರುವುದೇ ಶ್ರೀ ಕೃಷ್ಣಮಠದಲ್ಲಿ ಮಾತ್ರ, ದೇಶದ ಬೇರೆ ಯಾವುದೇ ಮಠಗಳಲ್ಲೂ ಇಲ್ಲ ಎಂದು ಹಿರಿಯ ಪ್ರವಚನಕಾರ ವಿದ್ವಾನ್ ಬೆ.ನಾ.ವಿಜಯೇಂದ್ರಾಚಾರ್ಯ ತಿಳಿಸಿದರು.

ಮೈಸೂರು ಟಿ.ಕೆ.ಬಡಾವಣೆಯ ಸಾಹುಕಾರ್ ಚೆನ್ನಯ್ಯ ರಸ್ತೆಯಲ್ಲಿರುವ ಶ್ರೀಕೃಷ್ಣಧಾಮದಲ್ಲಿ ಶ್ರೀಕೃಷ್ಣ ಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್ ಹಾಗೂ ಶ್ರೀ ಕೃಷ್ಣಧಾಮ ಸಹಯೋಗದೊಂದಿಗೆ ಏರ್ಪಡಿಸಿದ್ದ ಪರ್ಯಾಯ ಪೂರ್ವ ಪರಿಕ್ರಮ ಯಾತ್ರೆ ಪ್ರಯುಕ್ತ ಕೃಷ್ಣ ಭಕ್ತರ ಭೇಟಿಗಾಗಿ ಮೈಸೂರಿಗೆ ಆಗಮಿಸಿರುವ ಶಿರೂರು ಮಠದ ಭಾವಿ ಪರ್ಯಾಯ ಶ್ರೀಗಳಾದ ವೇದ ವರ್ಧನತೀರ್ಥ ಶ್ರೀಪಾದಂಗಳವರ ಸ್ವಾಗತಿಸುವ ಕಾರ್ಯಕ್ರಮ, ಪೌರಸನ್ಮಾನ ಹಾಗೂ ಸಾಧಕರನ್ನು ಸನ್ಮಾನಿಸುವ ಕಾರ್ಯಕ್ರಮದಲ್ಲಿ ಅವರು, ಮಾತನಾಡಿದರು.

ಶ್ರೀರೂರು ಮಠದ ಶ್ರೀ ವೇದವರ್ಧನ ತೀರ್ಥ ಶ್ರೀಪಾದಂಗಳವರಿಗೆ ಇನ್ನು 21ರ ಪ್ರಾಯ. ಇವರು ಹುಟ್ಟಿದ ಊರು ಧರ್ಮಸ್ಥಳದ ಸಮೀಪ. ಇವರು ಐದು ವರ್ಷದವರಿದ್ದಾಗ ಶಿರೂರು ಮಠಕ್ಕೆ ಸನ್ಯಾಸಿಯಾಗುವಂತೆ ಶ್ರೀ ಕೃಷ್ಣಮಠದಿಂದ ಕರೆಕೊಟ್ಟಾಗ ಸಂತೋಷದಿಂದ ಒಪ್ಪಿ ಶ್ರೀ ಕೃಷ್ಣನ ಸೇವೆಗೆ ಬಂದಿದ್ದಾರೆ. ಶ್ರೀಗಳ ನೇತೃತ್ವದಲ್ಲಿ ಮೊದಲ ಪರ್ಯಾಯ ಪೂಜಾ ಪದ್ಧತಿ ಇನ್ನೆರಡು ತಿಂಗಳಲ್ಲಿ ಹಸ್ತಾಂತರವಾಗಲಿದೆ. ಈ ಪರ್ಯಾಯ ಕಾರ್ಯಕ್ರಮಕ್ಕೆ ಮೈಸೂರಿನ ಭಕ್ತರನ್ನು ಆಹ್ವಾನಿಸಲು ಖುದ್ದು ಶ್ರೀಗಳೇ ಮೈಸೂರಿಗೆ ಬಂದಿದ್ದಾರೆ ಎಂದರು.

ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿಗಳು, ಹಳ್ಳಿಯಿಂದ ದೆಹಲಿಯವರೆಗೂ ತಮ್ಮ ಪ್ರಭಾವ ಬೆಳೆಸಿಕೊಂಡಿದ್ದರು. ಹೀಗೆ, ಒಮ್ಮೆ ವಿಶ್ವೇಶತೀರ್ಥ ಶ್ರೀಪಾದಂಗಳವರು ದೆಹಲಿಗೆ ತೆರಳಿದ್ದಾಗ ಅಂದಿನ ಉಪ ಪ್ರಧಾನಿ ಎಲ್.ಕೆ.ಅದ್ವಾನಿ ಅವರನ್ನು ಭೇಟಿಯಾಗಿದ್ದರು. ಶ್ರೀಗಳನ್ನು ನೋಡಿ ಪುಟ್ಟ ಸನ್ಯಾಸಿಯೊಬ್ಬರು ದೆಹಲಿಗೆ ಬಂದಿದ್ದಾರೆ ಎಂದು ತಮಾಷೆ ಮಾಡಿದ್ದರು. ಆದರೆ, ಮೂರ್ತಿ ಚಿಕ್ಕದಾಗಿರಲಿ, ದೊಡ್ಡದಾಗಿರಲಿ ಜನ ಒಪ್ಪಿದಾಗ ಮಾತ್ರ ಈ ದೇವರಿಗೆ ನಾವು ಮಾಡುವ ಪೂಜೆ ಸಲ್ಲುತ್ತದೆ ಎಂದಿದ್ದ ಪ್ರಸಂಗವನ್ನು ವಿವರಿಸಿದರು.

ದೇಶದಲ್ಲಿ ಹಿಂದೂ ಧರ್ಮದ ಸಂತರನ್ನು ಒಟ್ಟುಗೂಡಿಸಿದ ಕೀರ್ತಿ ಶ್ರೀ ವಿಶ್ವೇಶ ತೀರ್ಥರಿಗೆ ಸಲ್ಲುತ್ತದೆ. ಇವರನ್ನು 'ವಿಶ್ವ ಸನ್ಯಾಸಿ' ಎಂದರೂ ತಪ್ಪಾಗಲಾರದು. ದೆಹಲಿಯಲ್ಲಿ ಸಂಸತ್ ಮುಂಭಾಗದ ಮ್ಯೂಸಿಯಂನಲ್ಲಿ ಅದರ ತುಂಬಾ ಬ್ರಿಟಿಷರ ಫೋಟೋಗಳಿದ್ದವು. ಇದನ್ನೆಲ್ಲಾ ನೋಡಿದ ಶ್ರೀಗಳು, ಅವರ (ಬ್ರಿಟಿಷರ ಆಡಳಿತ) ಆಡಳಿತ ಮುಗಿದಿದೆ. ಇನ್ನೇನಿದ್ದರು ನಮ್ಮ ದೇಶವನ್ನಾಳಿದ ನಾಯಕರ ಫೋಟೋಗಳನ್ನು ಹಾಕಿ ಎಂದು ಪ್ರಧಾನಿ ಮೋದಿಯವರಿಗೆ, ಶ್ರೀ ವಿಶ್ವೇಶ ತೀರ್ಥರು ಸಲಹೆ ನೀಡಿದ್ದ ಪ್ರಸಂಗವನ್ನು ನೆನೆದರು.

ವಾದಿರಾಜ ಸನ್ನಿಧಾನ ಕೃಷ್ಣ ಸನ್ನಿಧಾನ ಇದ್ದಂತೆ. ದೇವರ ಸಂಬಂಧದಲ್ಲಿ ನೀವಿದ್ದಾಗ ನಿಮಗೆ ಯಾವುದೇ ತೊಂದರೆ ಇಲ್ಲ. ಸನ್ಯಾಸತ್ವ ಸ್ವೀಕರಿಸಿ, ಸಮಾಜದಲ್ಲಿ ಉತ್ತಮ ಸ್ಥಾನಗಳಿಸುವುದು ಅಷ್ಟು ಸುಲಭದ ಮಾತಲ್ಲ. ಶ್ರೀ ವಿಶ್ವೇಶ ತೀರ್ಥರು ಐದನೇ ವರ್ಷಕ್ಕೆ ಸನ್ಯಾಸ ಸ್ವೀಕರಿಸಿ, 6ನೇ ವಯಸ್ಸಿಗೆ ಉಪನಯನ ಹಾಗೂ 7ನೇ ವಯಸ್ಸಿಗೆ ಸನ್ಯಾಸತ್ವ ಜವಾಬ್ದಾರಿ ವಹಿಸಲಾಗಿತ್ತು. ಅದೇ ರೀತಿ ಶಿರೂರು ಶ್ರೀಗಳು ಸಹ ಅತೀ ಚಿಕ್ಕವಯಸ್ಸಿನಲ್ಲೇ ಸನ್ಯಾಸ ಸ್ವೀಕರಿಸಿ, ಶ್ರೀ ಕೃಷ್ಣನ ಸೇವೆಗೆ ಬಂದಿರುವುದು ಸ್ವಾಗತಾರ್ಹ ಎಂದರಲ್ಲದೆ, ಅಂಗಡಿಯಲ್ಲಿ ಸಿಗುವ ಕಾವಿ ಬಟ್ಟೆಯನ್ನು ಯಾರೂ ಬೇಕಾದರೂ ಹಾಕುಹುದು, ಆದರೆ, ಅದರ ಹಿಂದಿರುವ ಪೂಜ್ಯಭಾವವನ್ನು ಎಲ್ಲರೂ ನೀಡಲು ಸಾಧ್ಯವಿಲ್ಲ ಎಂದರು.

ಈ ವೇಳೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ.ಕೆ.ರಾಮಮೂರ್ತಿರಾವ್ ಅವರನ್ನು ಸನ್ಮಾನಿಸಲಾಯಿತು. ಬಳಿಕ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿದರು. ಈ ವೇಳೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮೈಸೂರು ಘಟಕದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಶ್ರೀ ಕೃಷ್ಣಮಿತ್ರಮಂಡಳಿ ಅಧ್ಯಕ್ಷ ಎನ್.ಗೋಪಾಲಕೃಷ್ಣನ್, ಶ್ರೀ ಕೃಷ್ಣಟ್ರಸ್ಟ್‌ನ ರವಿಶಾಸ್ತ್ರಿ, ಪಿ.ಎಸ್.ಶೇಖರ್ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಸರಸ್ವತಿಪುರಂ ಜವರೇಗೌಡ ಉದ್ಯಾನವನದಿಂದ ಶ್ರೀ ಕೃಷ್ಣಧಾಮದವರಿಗೆ ಶ್ರೀ ವೇದವರ್ಧನತೀರ್ಥ ಶ್ರೀಪಾದಂಗಳವರನ್ನು ಮೆರವಣಿಗೆ ಮೂಲಕ ಕರೆತರಲಾಯಿತು.

ನಕ್ಕರೆ ಅದೇ ಸ್ವರ್ಗ

ಭಿಕ್ಷುಕ : ಅಮ್ಮಾ ನನಗೆ ಒಂದು ರೊಟ್ಟಿ ಕೊಡಿ ತಾಯಿ
ಅಮ್ಮ : ಇನ್ನು ರೊಟ್ಟಿ ಮಾಡಿಲ್ಲ ಆಮೇಲೆ ಬಾ
ಭಿಕ್ಷುಕ : ಮೊಬೈಲ್ ನಂಬರ್ ತಗೊಳ್ಳಿ, ರೆಡಿ ಆದ ಮೇಲೆ ಮಿಸ್ ಕಾಲ್ ಕೊಡಿ
ಅಮ್ಮ : ಮಿಸ್ ಕಾಲ್ ಯಾಕೆ ವಾಟ್ಸಾಪ್‌ನಲ್ಲಿ ಕಳಿಸುತ್ತೇನೆ ಅದನ್ನ ಡೌನ್‌ಲೋಡ್ ಮಾಡ್ಕೊಂಡು ತಿನ್ನು

ಮೈಸೂರು ಮಿತ್ರ

ಗುರುವಾರ, 25 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಬೇವಿನ ಸಸಿಗೆ ಬೆಲ್ಲದ ಕಟ್ಟೆ ಕಟ್ಟಿದರೇನು ಫಲ! ಅದು ನೀಡುವುದು ಬೇವಿನ ಕಹಿಯೇ ಹೊರತು ಬೆಲ್ಲದ ರುಚಿಯನ್ನಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ ಹೇಳಿದ ಹಾಗೆ!

ನಿಮ್ಮ ಪತ್ರಗಳು

ನಾಡದೇವತೆ ಚಾಮುಂಡಿಬೆಟ್ಟ ಯಥಾಸ್ಥಿತಿ ಇರಲಿ

ಮಾನ್ಯರೆ,

ನಮ್ಮ ನಾಡದೇವತೆ ಶ್ರೀ ಚಾಮುಂಡೇಶ್ವರಿ ತಾಯಿ ನೆಲೆಯಾದ ಚಾಮುಂಡಿ ಬೆಟ್ಟವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವುದು ಮೈಸೂರಿಗರ ಆದ್ಯ ಕರ್ತವ್ಯವಾಗಿದೆ. ಸಂರಕ್ಷಿತ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಇರುವ ಚಾಮುಂಡಿಬೆಟ್ಟವನ್ನು ಅಭಿವೃದ್ಧಿ ಪಡಿಸುವ ನೆಪದಲ್ಲಿ ಗ್ರೇಟರ್ ಮೈಸೂರು ವ್ಯಾಪ್ತಿಗೆ ಒಳಪಡಿಸದೆ, ಧಾರ್ಮಿಕ ಸ್ಥಳ ಹಾಗೂ ಪ್ರವಾಸಿ ತಾಣವಾಗಿರುವ ಈ ದೇವಾಲಯದ ಮಹಿಮೆ ಹಾಗೂ ಗತವೈಭವವನ್ನು ಸಾರುವ ಚಾಮುಂಡಿಬೆಟ್ಟವನ್ನು ಗ್ರಾಮ ಪಂಚಾಯಿತಿಯಲ್ಲೇ ಉಳಿಸಿಕೊಡಬೇಕು ಎಂದು ಅಲ್ಲಿನ ಗ್ರಾಮಸ್ಥರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿರುವುದು ಶ್ಲಾಘನೀಯ. ಈಗಾಗಲೇ ಬೆಟ್ಟ ಕೆಲವು ಕಡೆ ಕುಸಿದಿರುವುದು ಆತಂಕಕ್ಕೆ ಕಾರಣವಾಗಿದೆ, ಚಾಮುಂಡಿ ಬೆಟ್ಟ ಗ್ರೇಟರ್ ಮೈಸೂರಿಗೆ ಸೇರ್ಪಡೆಯಾದರೆ ಅಭಿವೃದ್ಧಿ ನೆಪದಲ್ಲಿ ಇನ್ನೂ ಹೆಚ್ಚಿನ ಅನಾಹುತವಾಗುವುದರಲ್ಲಿ ಸಂದೇಹವೇ ಇಲ್ಲ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಬಾಂಗ್ಲಾ ದೇಶಿಯರ ಒಳನುಸುಳುವಿಕೆ ತಡೆಗೆ ತುರ್ತು ಕ್ರಮ ಅಗತ್ಯ

ಮಾನ್ಯರೆ,

ಬಾಂಗ್ಲಾ ದೇಶಿಯರ ಒಳನುಸುಳುವಿಕೆ ತಡೆಗೆ ತುರ್ತು ಕ್ರಮ ಅಗತ್ಯವಾಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಅಲ್ಲಿಯ ಹಿಂದೂ ಸಂಘಟನೆಗಳು ಬಾಂಗ್ಲಾ ರಾಯಭಾರಿ ಕಚೇರಿ ಬಳಿ ಪ್ರತಿಭಟನೆ ನಡೆಸುತ್ತಿರುವುದು ಅತ್ಯಂತ ಸಮಯೋಚಿತವಾಗಿದೆ. ಅಲ್ಲಿನ ಹಿಂದೂಗಳು ತಮ್ಮ ಮೇಲೆ ನಡೆಯುತ್ತಿರುವ ನಿರಂತರ ಹಲ್ಲೆಗಳಿಂದ ಜರ್ಜರಿತರಾಗಿ, ರೋಸಿಹೋಗಿದ್ದಾರೆ.

ಪ್ರತಿಭಟನೆಯಲ್ಲಿ ಹಿಂದೂ ಸಂಘಟನೆಗಳ ಆಕ್ರೋಶ ಸಹಜವಾಗಿಯೇ ಇದೆ. ಇನ್ನೂ ಒಂದು ಮಹತ್ತರ ವಿಷಯವೇನೆಂದರೆ ಬಾಂಗ್ಲಾ ದೇಶದಿಂದ ನಿರಂತರವಾಗಿ ಅಸ್ಸಾಂ ರಾಜ್ಯಕ್ಕೆ ವಲಸೆ ಬರುತ್ತಿರುವ ಬಾಂಗ್ಲಾ ದೇಶಿಯರಿಂದ ಆ ರಾಜ್ಯಕ್ಕೆ ಹೆಚ್ಚಿನ ಅಪಾಯವಿದೆ.

ಬಾಂಗ್ಲಾ ದೇಶದ ವಲಸಿಗರಿಂದ ಆ ರಾಜ್ಯದಲ್ಲಿ ಹಲವಾರು ಸಮಸ್ಯೆಗಳು ಉದ್ಭವವಾಗುತ್ತಿವೆ. ಅದೂ ಅಲ್ಲದೆ ಬಾಂಗ್ಲಾದೇಶಿಯರ ಒಳ ನುಸುಳುವಿಕೆಯಿಂದ ಆ ರಾಜ್ಯದಲ್ಲಿ ಇದ್ದಕ್ಕಿದ್ದಂತೆಯೇ ಅವರ ಜನಸಂಖ್ಯೆ ಜಾಸ್ತಿಯಾಗುವುದರಿಂದ ಅಲ್ಲಿರುವ ಹಿಂದೂ ಜನಗಳ ಜೀವನ ಅಸಹನೀಯವಾಗುತ್ತಿದೆ. ಈ ಒಳನುಸುಳುವಿಕೆ ರಾಜಕೀಯವಾಗಿಯೂ ಬಹಳ ಪರಿಣಾಮ ಬೀರುತ್ತದೆ. ಅಸ್ಸಾಂ ರಾಜ್ಯದಲ್ಲಿ ಹಿಂದೂಗಳೇ ಅಲ್ಪಸಂಖ್ಯಾತರಾಗಬಹುದು. ಕೊಲ್ಕತ್ತಾದಲ್ಲಿ ಹಿಂದೂ ಸಂಘಟನೆಗಳಿಂದ ಪ್ರತಿಭಟನೆಯು ನಡೆಯುತ್ತಿರುವುದರಿಂದ ಅಲ್ಲಿ ಭಾರೀ ಘರ್ಷಣೆಯುಂಟಾಗುವ ಸಂಭವವಿದೆ. ಆದುದರಿಂದ ಪ್ರಧಾನಿ ನರೇಂದ್ರ ಮೋದಿಯವರು ಇದರ ಬಗ್ಗೆ ತುರ್ತು ಗಮನ ಹರಿಸಬೇಕಿದೆ.

–ಬೇಲೂರು ದ.ಶಂ. ಪ್ರಕಾಶ್, ಮೈಸೂರು

ಹೈ ಕಮಾಂಡ್ ನಿರ್ಧಾರವೇ ಅಲ್ಲವೇ?

ಮಾನ್ಯರೆ,

ಕರ್ನಾಟಕದಲ್ಲಿ ಕಳೆದ ಹಲವು ತಿಂಗಳಿಂದ ನಡೆಯುತ್ತಿರುವ ಕುರ್ಚಿ ಕಾಳಗ ಸದ್ಯಕ್ಕೆ ನಿಲ್ಲುವ ಲಕ್ಷಣಗಳಿಲ್ಲ. ಮಾಧ್ಯಮಗಳಲ್ಲಿ ವರದಿಯಾಗುತ್ತಿರುವಂತೆ ಹಲವು ಡೆಡ್ ಲೈನ್‌ಗಳ ನಂತರವೂ ಹೈಕಮಾಂಡ್ ಗೊಂದಲಗಳಿಗೆ ತೆರೆ ಎಳೆಯಲು ವಿಫಲವಾಗಿದೆ. ಅನುಕೂಲದ ಲೆಕ್ಕಾಚಾರದಲ್ಲಿ ಒಪ್ಪಂದ ಅನುಷ್ಠಾನಗೊಳಿಸಲು ಅಡಕತ್ತರಿಯಲ್ಲಿ ಸಿಕ್ಕಿ ಹಾಕಿಕೊಂಡು ಒದ್ದಾಡುತ್ತಿದೆ. ಇದೀಗ ಖರ್ಗೆಯವರು, ನಾಯಕತ್ವ ಗೊಂದಲ ಸ್ಥಳೀಯ ಸೃಷ್ಟಿ, ಇದನ್ನು ಸ್ಥಳೀಯ ನಾಯಕರೇ ಬಗೆಹರಿಸಿಕೊಳ್ಳಬೇಕು ಎಂದು ಕಾಂಗ್ರೆಸ್ ಅಧ್ಯಕ್ಷರ ಅಧಿಕಾರದ ಮಿತಿಯನ್ನು ತಿಳಿಸಿದ್ದಾರೆ. ಹಾಗಾದರೆ ಪಕ್ಷ ಚುನಾವಣೆಯಲ್ಲಿ ಗೆಲುವು ಸಾಧಿಸಿದಾಗ ಹೈಕಮಾಂಡ್ ನಾಯಕರು ಇಬ್ಬರು ನಾಯಕರನ್ನು ದೆಹಲಿಗೆ ಕರೆಸಿ ಮಾತುಕತೆ ನಡೆಸಿದ್ದೇಕೆ? ಆಗ ನಾಯಕರು ಯಾವ ಭರವಸೆಯನ್ನು ಕೊಟ್ಟಿದ್ದರು? ಈಗ ತನ್ನ ಮತ ಬ್ಯಾಂಕ್ ಲೆಕ್ಕಾಚಾರದಲ್ಲಿ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಬದಲು ಲಾಭದ ಲೆಕ್ಕಾಚಾರ ಮಾಡಿದರೆ ಹೇಗೆ? ಇಂತಹ ಧೋರಣೆ ಕೂಡ ಪಕ್ಷದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎನ್ನುವುದನ್ನು ಮರೆಯಬಾರದು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಇಸ್ಕಾನ್ ದೇವಾಲಯ ರಸ್ತೆಯ ಪಕ್ಕದಲ್ಲಿ ಲಾರಿ ಗಟ್ಟಲೆ ತ್ಯಾಜ್ಯ

ಮಾನ್ಯರೆ,



ಮೈಸೂರಿನ ಜಯನಗರದ ಇಸ್ಕಾನ್ ಕೃಷ್ಣ ದೇವಾಲಯ ರಸ್ತೆಯ ಪಕ್ಕದಲ್ಲಿ ಲಾರಿ ಗಟ್ಟಲೆ ತ್ಯಾಜ್ಯ ವಸ್ತುಗಳು ಬಿದ್ದಿದ್ದು ಹಾಡಹಗಲೇ ಹಂದಿಗಳು ಈ ತ್ಯಾಜ್ಯದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿವೆ.

ಈ ಮುಖ್ಯ ರಸ್ತೆಯಲ್ಲೇ ಕೆಲವು ಜನ ಮೂತ್ರ ವಿಸರ್ಜನೆ ಮಾಡುವುದು ಸರ್ವೆ ಸಾಮಾನ್ಯವಾಗಿದೆ. ಇದರಿಂದಾಗಿ ಈ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರು ಒಂದು ರೀತಿಯಲ್ಲಿ ಮಾನಸಿಕ ಹಿಂಸೆ ಅನುಭವಿಸುವಂತಾಗಿದೆ. ಇದು ಸಾರ್ವಜನಿಕರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ಇದೇ ರಸ್ತೆಯಲ್ಲಿ ಮೈಸೂರು ನಗರ ಪಾಲಿಕೆಯ ಹಿರಿಯ ಅಧಿಕಾರಿಗಳು ಓಡಾಡುತ್ತಿದ್ದರೂ, ಇದು ಇವರ ಕಣ್ಣಿಗೆ ಕಾಣುವುದಿಲ್ಲವೇ?, ದಯಮಾಡಿ ಸಂಬಂಧಪಟ್ಟ ಮಹಾನಗರಪಾಲಿಕೆಯ ಅಧಿಕಾರಿಗಳು ಈ ರಸ್ತೆಯಲ್ಲಿರುವ ತ್ಯಾಜ್ಯವನ್ನು ವಿಲೇವಾರಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು.


– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು





ನಿವೇದಿತ ಎಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.


ಮಂಥನ

ಕುಟುಂಬ ವತ್ಸಲ ರಸಋಷಿಗೆ ನಮನ









ಜೈ ಭಾರತ ಜನನಿಯ ತನುಜಾತೆ.... ಶಾಲೆಯಲ್ಲಿ ಬೆಳಗಿನ ಪ್ರಾರ್ಥನೆ ಸಮಯದಲ್ಲಿ ಹಾಡುತ್ತಿದ್ದ ನನಗೆ, ಅದನ್ನು ಬರೆದದ್ದು ಕುವೆಂಪು ಎಂದು ತಿಳಿದದ್ದು ಕನ್ನಡ ಪಠ್ಯಪುಸ್ತಕದ ಕವರ್ ಪೇಜ್‌ನಲ್ಲಿ ಅಚ್ಚಾಗಿರುತ್ತಿದ್ದ ನಾಡಗೀತೆಯ ಕೊನೆಯಲ್ಲಿನ ಹೆಸರು ನೋಡಿ. ಅವರ ಹೆಸರಿನ ನಂತರ ತಿಳಿದದ್ದು ಅವರು ಹಾಡು ಹಾಗೂ ಭಾವಗೀತೆ ಬರೆಯುತ್ತಾರೆಂದು! ನಾವು 4ನೇ ತರಗತಿಯಲ್ಲಿ ಇದ್ದಾಗ, ಅವರ ಜನ್ಮದಿನದ ಸಂದರ್ಭಕ್ಕಾಗಿ ಅವರದೇ ರಚನೆಯ ಭಾವಗೀತೆಗಳ ಸ್ಪರ್ಧೆ ಏರ್ಪಡಿಸಿದ್ದರು. ಆ ಸ್ಪರ್ಧೆಯಲ್ಲಿ ಕುವೆಂಪು ಅವರ, 'ಕುಹು ಕುಹು ನೀ ಕೋಗಿಲೆಯೆ ನಾ ಹಾಡುವ ಮಾತೊಂದ ಹಾಡುವೆಯಾ..' ಗೀತೆಗೆ ಮೊದಲ ಬಹುಮಾನ ಬಂದದ್ದು ಒಂದು ಸುಂದರ ನೆನಪು. ಅಲ್ಲಿಂದ ಎಲ್ಲಿ ಕುವೆಂಪು ಎಂಬ ಹೆಸರು ಕಂಡರೂ ಪರಿಚಯದ ಉದ್ಗಾರ ಮೂಡುತ್ತಿತ್ತು. 5ನೇ ತರಗತಿಯಲ್ಲಿ ಕನ್ನಡದಲ್ಲಿ 'ಓ ಬನ್ನಿ ಸೋದರರೆ ಬೇಗ.....' ಬನ್ನಿ ಪಠ್ಯವಾಗಿತ್ತು.

ಹೀಗೆ ಕುವೆಂಪು ಅವರು ಹತ್ತಿರವಾಗುತ್ತಾ, ಅವರ ಕತೆ, ಕವನ, ಹಾಡುಗಳು ಪರಿಚಯವಾದವು. ಮತ್ತೊಮ್ಮೆ ಕುವೆಂಪು ಅವರ ಬರಹಗಳ ಕುರಿತ ಭಾಷಣ ಸ್ಪರ್ಧೆಯಲ್ಲಿ ಬಹುಮಾನ ಬಂದು ಕುವೆಂಪು ಅವರು ಇನ್ನೂ ಆಪ್ತರೆನಿಸಿದರು. ಸ್ವಲ್ಪ ದೊಡ್ಡವಳಾದ ಮೇಲೆ ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಓದಿದ ಮೇಲೆ ನನಗಾದ ಅಚ್ಚರಿಗೆ ಎಣೆಯೇ ಇಲ್ಲ. ಕಾದಂಬರಿ ಓದಿ ಮುಗಿಸುವ ಹೊತ್ತಿಗೆ ದಟ್ಟ ಮಲೆನಾಡಿನ ಗುಂಗು ಹುಚ್ಚು ಹಿಡಿಸಿತ್ತು. ತಮ್ಮ ಜೀವನದ ಕೆಲವೇ ವರ್ಷಗಳನ್ನು ಕುಪ್ಪಳ್ಳಿಯಲ್ಲಿ ಕಳೆದಿದ್ದರೂ, ಅವರಲ್ಲಿ ಮಲೆನಾಡು ತುಂಬಿಕೊಂಡಿದ್ದ ಪರಿ ಅನನ್ಯ. ತಾವು ಕುಪ್ಪಳ್ಳಿಯಲ್ಲಿ ಕಳೆದ ಸ್ವಲ್ಪ ವರ್ಷಗಳಲ್ಲಿ ಜನ್ಮಕ್ಕಾಗುವಷ್ಟು ನೆನಪುಗಳನ್ನು ಗಳಿಸಿಕೊಂಡು ಆತ್ಮಕ್ಕಿಳಿಸಿಕೊಂಡು ಜತನಮಾಡಿ ಅದರ ರಸಸಾರವನ್ನು ನಮಗೆಲ್ಲ ಉಣಬಡಿಸಿದ ಅವರ ಪಾಂಡಿತ್ಯಕ್ಕೆ ಎಣೆಯುಂಟೇ? ಇದು ನನಗೆ ಯಾವಾಗಲೂ ಅಚ್ಚರಿಯನ್ನುಂಟು ಮಾಡಿದೆ.

ಕುವೆಂಪು ಅವರನ್ನು ಕನ್ನಡದ ವರ್ಡ್ಸ್ ವರ್ತ್, ಎನ್ನುವುದು ಎಲ್ಲರಿಗೂ ಸಮ್ಮತವಲ್ಲ. ಆದರೂ, ಅವರು Poetry is memories recollected in tranquility ಎಂದು ಹೇಳುವುದನ್ನು ಎಲ್ಲರೂ ಒಪ್ಪುತ್ತೇವೆ. ಕುವೆಂಪು ಅವರ ಎರಡು ಮಹಾಕಾದಂಬರಿಗಳು, ಕವನಗಳು ಅವರ ಮಾತುಗಳಿಗೆ ಪುಷ್ಠಿ ನೀಡುವಂತಿರುವುದನ್ನು ಅಲ್ಲಗಳೆಯುವಂತಿಲ್ಲ. ಹೀಗೆ ಕುವೆಂಪು ಅವರನ್ನು ನನ್ನಮಟ್ಟಿಗೆ ಅರಿಯುತ್ತಾ ಹೋದಂತೆ ನನಗೂ ಅವರು ಶತಮಾನದ ಅಚ್ಚರಿ ಎಂದೇ ಎನಿಸಿದರು.

> “ಕುವೆಂಪು ಅವರನ್ನು ಕನ್ನಡದ ವರ್ಡ್ಸ್ ವರ್ತ್, ಎನ್ನುವುದು ಎಲ್ಲರಿಗೂ ಸಮ್ಮತವಲ್ಲ. ಆದರೂ, ಅವರು Poetry is memories recollected in tranquility ಎಂದು ಹೇಳುವುದನ್ನು ಎಲ್ಲರೂ ಒಪ್ಪುತ್ತೇವೆ. ಕುವೆಂಪು ಅವರ ಎರಡು ಮಹಾಕಾದಂಬರಿಗಳು, ಕವನಗಳು ಅವರ ಮಾತುಗಳಿಗೆ ಪುಷ್ಠಿ ನೀಡುವಂತಿರುವುದನ್ನು ಅಲ್ಲಗಳೆಯುವಂತಿಲ್ಲ. ಹೀಗೆ ಕುವೆಂಪು ಅವರನ್ನು ನನ್ನ ಮಟ್ಟಿಗೆ ಅರಿಯುತ್ತಾ ಹೋದಂತೆ ನನಗೂ ಅವರು ಶತಮಾನದ ಅಚ್ಚರಿ ಎಂದೇ ಎನಿಸಿದರು.

ಮಹಾಕಾವ್ಯ, ಪ್ರೇಮಕವನ, ಕತೆ ವೈಚಾರಿಕ ಲೇಖನ–ಭಾಷಣಗಳು, ನಾಟಕಗಳು, ವಿಮರ್ಶೆ, ಕಾದಂಬರಿ, ಆಧ್ಯಾತ್ಮ ಅವರ ಬರಹಗಳ ಹರಹು ನನ್ನ ಮನಸ್ಸಿನಲ್ಲಿ ಮೂಡಿಸಿದ್ದ ವ್ಯಕ್ತಿತ್ವವೇ ಬೇರೆ. ಅವರು ಒಬ್ಬ ಗಂಭೀರ ವ್ಯಕ್ತಿ, ಮನೆಯಲ್ಲಿ ಹೇಗಿರುತ್ತಾರೋ, ಮಾತೇ ಆಡುವುದಿಲ್ಲವೇನೋ, ಯಾವಾಗಲೂ ಓದು–ಬರಹ ಎಂದೇ ತೊಡಗಿ ಕೊಂಡಿರುತ್ತಾರೇನೋ ಎಂದೆಲ್ಲಾ ಯೋಚಿಸಿಕೊಂಡಿದ್ದೆ. ಅದು ಹೌದು, ಸುಳ್ಳಲ್ಲ. ಆದರೆ, ಯಾವಾಗ ಪೂರ್ಣಚಂದ್ರ ತೇಜಸ್ವಿ ಅವರ 'ಅಣ್ಣನ ನೆನಪು' ಪುಸ್ತಕ ಬಂದಿತೋ, ಆಗ ಕುವೆಂಪು ಅವರ ನಿಜ ಅಥವಾ ಪೂರ್ಣ ವ್ಯಕ್ತಿತ್ವದ ಪರಿಚಯವಾಯಿತು.

ಅಣ್ಣನ ನೆನಪು ಪುಸ್ತಕದಲ್ಲಿ ಪೂಚಂತೇ ಅವರು ತಮ್ಮ ತಂದೆಯ ಜೊತೆಯ ಒಡನಾಟವನ್ನು, ಅದೆಷ್ಟು ರಸಮಯವಾಗಿ ದಾಖಲಿಸಿದ್ದಾರೆ ಎಂದರೆ, ಅದನ್ನು ಓದಿಯೇ ಅನುಭವಿಸಬೇಕು. ಪುಸ್ತಕ ಮನೆಗೆ ಬಂದ ತಕ್ಷಣ ಸರದಿಯಂತೆ ಓದಿ ಮುಗಿಸಿದ ನಾವೆಲ್ಲರೂ, ಮತ್ತೆ ಮತ್ತೆ ಅಲ್ಲಿನ ಘಟನೆಗಳು, ಸಂಗತಿಗಳನ್ನು ಒಟ್ಟಾಗಿ ಕುಳಿತು ಓದಿ ಓದಿ ಖುಷಿಪಡುತ್ತಿದ್ದೆವು. ಅಲ್ಲಿ ಕುವೆಂಪು ಅವರನ್ನು ಪೂಚಂತೇ, ಒಬ್ಬ ಮಮತಾಮಯಿ ಆದರ್ಶ ತಂದೆಯಾಗಿ ಮಾತ್ರವಲ್ಲದೆ, ಸ್ನೇಹಿತನಂತೆ, ಗುರುವಿನಂತೆ, ತಾಯಿಯಂತೆ, ಮಾರ್ಗದರ್ಶಕನಾಗಿದ್ದ ಬಗೆಯನ್ನು ವಿವರಿಸುತ್ತಾರೆ. ಅಲ್ಲಿನ ಹಲವು ಪ್ರಸಂಗಗಳು, ಸ್ಕೂಟರ್ ರಿಪೇರಿ, ಪೆಂಡ್ಯುಲಮ್ ಬಾಲದ ನಾಯಿ, ಫೋಟೋಗ್ರಫಿ ಪುರಾಣ, ದಂತವಾದ್ಯ ಇವೆಲ್ಲವನ್ನೂ ಓದುವಾಗ ಬೇರೆಯೇ, ಸಾಮಾನ್ಯ ತಂದೆ ಕುವೆಂಪು ಅವರು ಕಾಣಿಸುತ್ತಾರೆ. ಮಗನ ಎಲ್ಲ ತುಂಟಾಟಗಳು, ಹೊಸತನ್ನು ಮಾಡುವ ಹುಚ್ಚುಗಳಿಗೆ ಬೆಂಬಲವಾಗಿ ನಿಲ್ಲುವ ಪ್ರೀತಿಯ ಮೂರ್ತಿಯಂತೆ ಕಾಣುತ್ತಾರೆ. ಪೂಚಂತೇ ಅವರ ಎಲ್ಲ ನಿರ್ಧಾರಗಳಿಗೂ ಬೆಂಬಲವಾಗಿ ನಿಲ್ಲುವ ಕುವೆಂಪು, ಅವರ ಧೀಃಶಕ್ತಿಯಾಗುತ್ತಾರೆ.

ನಂತರ ನಾನು ಓದಿದ್ದು, ಕುವೆಂಪು ಅವರ ಮಗಳು ತಾರಿಣಿ ಚಿದಾನಂದ ಅವರ ಕೃತಿ ಮಗಳು ಕಂಡ ಕುವೆಂಪು. ಇದನ್ನು ಓದಿದ ಮೇಲೆ ನನಗೆ ಕಂಡ ಕುವೆಂಪು ನನ್ನನ್ನು ಮೂಕವಿಸ್ಮಿತಳನ್ನಾಗಿಸಿಬಿಟ್ಟರು. ಶ್ರೀರಾಮಾಯಣ ದರ್ಶನಂ ಅಂತಹ ಮಹಾಕಾವ್ಯವನ್ನು ಬರೆದ ಯುಗದ ಕವಿಯ ಜಗದೊಂದಿಗಿನ ಆತ್ಮೀಯ ನಂಟಿನ ಪರಿ ಅದೆಷ್ಟು ಮಧುರ! ಮಹಾಕವಿ, ಯುಗದ ಕವಿ, ರಸಋಷಿ ಇತ್ಯಾದಿ ಬಿರುದು ಬಾವಲಿಗಳನ್ನು ದೂರವಿಟ್ಟು ಹೆಂಡತಿ ಮಕ್ಕಳೊಡನೆ ಪ್ರೀತಿಯಿಂದ ಬಾಳಿ ಬದುಕಿದ ಕುವೆಂಪು ಅವರ ಅನನ್ಯತೆ ಅಸದೃಶ. ಪುಸ್ತಕ ಓದುತ್ತಾ ಹೋದಂತೆ, ನನ್ನ ಮನಸ್ಸಿನಲ್ಲಿ ಅಚ್ಚಾಗಿದ್ದ ಮಹಾಕವಿ ಹಿನ್ನೆಲೆಗೆ ಸರಿದು ಒಬ್ಬ ಹೆಂಗರುಳಿನ ಕಾಳಜಿ ತೋರುವ ಅಪ್ಪ, ಪ್ರೇಮಮೂರ್ತಿಯಾದ ಆದರ್ಶ ಪತಿ, ಸಾಮಾಜಿಕ ಕಳಕಳಿ ಹೊಂದಿರುವ ನಾಗರಿಕ, ವಿದ್ಯಾರ್ಥಿಗಳ ಹಿತ ಬಯಸುವ ಶಿಕ್ಷಕ, ಸಮಾಜದ ಸ್ವಾಸ್ಥ್ಯ ಬಯಸುವ ಪ್ರಜೆ, ಪರಿಸರ ಪ್ರೇಮಿ, ಜನರ ಮೌಢ್ಯಕ್ಕೆ ಮರುಗುವ ವಿಚಾರವಾದಿ ನನ್ನ ಕಣ್ಣಮುಂದೆ ರೂಪುಗೊಳ್ಳುತ್ತಾ ಹೋದರು. ಈ ಎಲ್ಲವೂ ಅವರ ಬರಹಗಳಲ್ಲಿ ಕಂಡುಬರುವವೇ. ಬರೆದಂತೆಯೇ ಬಾಳಿದರು ಕುವೆಂಪು ಎನ್ನುವುದು ಇಲ್ಲಿ ನಿಚ್ಚಳವಾಗಿ ಕಂಡು ಬಂದು, ಅವರ ಮೇಲಿನ ಗೌರವ ಇಮ್ಮಡಿಯಾಗಿ ಅವರನ್ನೊಮ್ಮೆ ನೋಡಬೇಕಿತ್ತು ಎಂಬ ಭಾವ ಉತ್ಕಟವಾಗಿ ಮೂಡಿಬಿಟ್ಟಿತು.

ತಾರಿಣಿಯವರು ಇಡೀ ಪುಸ್ತಕದಲ್ಲಿ ಎಲ್ಲಿಯೂ ಕುವೆಂಪು ಅವರ ವೈಭವೀಕರಣ ಮಾಡದೆ, ಮಹಾಕವಿಯ ಕುರಿತು ಬರೆಯುತ್ತಿದ್ದೇನೆ ಎಂಬ ಭಾರವನ್ನು ಹೇರಿಕೊಳ್ಳದೆ, ಸರಳವಾಗಿ, ತಾವು ಕಂಡ, ಒಡನಾಡಿದ ತಮ್ಮ ಪ್ರೀತಿಯ ಅಣ್ಣನ ಕುರಿತ ವಿಚಾರಗಳನ್ನು ತಿಳಿಸಲೇಬೇಕೆಂಬ ತುಡಿತದಿಂದ ಕುವೆಂಪು ಅವರನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ.

ತಾರಿಣಿ ಅವರ ಬಾಲ್ಯದ ದಿನಗಳಿಂದ ಪ್ರಾರಂಭವಾಗುವ ಪುಸ್ತಕ ನಿಧಾನಕ್ಕೆ ಕುವೆಂಪು ಅವರನ್ನು ತೆರೆದಿಡುತ್ತಾ ನಮ್ಮನ್ನು ಆವರಿಸಿಕೊಂಡು ಕುವೆಂಪು ಲೋಕಕ್ಕೆ ಕರೆದೊಯ್ಯುತ್ತದೆ. ತೀರಾ ಚಿಕ್ಕ ವಯಸ್ಸಿನಲ್ಲಿಯೇ ಕುಪ್ಪಳ್ಳಿ, ಮಲೆನಾಡನ್ನು ಬಿಟ್ಟು ಮೈಸೂರಿಗೆ ಬಂದರೂ, ಕುವೆಂಪು ಅವರ ಹೃದಯದಲ್ಲಿ ಕುಪ್ಪಳ್ಳಿ ಮತ್ತು ಮಲೆನಾಡು ಸದಾ ಜಾಗೃತ. ಅದಕ್ಕಾಗಿಯೇ, ವಿಶಾಲವಾದ ಮನೆಯನ್ನು ಕಟ್ಟಿಸುವ ಸಮಯದಲ್ಲಿಯೇ, ಮನೆಯ ಸುತ್ತಮುತ್ತ ಹಸುರಿನ ಸಿರಿ ಇರುವಂತೆ ನೋಡಿಕೊಳ್ಳುತ್ತಾರೆ. ಅವರ ಮನೆಯಲ್ಲಿ ಇಲ್ಲದಿದ್ದ ಹೂವುಗಳಿರಲಿಲ್ಲ, ಹಣ್ಣಿನ ಮರಗಳಿರಲಿಲ್ಲ? ಮನೆಯನ್ನು ಕಾಯಲು ಗುತ್ತಿಯಂತಹುದೇ ನಾಯಿಗಳು ಸಹಾ! ಇವುಗಳೆಲ್ಲವನ್ನು ಕೇವಲ ಅಲಂಕಾರಕ್ಕಾಗಿ ಬೆಳೆಸದೆ, ಅವುಗಳ ಜೊತೆ ಬಾಂಧವ್ಯವನ್ನೂ ಬೆಳೆಸಿಕೊಂಡಿದ್ದ ಕುವೆಂಪು ಅವರಿಗೆ ಯಾವ ಮರದಲ್ಲಿ ಯಾವ ಹಕ್ಕಿ ಗೂಡು ಕಟ್ಟಿದೆ, ಎಷ್ಟು ಮೊಟ್ಟೆಯಿಟ್ಟಿದೆ, ಯಾವಾಗ ಮೊಟ್ಟೆಯೊಡೆದು ಮರಿ ಆಚೆ ಬಂದು ಹಾರುವಂತಾಗುತ್ತದೆ ಎಂಬ ವಿವರಗಳೆಲ್ಲಾ ತಿಳಿದಿತ್ತು! ಮೈಸೂರಿನಲ್ಲೊಂದು ಮಲೆನಾಡು ಉದಯರವಿ!

ಮಕ್ಕಳ ಮೇಲೆ ಅದೆಷ್ಟು ಕಾಳಜಿ ಪುಟ್ಟಪ್ಪನವರಿಗೆ. ತಾರಿಣಿ ಅವರು ತಮ್ಮ ತಂದೆ ತಮ್ಮ ಕಡೆಗೆ, ಅದರಲ್ಲೂ ಹೆಣ್ಣುಮಕ್ಕಳಾದ ಕಲಾ ಮತ್ತು ತಮ್ಮ ಬಗ್ಗೆ ತಮ್ಮ ಅಣ್ಣ ವಹಿಸುತ್ತಿದ್ದ, ಕೆಲವೊಮ್ಮೆ ಅತಿಯಾದ ಕಾಳಜಿ ಬಗ್ಗೆ ಹೇಳುವಾಗ, ಮಹಾಕವಿ ಹೀಗೂ ಇದ್ದರೆ ಎಂದು ಯೋಚಿಸುವ ಸರದಿ ನಮ್ಮದು. ಅಕ್ಕಾ ಎಂದು ತಮ್ಮ ಹೆಣ್ಣುಮಕ್ಕಳನ್ನು ಸಂಬೋಧಿಸುತ್ತಿದ್ದ ಕುವೆಂಪು, ಇಬ್ಬರನ್ನೂ ತಾವೇ ಕಾಲೇಜಿಗೆ ಬಿಡಲು ಮತ್ತು ಕರೆತರಲು ಹೋಗುತ್ತಿದ್ದುದ್ದು, ಎಂದಾದರೊಮ್ಮೆ ತಡವಾದರೆ ಹುಡುಕಿಕೊಂಡು ಹೊರಟೇ ಬಿಡುತ್ತಿದ್ದರಂತೆ. 8ನೇ ವಯಸ್ಸಿನಲ್ಲಿ ಸ್ಟೂಲಿನಿಂದ ಬಿದ್ದು ಕಾಲಿಗೆ ಪ್ಲಾಸ್ಟರ್ ಹಾಕಿಸಿಕೊಂಡು ತಿಂಗಳಾನುಗಟ್ಟಲೆ ಒದ್ದಾಡಿದ್ದ ತಾರಿಣಿ ಅವರನ್ನು ಕುವೆಂಪು ನೋಡಿಕೊಂಡ ಬಗ್ಗೆ ಓದುತ್ತಿದ್ದರೆ ನಮಗೆ ಕುವೆಂಪು ಅವರ ಮೇಲೆ ಹೆಚ್ಚಿನ ಅಕ್ಕರೆ ಬರುತ್ತದೆ!

ಇನ್ನು ಹೇಮಾವತಿ ಮತ್ತು ಕುವೆಂಪು ಅವರ ಸುಮಧುರ ದಾಂಪತ್ಯದ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ಉದಯರವಿಯನ್ನು ಸ್ವರ್ಗವಾಗಿಸಿದ್ದು ಹೇಮಾವತಿ ಅವರು ಎಂಬ ಮಾತುಗಳು ಕುವೆಂಪು ಅವರ ಬಾಯಿಯಲ್ಲಿಯೇ ಬರುವುದು ಅವರ ಅನುಬಂಧಕ್ಕೆ ಒಂದು ಭಾಷ್ಯ. ಕುವೆಂಪು ಮತ್ತು ಹೇಮಾವತಿ ಅವರಿಗೂ ವಯಸ್ಸಿನ ಅಂತರ ಬಹಳ. ಆದರೂ ಅವರ ಅನುರೂಪದ ದಾಂಪತ್ಯಕ್ಕೆ ಅದು ಅಡ್ಡಿಯಾಗಲೇ ಇಲ್ಲ. ಅವರಿಗಾಗಿಯೇ ಹುಟ್ಟಿದ್ದಾರೇನೋ ಎಂಬಂತೆ ಹೇಮಾವತಿ ಅವರು ಕುವೆಂಪು ಅವರ ಆದರ್ಶಗಳನ್ನು ಮನಸಾರೆ ಪ್ರೀತಿಸಿ ಒಪ್ಪಿ ಅಪ್ಪಿಕೊಂಡಿದ್ದರು. ಕುವೆಂಪು ಅವರಿಗೆ ಹೊಸದಾರಿ ತೋರಿಸಿದ ರಾಮಕೃಷ್ಣ ಆಶ್ರಮದ ಮೇಲೆ ಹೇಮಾವತಿ ಅವರಿಗೂ ಅಷ್ಟೇ ಭಕ್ತಿಯಿತ್ತು. ರಾಮಕೃಷ್ಣ ಪರಮಹಂಸರು ಮತ್ತು ಶಾರದಾಮಾತೆಯರು ಅವರಿಗೂ ಆರಾಧ್ಯ ದೈವ. ಪತಿ ನಿರ್ಮಿಸಿದ ಕನಸಿನ ಮನೆಯನ್ನು ಸ್ವರ್ಗಸದೃಶವಾಗಿಸಿದರು. ಕುವೆಂಪು ಅವರ ಇಚ್ಛೆಯನ್ನರಿತು ನಡೆದರು, ಅದು ಆಹಾರ, ವಿಹಾರದಂತಹ ಲೌಕಿಕ ಮಾತ್ರವಲ್ಲ, ಅವರ ಅನಿಕೇತನ ಮತ್ತು ವಿಶ್ವಮಾನವ ತತ್ವವನ್ನೂ ಪ್ರೀತಿಯಿಂದ ತಮ್ಮದಾಗಿಸಿಕೊಂಡರು. ನನ್ನ ದೃಷ್ಟಿಯಲ್ಲಿ ಹೆಣ್ಣು ಕೇವಲ ಮಾನುಷಿಯಲ್ಲ, ಅಬಲೆಯೂ ಅಲ್ಲ. ಅವಳೊಂದು ಮಹಾಶಕ್ತಿ ಎಂದು ಕುವೆಂಪು ಹೇಳಿರುವುದಕ್ಕೆ ಹೇಮಾವತಿ ಅವರೇ ಕಾರಣ.

ಹಾಗಂತ ಕುವೆಂಪು ಅವರು ಹೇಗಿದ್ದರು? ಹೇಮಾವತಿ ಅವರನ್ನು ತಮ್ಮ ಉಸಿರಾಗಿಸಿಕೊಂಡಿದ್ದ ಕುವೆಂಪು, ಅವರು ಇಲ್ಲವಾದ ಮೇಲೆ ಲೇಖನಿಯನ್ನು ಕೈಗೆತ್ತಿಕೊಳ್ಳಲಿಲ್ಲ ಎನ್ನುವುದಷ್ಟೇ ಸಾಕು ಅವರ ಪ್ರೇಮ ಪರಾಕಾಷ್ಠೆಯನ್ನು ಅರಿಯಲು. ಹೆಚ್ಚು ಓದಿರದ ಹೇಮಾವತಿ ಅವರನ್ನು ಜೊತೆಗೇ ಕರೆದುಕೊಂಡು ಹೊರಟ ಕುವೆಂಪು ಅವರಿಗಾಗಿ ಇಂಗ್ಲಿಷ್‌ನಲ್ಲಿದ್ದ ಪುಸ್ತಕಗಳನ್ನು ಓದಿ ಹೇಳುತ್ತಿದ್ದರು. ಕವನ–ಕಾದಂಬರಿಗಳ ಬಗ್ಗೆ ಅವರ ಜೊತೆ ಅವರಿಗರ್ಥವಾಗುವಂತೆ ಚರ್ಚಿಸುತ್ತಿದ್ದರು. ಅವರ ಹಸು ಎಮ್ಮೆ ಸಾಕುವ ಉತ್ಸಾಹಕ್ಕೆ ಜೊತೆಯಾದರು. ಪೂಚಂತೇ ಕೂಡಾ ಅಣ್ಣನ ನೆನಪು ಪುಸ್ತಕದಲ್ಲಿ ಕುವೆಂಪು ಮಕ್ಕಳಿಬ್ಬರನ್ನೂ ಕರೆದುಕೊಂಡು ಹೇಮಾವತಿ ಅವರ ಆಸೆಯಂತೆ ಹಿಂಡಿ ತರಲು ಗಾಣಕ್ಕೆ ಹೋದ ಪ್ರಸಂಗವನ್ನು ನೆನೆಯುತ್ತಾರೆ. ಕೊಟ್ಟಿಗೆ ಕೆಲಸ ಮಾಡುವ ಕೆಲಸಗಾರರು ಬರದಿದ್ದಾಗ ಕೊಟ್ಟಿಗೆ ಶುಚಿಗೊಳಿಸಿದ್ದಾರೆ. ಹೇಮಾವತಿ ಅವರು ಮೀನು ಶುಚಿಗೊಳಿಸುವಾಗ ಬಿಸಿಲು ತಾಗದಂತೆ ಕೊಡೆ ಹಿಡಿಯುವ ಕುವೆಂಪು ಅವರ ಒಲವು ಎಂತಹುದ್ದಿರಬಹುದು? ಡಾಕ್ಟರ್ ಶಾಪಿಗೆ ಹೋದ ಹೇಮಾವತಿ ಅವರು ಹೊತ್ತಾದರೂ ಬರಲಿಲ್ಲವೆಂದು ತಾವೇ ಹುಡುಕಿಕೊಂಡು ಹೊರಟ ಅವರ ತಹತಹದ ಹಿಂದಿನ ಅಪಾರ ಪ್ರೇಮ ಬಣ್ಣನೆಗೆ ಸಿಲುಕುವುದೇ?

ತಾರಿಣಿ ಅವರೇ ಬರೆದಿರುವಂತೆ, ಕುವೆಂಪು ಅವರು ಹೇಮಾವತಿಯವರು ಎಲ್ಲಿಗೆ ಹೋಗಬೇಕೆಂದರೂ ತಾವೇ ಖುದ್ದಾಗಿ ಕಾರಿನಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಬಟ್ಟೆ ಇತ್ಯಾದಿ ಕೊಂಡುಕೊಳ್ಳಬೇಕೆಂದಿದ್ದರೂ, ಕರೆದುಕೊಂಡು ಹೋಗಿ ಕಾರಿನಲ್ಲಿಯೇ ಕಾಯುತ್ತಾ ಕುಳಿತಿರುತ್ತಿದ್ದರಂತೆ! ಜ್ಞಾನಪೀಠ ಪ್ರಶಸ್ತಿ ದೊರೆತ ಸುದ್ದಿ ಸಿಕ್ಕಿದಾಗ, ಹೇಮಾವತಿ ಅವರ ಆರೋಗ್ಯ ಸರಿ ಇಲ್ಲದಿದ್ದುದರಿಂದ, ಸಂತೋಷಿಸಲಾಗಲಿಲ್ಲ ಎಂಬ ಬಗ್ಗೆ ಅವರಿಗೆ ಯಾವುದೇ ಖೇದವಿಲ್ಲ. ಹೇಮಾವತಿ ಅವರು ಗುಣಮುಖರಾದುದೇ ಅವರಿಗೆ ದೊರೆತ ಪ್ರಶಸ್ತಿ ಎಂಬಂತೆ ಸಂಭ್ರಮಿಸಿದ್ದವರು ಕುವೆಂಪು! ನಾನಿಲ್ಲಿ ಹೇಳದಿರುವ ಘಟನೆ ಸಂಗತಿಗಳೇ ಹೆಚ್ಚಿವೆ. ಹೇಮಾವತಿ ಅವರು ಗತಿಸಿದ ನಂತರದ ದಿನಗಳ ಬರಹಗಳನ್ನು ಓದುತ್ತಿದ್ದರೆ, ಕುವೆಂಪು ಅವರ ಜೀವನದಲ್ಲಿ ಉಂಟಾದ ಖಾಲಿತನದ ಅನುಭವ ನಮಗೂ ಆಗಿ ದುಃಖವೆನಿಸುತ್ತದೆ.

ಇನ್ನು ಮನೆಯವರ ಜೊತೆಗೂಡಿ ಊಟ, ಮಾತು–ಕತೆ, ವಿಹಾರ, ಚಿಕ್ಕ ಚಿಕ್ಕ ಪ್ರವಾಸ ವಾಯು ಸಂಚಾರ, ಮೊಮ್ಮಕ್ಕಳೊಡನೆ ಮುದ್ದು ಜೀವನವನ್ನು ಪೂರ್ಣರೀತಿಯಲ್ಲಿ ಅನುಭವಿಸಿದವರು ಕುವೆಂಪು. ಮನೆಯಲ್ಲಿ ಇಲಿ ಸೇರಿಕೊಂಡಾಗ ಎಲ್ಲರೊಡಗೂಡಿ ಕುವೆಂಪು ಕೂಡಾ ಇಲಿಯನ್ನು ಯಶಸ್ವಿಯಾಗಿ ಹಿಡಿಯುತ್ತಾರೆ. ಗಿಡ ಮರಗಳಲ್ಲಿ ಹೂವು–ಹಣ್ಣು ಬಿಟ್ಟಾಗ ಅವುಗಳನ್ನು ಕಳ್ಳತನವಾಗದಂತೆ ಕಾಯ್ದಿದ್ದಾರೆ. ಹಣ್ಣನ್ನು ತಾವೇ ಸ್ವತಃ ಕೊಯ್ದು ಎಲ್ಲರಿಗೂ ಹಂಚಿ ತಿನ್ನಿಸಿ ಸಂತೋಷಿಸಿದ್ದಾರೆ. ಹೆಂಡತಿ ಮಕ್ಕಳು ನಿಪ್ಪಟ್ಟು ಮಾಡುವಾಗ ಜೊತೆಯಲ್ಲಿ ಕುಳಿತು ನಿಪ್ಪಟ್ಟು ಲಟ್ಟಿಸಿದ್ದಾರೆ. ಹಬ್ಬಗಳು ಬಂದಾಗ ಹೆಂಡತಿ ಮಾಡಿದ ಅಡುಗೆಯನ್ನು ಹೊಗಳುತ್ತಾ ಸವಿದು ಉಂಡು, ದೇವರ ಮನೆಗೆ ಹೂವಿನ ಅಲಂಕಾರ ಮಾಡುತ್ತಿದ್ದ ಹೆಣ್ಣುಮಕ್ಕಳ ಶ್ರದ್ಧೆಯನ್ನು ಗಮನಿಸಿ ಮನಸಾರೆ ಕೊಂಡಾಡಿದ್ದಾರೆ. ಮೌಢ್ಯಕ್ಕೂ ಶುದ್ಧ ಭಕ್ತಿ ಶ್ರದ್ಧೆಗೂ ಇದ್ದ ತೆಳುವಾದ ವ್ಯತ್ಯಾಸವನ್ನು ಕುವೆಂಪು ಅರಿತಿದ್ದರು. ಹಾಗಾಗಿಯೇ ಎಲ್ಲ ಹಬ್ಬಗಳನ್ನೂ ಮನೆಯಲ್ಲಿ ಸಂತಸ ಸಂಭ್ರಮದಿಂದ ಆಚರಿಸುತ್ತಿದ್ದರು. ಇಂದಿಗೂ ಕುವೆಂಪು ಅವರ ಆಸೆಯಂತೆ ದೀಪಾವಳಿ ಪಟಾಕಿ ಹಚ್ಚಿಯೇ ಸಂಪನ್ನಗೊಳ್ಳುತ್ತದೆ ಉದಯರವಿಯಲ್ಲಿ. ಇದೇ ಪುಸ್ತಕದಲ್ಲಿ ಕುವೆಂಪು ಅವರು ಬರೆಯಬೇಕೆಂದಿದ್ದ ಕಾಲೋಸ್ಮಿ ಎಂಬ ಪುಸ್ತಕದ ಬಗೆಗೂ ತಾರಿಣಿ ಹೇಳುತ್ತಾರೆ. ಸ್ವಾತಂತ್ರ್ಯ ಸಂಗ್ರಾಮದಿಂದ ಪ್ರಾರಂಭ ಮಾಡಿ ಸಮಕಾಲೀನ ಸಮಯದವರೆಗೂ ಕತೆ ಹರಡಿಕೊಳ್ಳುವ ಹಾಗೆ ಬರೆಯುವ ಇರಾದೆ ಕುವೆಂಪು ಅವರಿಗಿತ್ತು ಎಂದು ತಾರಿಣಿ ನೆನಪಿಸಿಕೊಳ್ಳುತ್ತಾರೆ. ಹಾಗೆಯೇ, 'ಮಲೆಗಳಲ್ಲಿ ಮದುಮಗಳು' ಬರೆಯಲು ಸಿದ್ಧಪಡಿಸಿದ್ದ ಕಾದಂಬರಿ ಮ್ಯಾಪ್‌ನ ಪ್ರಸ್ತಾಪವೂ ಇಲ್ಲಿ ಓದಬಹುದು. ಜ್ಞಾನಪೀಠ ಪ್ರಶಸ್ತಿ ಪ್ರದಾನ ಸಮಾರಂಭಕ್ಕೂ ಹೋಗಲು ನಿರಾಕರಿಸಿದ್ದ ಕುವೆಂಪು ಅವರ ನಿರ್ಲಿಪ್ತತೆ ಅವರಿಗೆ ಮಾತ್ರ ಸಾಧ್ಯವೇನೋ. ಒಂದು ಸುಂದರ ಪ್ರಪಂಚ ನಿರ್ಮಿಸಿಕೊಂಡು ಅದನ್ನು ಎರಡು ವಿಭಾಗಗಳನ್ನಾಗಿ ವಿಂಗಡಿಸಿಕೊಂಡಿದ್ದರೇನೋ ಎಂಬಂತೆ ಜೀವಿಸಿದ ಕುವೆಂಪು ಕಳೆದು ಹೋದ ಒಂದು ಸುಂದರ ಸಮಯದ ಚಿತ್ರ ಮಗಳು ಕಂಡ ಕುವೆಂಪು. ಮೈಸೂರಿನಲ್ಲಿ ಬದುಕಿದ್ದ ಅಸಮಾನ್ಯ ಮಹಾಕವಿಯ ಸಾಮಾನ್ಯ ರೂಪ ಪರಿಚಯಿಸುವ ಈ ಕೃತಿ ಓದುವಾಗ ಹಲವು ಬಾರಿ ಮನಸು ಆರ್ದ್ರವಾಯಿತು, ಕಣ್ಣುಗಳು ಹನಿಗೂಡಿದವು. ರಸಋಷಿಯ ಬೌದ್ಧಿಕ ಮುಖದ ಪರಿಚಯವಿರುವ ನಮಗೆ, ಅವರನ್ನು ಲೌಕಿಕ ಕೌಟುಂಬಿಕ ನೆಲೆಯಲ್ಲಿ ನೋಡುವ ಅಪೂರ್ವ ಅವಕಾಶ ದೊರಕಿಸಿ ಕೊಡುವ ಕೃತಿ ಮಗಳು ಕಂಡ ಕುವೆಂಪು. ಅವರ ಹುಟ್ಟುಹಬ್ಬ ಇನ್ನೇನು ಸಮೀಪಿಸುತ್ತಿದೆ. ಕುವೆಂಪು ಮತ್ತೆ ಮತ್ತೆ ನೆನಪಾಗುತ್ತಲೇ ಇರುತ್ತಾರೆ. ಕವಿ ಕಾದಂಬರಿಕಾರರಿಗೆ ಮಾತ್ರವಲ್ಲ, ಒಬ್ಬ ಆದರ್ಶ ಪುರುಷ ಹೇಗಿರಬೇಕೆಂಬುದಕ್ಕೂ ಮಾದರಿಯಾಗಿ ಎಲ್ಲರ ಮನದಲ್ಲಿ ನೆಲೆ ನಿಂತಿದ್ದಾರೆ.

ಕರ್ನಾಟಕ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಚಿತ್ರಕಲಾ, ಮೇಕಪ್ ಮಾಡುವ ಸ್ಪರ್ಧೆ



ಮೈಸೂರು,ಡಿ.24– ಡಿ.25ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 12 ಗಂಟೆವರೆಗೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಉಪಸಮಿತಿ ವತಿಯಿಂದ 5 ವರ್ಷದಿಂದ 10 ವರ್ಷದೊಳಗಿನವರಿಗೆ ಮತ್ತು 11 ವರ್ಷದಿಂದ 15 ವರ್ಷದೊಳಗಿನವರಿಗೆ ಚಿತ್ರಕಲಾ ಸ್ಪರ್ಧೆ ಮತ್ತು ಮಧ್ಯಾಹ್ನ 12ರಿಂದ 3 ಗಂಟೆವರೆಗೆ ಮಹಿಳೆಯರಿಗಾಗಿ ಮೇಕಪ್ ಮಾಡುವ ಸ್ಪರ್ಧಾ (ಅಲಂಕಾರ ಸ್ಪರ್ಧೆ) ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ತಮ್ಮ ಹೆಸರುಗಳನ್ನು ಮಹಿಳಾ ಮತ್ತು ಮಕ್ಕಳ ಉಪಸಮಿತಿ ಅಧ್ಯಕ್ಷೆ ಭವ್ಯ ಅಭಿಷೇಕ್, ಮೊ.ಸಂ: 9844278737 ಮತ್ತು ಅನುಸೂಯ ಮೊ.ಸಂ: 9110213807 ಅನ್ನು ಸಂಪರ್ಕಿಸಿ ನೋಂದಾಯಿಸಿಕೊಳ್ಳಬಹುದಾಗಿದೆ. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮಹಿಳಾ ಮತ್ತು ಮಕ್ಕಳ ಉಪಸಮಿತಿ ವತಿಯಿಂದ ಆಕರ್ಷಕ ಬಹುಮಾನ ನೀಡಲಾಗುವುದು ಎಂದು ಪ್ರಾಧಿಕಾರದ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದಿನಿಂದ ಲಲಿತ ಕಲಾ ಶಿಬಿರ

ಮೈಸೂರು, ಡಿ.24–ಹುಣಸೂರು ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ಗ್ರಾಮೀಣ ಮಕ್ಕಳಿಗಾಗಿ 3 ದಿನಗಳ ಉಚಿತ ಲಲಿತ ಕಲಾ ಶಿಬಿರವನ್ನು ಬಾ ಸೃಷ್ಟಿ ತಂಡದಿಂದ ಡಿ.25ರಿಂದ 28ರವರೆಗೆ ಪ್ರತಿದಿನ ಬೆಳಗ್ಗೆ 10.30ರಿಂದ ಸಂಜೆ 4.30ರವರೆಗೆ ಮುಳ್ಳೂರು ಸರ್ಕಾರಿ ಶಾಲೆಯಲ್ಲಿ ಆಯೋಜಿಸಲಾಗಿದೆ. ಶಿಬಿರದಲ್ಲಿ ಕಾಗದದ ಕತ್ತರಿ ಕಲೆ, ಕಾಗದದಲ್ಲಿ ಹಲವಾರು ಕಲಾಕೃತಿಗಳ ತಯಾರಿ, ಕಿರೀಟಗಳ ತಯಾರಿ, ಮುಖವಾಡಗಳ ತಯಾರಿ, ಬಿತ್ತಿಚಿತ್ರಗಳು, ಚಿತ್ರಕಲೆ, ಹಸೆ ಚಿತ್ರ ಮುಂತಾದವುಗಳನ್ನು ಹೇಳಿಕೊಡಲಾಗುವುದು. ಶಿಬಿರದ ಸಂಪನ್ಮೂಲ ವ್ಯಕ್ತಿಗಳಾಗಿ ಎಸ್.ಎನ್.ರಮೇಶ್, ಶ್ರೀನಿವಾಸಚಾರಿ, ಖಾಜು ಗುತ್ತಲು, ಎಸ್.ಎಫ್. ಹುಸೇನಿ, ಮಂಜುನಾಥಸಿಂಧೆ ಭಾಗವಹಿಸಲಿದ್ದಾರೆ.

ಸುಳ್ಳು ಪ್ರಕರಣ ವಾಪಸ್ ಪಡೆಯಲು ಆಗ್ರಹ

ಮೈಸೂರು, ಡಿ.24 (ಜಿಎ)– ಒಳ ಮೀಸಲಾತಿ ಸಂಪೂರ್ಣ ಜಾರಿಗಾಗಿ ಹೋರಾಟದ ಭಾಗವಾಗಿ ಡಿ.6ರಂದು ವರುಣ ವ್ಯಾಪ್ತಿಯಲ್ಲಿ ಪಾದಯಾತ್ರೆ ನಡೆಸಲು ಉದ್ದೇಶಿಸಿದ್ದವರ ಮೇಲೆ ವರುಣ ಠಾಣೆಯಲ್ಲಿ ದಾಖಲಿಸಿರುವ ಸುಳ್ಳು ಪ್ರಕರಣ ಹಿಂಪಡೆಯಬೇಕೆಂದು ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಹೋರಾಟ ಸಮಿತಿಯ ವಕೀಲ ಎಸ್.ಮಾರೆಪ್ಪ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಿಎಂ ಸ್ವಗ್ರಾಮ ಸಿದ್ದರಾಮನಹುಂಡಿಯಿಂದ ಪಾದಯಾತ್ರೆ ಕೈಗೊಳ್ಳಬೇಕೆಂದಿದ್ದಾಗ ತಾವು ಯಾರೂ ಯಾರ ವಿರುದ್ಧವೂ ಧಿಕ್ಕಾರ ಕೂಗಲಿಲ್ಲ, ಇಲ್ಲವೇ ಯಾವುದೇ ವರದಿಯನ್ನೂ ವಿರೋಧಿಸಲಿಲ್ಲ. ಹೀಗಿದ್ದರೂ ರಾತ್ರೋರಾತ್ರಿ ಜಿಲ್ಲಾಧಿಕಾರಿಯಿಂದ ಪ್ರತಿಬಂಧಕಾಜ್ಞೆ ಜಾರಿಗೊಳಿಸಿ, ಅದರ ಮಾಹಿತಿಯನ್ನು ತಮಗೂ ನೀಡದೇ, ಅದನ್ನು ಉಲ್ಲಂಘಿಸಿರುವುದಾಗಿ ಆರೋಪಿಸಿ ವಶಕ್ಕೆ ಪಡೆದು ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದು ಆರೋಪಿಸಿದರು.

ಒಳ ಮೀಸಲಾತಿ ಸಂಪೂರ್ಣ ಜಾರಿಗೊಳಿಸಬೇಕು. ಇಲ್ಲದಿದ್ದರೆ ಕುರ್ಚಿ ಬಿಡಿ ಎಂಬ ಆಂದೋಲನ ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಶಿವರಾಯ ಅಕ್ಕರಕಿ, ಕನಿಕೇನಹಳ್ಳಿ ಕೃಷ್ಣಪ್ಪ, ಭಾನುಪ್ರಸಾದ್, ನರಸಿಂಹಮೂರ್ತಿ, ಗಂಗಯ್ಯ, ವೆಂಕಟರಮಣ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಗುರುವಾರ 25 ಡಿಸೆಂಬರ್ 2025

ವಿದ್ಯಾರ್ಥಿನಿಲಯಗಳಲ್ಲಿ ಮೂಲ ಸೌಕರ್ಯಕ್ಕೆ ಆಗ್ರಹಿಸಿ ಸಂಶೋಧಕರು, ದಲಿತ ವಿದ್ಯಾರ್ಥಿಕೂಟ ಪ್ರತಿಭಟನೆ



ಮೈಸೂರು ವಿವಿಯ ವಿದ್ಯಾರ್ಥಿನಿಲಯಗಳಲ್ಲಿ ಮೂಲ ಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ಸಂಶೋಧಕರು, ದಲಿತ ವಿದ್ಯಾರ್ಥಿ ಒಕ್ಕೂಟದಿಂದ ಮಾನಸಗಂಗೋತ್ರಿಯಲ್ಲಿರುವ ವಿದ್ಯಾರ್ಥಿನಿಲಯದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಡಿ.24(ಜಿಎ)–ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ವಿದ್ಯಾರ್ಥಿನಿಲಯಗಳಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸುವಂತೆ ಒತ್ತಾಯಿಸಿ ಸಂಶೋಧಕರು, ದಲಿತ ವಿದ್ಯಾರ್ಥಿ ಒಕ್ಕೂಟದಿಂದ ಮಾನಸ ಗಂಗೋತ್ರಿಯಲ್ಲಿರುವ ವಿದ್ಯಾರ್ಥಿನಿಲಯದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಸ್ನಾತಕ ಹಾಗೂ ಸ್ನಾತಕೋತ್ತರ ಪುರುಷ ಮತ್ತು ಮಹಿಳಾ ವಿದ್ಯಾರ್ಥಿನಿಲಯಗಳಲ್ಲಿ ಕುಡಿಯುವ ನೀರಿನ ಫಿಲ್ಟರ್ ಮತ್ತು ಬಿಸಿ ನೀರಿನ ಗೀಸರ್ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಬೇಕು. ಕುಡಿಯಲು ಹಾಗೂ ಸ್ನಾನ ಮಾಡಲು ನೀರು ಇಲ್ಲದೇ ವಿದ್ಯಾರ್ಥಿಗಳು ಕಷ್ಟಪಡುತ್ತಿದ್ದಾರೆ ಎಂದು ಕಿಡಿಕಾರಿದರು. ಈ ವೇಳೆ ಪ್ರತಿಭಟನೆ ಸ್ಥಳಕ್ಕಾಗಮಿಸಿದ ಮೈಸೂರು ವಿವಿಯ ಮುಖ್ಯ ಎಂಜಿನಿಯರ್, ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಸಂಶೋಧಕರ ಸಂಘದ ಅಧ್ಯಕ್ಷ ಶಿವಶಂಕರ್, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಕೃಷ್ಣಮೂರ್ತಿ, ಸಂಶೋಧಕರಾದ ಪ್ರದೀಪ್, ಲಿಂಗರಾಜು, ಮಹೇಶ್ ಪಿ.ಮರಳ್ಳಿ, ಸಂದೇಶ್, ಕಾರ್ತಿಕ್, ಪ್ರೀತಮ್, ರವಿಕುಮಾರ, ಸಿದ್ದಾರ್ಥ್ ಅವಿನಾಶ್, ಕವಿರಾಜ್, ಧೀರಜ್, ಬಾಬು, ಡಿಎಸ್ಎಫ್ ಮಾಜಿ ಕಾರ್ಯದರ್ಶಿ ಗೌತಮ್‌ಕೋಟೆ, ತೇಜಸ್ ಮೋಹನ್ ದಾಸ್ ಮತ್ತಿತರರು ಪಾಲ್ಗೊಂಡಿದ್ದರು.

ಬಾಹ್ಯಾಕಾಶದಲ್ಲಿ ಇಸ್ರೋ ಮತ್ತೊಂದು ಐತಿಹಾಸಿಕ ಸಾಧನೆ

ಬ್ಲ್ಯೂಬರ್ಡ್ ಬ್ಲ್ಯಾಕ್–2 ಮಿಷನ್: ಎಲ್‌ವಿಎಂ3–ಎಂ6 ರಾಕೆಟ್ ಯಶಸ್ವಿ ಉಡಾವಣೆ



ಶ್ರೀಹರಿಕೋಟಾ, ಡಿ.24– ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋ ಬಾಹ್ಯಾಕಾಶದಲ್ಲಿ ಮತ್ತೊಂದು ಐತಿಹಾಸಿಕ ಸಾಧನೆಯನ್ನು ಮಾಡಿದೆ. ಅಮೆರಿಕಾದ ಬ್ಲ್ಯೂಬರ್ಡ್ ಬ್ಲ್ಯಾಕ್–2 ಉಪಗ್ರಹವನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದೆ.

'ಬ್ಲೂಬರ್ಡ್ ಬ್ಲಾಕ್–2' ಉಪಗ್ರಹವನ್ನು ಇಂದು (ಡಿಸೆಂಬರ್ 24) ಬೆಳಿಗ್ಗೆ 8.55ಕ್ಕೆ ಆಂಧ್ರ ಪ್ರದೇಶದ ಶ್ರೀಹರಿಕೋಟಾ ಉಡ್ಡಯನ ಕೇಂದ್ರದ 2ನೇ ಲಾಂಚ್ ಪ್ಯಾಡ್‌ನಿಂದ ಯಶಸ್ವಿಯಾಗಿ ಉಡಾವಣೆ ಮಾಡಲಾಗಿದೆ.

ಎಲ್‌ವಿಎಂ3–ಎಂ6 ಬ್ಲೂಬರ್ಡ್ ಬ್ಲಾಕ್–2 ಉಪಗ್ರಹ ಉಡಾವಣೆಯಾದ ಸುಮಾರು 15 ನಿಮಿಷಗಳ ನಂತರ ಕೆಳ ಭೂಮಿಯ ಕಕ್ಷೆಗೆ ಸೇರಿಸಿತು. ಇದು ಭೂ ಕಕ್ಷೆಯಲ್ಲಿ ನಿಯೋಜಿಸಲಾದ ಅತಿದೊಡ್ಡ ವಾಣಿಜ್ಯ ಸಂವಹನ ಉಪಗ್ರಹವಾಗಿದೆ. ಬ್ಲೂಬರ್ಡ್ ಬ್ಲಾಕ್–2 ಉಪಗ್ರಹವು ಭಾರತೀಯ ನೆಲದಿಂದ ಎಲ್‌ವಿಎಂ3ನಿಂದ ಉಡಾವಣೆ ಮಾಡಲಾದ ಅತ್ಯಂತ ಭಾರವಾದ ಪೇಲೋಡ್ ಆಗಿದೆ.

ಈ ಸಂವಹನ ಉಪಗ್ರಹವನ್ನು ಅಮೆರಿಕದ ಎಎಸ್‌ಟಿ ಸ್ಪೇಸ್‌ಮೊಬೈಲ್ ಅಭಿವೃದ್ಧಿಪಡಿಸಿದೆ. ಇದು ಮುಂದಿನ ಪೀಳಿಗೆಯ ಬ್ಲೂಬರ್ಡ್ ಬ್ಲಾಕ್–2 ಸಂವಹನ ಉಪಗ್ರಹದ ಭಾಗವಾಗಿದ್ದು, ಪ್ರಮಾಣಿತ ಮೊಬೈಲ್ ಸ್ಮಾರ್ಟ್‌ಫೋನ್‌ಗಳಿಗೆ ನೇರವಾಗಿ ಬಾಹ್ಯಾಕಾಶ ಆಧಾರಿತ ಸೆಲ್ಯುಲಾರ್ ಬ್ರಾಡ್‌ಬ್ಯಾಂಡ್ ಸಂಪರ್ಕವನ್ನು ಒದಗಿಸಲು ವಿನ್ಯಾಸಗೊಳಿಸಲಾಗಿದೆ.

ಬ್ಲೂಬರ್ಡ್ ಬ್ಲಾಕ್–2 ಮಿಷನ್ ಜಾಗತಿಕ ಲಿಯೋ ಸಮೂಹದ ಭಾಗವಾಗಿದ್ದು, ಇದು ಉಪಗ್ರಹದ ಮೂಲಕ ನೇರ–ಮೊಬೈಲ್ ಸಂಪರ್ಕವನ್ನು ಒದಗಿಸುತ್ತದೆ. ಈ ಸಮೂಹವು 4ಜಿ ಮತ್ತು 5ಜಿ ಧ್ವನಿ ಮತ್ತು ವೀಡಿಯೊ ಕರೆಗಳು, ಪಠ್ಯಗಳು, ಸ್ಟ್ರೀಮಿಂಗ್ ಮತ್ತು ಡೇಟಾವನ್ನು ಎಲ್ಲರಿಗೂ, ಎಲ್ಲೆಡೆ, ಎಲ್ಲಾ ಸಮಯದಲ್ಲೂ ಸಕ್ರಿಯಗೊಳಿಸುತ್ತದೆ.

ಇದು 223ಎಂ ಹಂತದ ಶ್ರೇಣಿಯನ್ನು ಹೊಂದಿದೆ, ಇದು ಭೂಮಿಯ ಕೆಳ ಕಕ್ಷೆಗೆ ನಿಯೋಜಿಸಲಾದ ಅತಿದೊಡ್ಡ ವಾಣಿಜ್ಯ ಸಂವಹನ ಉಪಗ್ರಹವಾಗಿದೆ ಎಂದು ಇಸ್ರೋ ಮಾಹಿತಿ ನೀಡಿದೆ. ಬ್ಲೂಬರ್ಡ್–6 ಉಪಗ್ರಹ ಇಲ್ಲಿಯ ತನಕ ಭಾರತೀಯ ರಾಕೆಟ್ ಬಾಹ್ಯಾಕಾಶಕ್ಕೆ ಒಯ್ದಿರುವ ಅತ್ಯಂತ ತೂಕದ ಉಪಗ್ರಹ ಎಂಬ ಕೀರ್ತಿಗೆ ಪಾತ್ರವಾಗಿದೆ. ಎಲ್‌ವಿಎಂ3 ರಾಕೆಟ್ ಒಟ್ಟು ಎಂಟು ಯೋಜನೆಗಳನ್ನು ಈಗಾಗಲೇ ಯಶಸ್ವಿಯಾಗಿ ಪೂರ್ಣಗೊಳಿಸಿದೆ.

ಪ್ರಸ್ತುತ ಉಡಾವಣಾ ಯೋಜನೆ ಇಸ್ರೋದ ವಾಣಿಜ್ಯಿಕ ಅಂಗವಾದ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ (ಎನ್‌ಎಸ್‌ಐಎಲ್) ಮತ್ತು ಅಮೆರಿಕಾ ಮೂಲದ ಎಎಸ್‌ಟಿ ಸ್ಪೇಸ್ ಮೊಬೈಲ್ ಸಂಸ್ಥೆಗಳ ನಡುವೆ ನಡೆದಿರುವ ವಾಣಿಜ್ಯಿಕ ಒಪ್ಪಂದದ ಭಾಗವಾಗಿದೆ. ಒಂದು ಉಡಾವಣಾ ಸೇವೆ ಒದಗಿಸುವ ಸಂಸ್ಥೆಯಾಗಿ ಇಸ್ರೋ ವಿದೇಶೀ ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಉಡಾವಣೆಗೊಳಿಸಿ ಆದಾಯ ಸಂಪಾದಿಸುತ್ತದೆ.

ಎನ್‌ಎಸ್‌ಐಎಲ್ ಮೂಲಕ ನಿರ್ವಹಿಸಲ್ಪಡುವ ಈ ವಾಣಿಜ್ಯಿಕ ಉಡಾವಣೆಗಳು ಒಂದು ರೀತಿ ಟ್ಯಾಕ್ಸಿ ಸೇವೆಯಂತೆ ಕಾರ್ಯಾಚರಿಸುತ್ತವೆ. ಇಲ್ಲಿ ಅಮೆರಿಕದ ಕಂಪನಿ ಪ್ರಯಾಣಿಕನಾಗಿದ್ದು, ಉಡಾವಣೆ ನಡೆಸಿಕೊಟ್ಟದ್ದಕ್ಕೆ ಭಾರತ ಸರ್ಕಾರಕ್ಕೆ ಹಣ ಪಾವತಿಸುತ್ತದೆ. ಈ ಮೊದಲು ಉಪಗ್ರಹವನ್ನು ಡಿಸೆಂಬರ್ 15ರಂದು ಉಡಾವಣೆಗೊಳಿಸಲು ಉದ್ದೇಶಿಸಲಾಗಿತ್ತು. ಆದರೆ ಉಡಾವಣೆ ಮುಂದೂಡಲ್ಪಟ್ಟಿತು. ಇಸ್ರೋ ವಿಳಂಬಕ್ಕೆ ನಿರ್ದಿಷ್ಟ ಕಾರಣವನ್ನೇನೂ ತಿಳಿಸಿರಲಿಲ್ಲ.

ಇಂದು ಶ್ರೀ ವೇದಮಾತಾ ಗುರುಕುಲದ 20ನೇ ವಾರ್ಷಿಕೋತ್ಸವ

ಮೈಸೂರು: ನಗರದ ರಾಮಾನುಜ ರಸ್ತೆಯಲ್ಲಿರುವ ಶ್ರೀ ವೇದಮಾತಾ ಗುರುಕುಲದ (ಪೌರೋಹಿತ್ಯ ತರಬೇತಿ ಸಂಸ್ಥೆ) 20ನೇ ವಾರ್ಷಿ ಕೋತ್ಸವ, ಗ್ರಂಥ ಬಿಡುಗಡೆ ಸಮಾರಂಭ ನಾಳೆ (ಗುರುವಾರ) ಆಯೋಜನೆಗೊಂಡಿದೆ.

ಅಗ್ರಹಾರದ ಶಂಕರಮಠ ಆವರಣದ ವಿದ್ಯಾಭಾರತಿ ಕಲ್ಯಾಣ ಮಂದಿರದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಹಮ್ಮಿಕೊಂಡಿರುವ ಸಭಾ ಕಾರ್ಯಕ್ರಮವನ್ನು ಶ್ರೀ ಕ್ಷೇತ್ರ ಮೇಲುಕೋಟೆ ಶ್ರೀ ಚಲುವನಾರಾಯಣ ಸ್ವಾಮಿ ದೇವಾಲಯದ ಸ್ಥಾನಿಕರಾದ ಶ್ರೀನಿವಾಸ ನರಸಿಂಹನ್ ಉದ್ಘಾಟಿಸಲಿದ್ದಾರೆ. ಅಗರ ಗುರುಮಠದ ಮಹಾಪೋಷಕ ರಾಮಾರಾಧ್ಯ, ಅಧ್ಯಾತ್ಮ ಚಿಂತಕ ಯಗಟಿ ಶಿವಲಿಂಗ ಸ್ವಾಮಿ ಶಾಸ್ತ್ರಿ, ಆಗಮಿಕರಾದ ಮನೋಹರ ಶಾಸ್ತ್ರಿ, ರೋಟರಿ ಹೆರಿಟೇಜ್ ಸಂಸ್ಥೆ ಕಾರ್ಯದರ್ಶಿ ಬಾಲಸುಬ್ರಹ್ಮಣ್ಯ ಇತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಇದೇ ಸಂದರ್ಭ ಸರಸ್ವತಿ ಪೂಜೆ, ಜ್ಞಾನ ಸಾಧಕ ಶಾಂತಿ ಹೋಮ, ವೀರಗಾಸೆ ಕಲಾ ಪ್ರದರ್ಶನ, ಪೌರೋಹಿತ್ಯ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ, ವಿವಿಧ ರಂಗದ ಗಣ್ಯರಿಗೆ ಸನ್ಮಾನ, ದಿನದರ್ಶಿಕೆ ಬಿಡುಗಡೆ ಕಾರ್ಯಕ್ರಮವೂ ಇದೆ ಎಂದು ಗುರುಕುಲದ ಸಂಸ್ಥಾಪಕ ಮಂಜುನಾಥ ಆರಾಧ್ಯ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೀರಶೈವ ಲಿಂಗಾಯತ ಮಹಾಸಭಾದಿಂದ ಶಾಮನೂರು ಶಿವಶಂಕರಪ್ಪರಿಗೆ ನುಡಿ ನಮನ

ನೂತನ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆಗೆ ಸನ್ಮಾನ



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಹಾಲಿ ನೂತನ ರಾಷ್ಟ್ರೀಯ ಅಧ್ಯಕ್ಷ, ಅರಣ್ಯ ಸಚಿವ ಈಶ್ವರ ಖಂಡ್ರೆ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ.24–ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ಡಾ.ಶಾಮನೂರು ಶಿವಶಂಕರಪ್ಪ ಅವರ ನುಡಿನಮನ ಕಾರ್ಯಕ್ರಮವು ಬೆಂಗಳೂರಿನ ತರಳಬಾಳು ಕೇಂದ್ರದಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಮಹಾಸಭಾದ ಉಪಾಧ್ಯಕ್ಷರು ಹಾಗೂ ಹಾಲಿ ನೂತನ ರಾಷ್ಟ್ರೀಯ ಅಧ್ಯಕ್ಷರಾದ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮಹಾಸಭಾದ ನಿಕಟಪೂರ್ವ ರಾಜ್ಯ ಕೋಶಾಧ್ಯಕ್ಷ ವರುಣ ಮಹೇಶ್, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾದ ಮೊತ್ತ ಬಸವರಾಜಪ್ಪ ಮತ್ತು ಶ್ರೀಮತಿ ಅನು ಚಂದ್ರಶೇಖರ್, ಜಿಲ್ಲಾ ನಿರ್ದೇಶಕರಾದ ದಾರಿಪುರ ಡಿ.ಚಂದ್ರಶೇಖರ್ ಸೇರಿದಂತೆ ಲಾಲನಹಳ್ಳಿ ಮಹೇಶ್, ಮನುಗನಹಳ್ಳಿ ಮಂಜುನಾಥ್, ಕೂಡನಹಳ್ಳಿ ಮಲ್ಲೇಶ್, ವೃಷಬೇಂದ್ರ, ಮಹೇಶ್, ದಿನೇಶ್ ಹಾಗೂ ಶಾಂತಿಪುರ ಮಂಜುನಾಥ್ ಇನ್ನಿತರರು ಹಾಜರಿದ್ದರು.

ಡಿ.30ಕ್ಕೆ ಜನ ಸಂಪರ್ಕ ಸಭೆ

ಮೈಸೂರು,ಡಿ.24– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವತಿಯಿಂದ ನ.ರಾ ಮೊಹಲ್ಲಾ ವಿಭಾಗದ ವ್ಯಾಪ್ತಿಯ ಡಿ.26 ರಂದು ಚಾಮುಂಡಿಪುರಂ ಹಾಗೂ ಜ್ಯೋತಿನಗರ ಉಪವಿಭಾಗ ಕಚೇರಿಗಳಲ್ಲಿ 3ನೇ ತ್ರೈಮಾಸಿಕ ಜನಸಂಪರ್ಕ ಸಭೆಯನ್ನು ನಡೆಸಲು ಉದ್ದೇಶಿಸಲಾಗಿತ್ತು. ಆದರೆ ಆಡಳಿತಾತ್ಮಕ ಕಾರಣಗಳಿಂದ ಸದರಿ ದಿನದಂದು ಜನಸಂಪರ್ಕ ಸಭೆಯನ್ನು ನಡೆಸಲು ಸಾಧ್ಯವಾಗದಿರುವುದರಿಂದ, ಡಿ.30ರಂದು ಜನಸಂಪರ್ಕ ಸಭೆಯನ್ನು ನಡೆಸಲಾಗುವುದು. ಆದುದರಿಂದ ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ ಉಪವಿಭಾಗಗಳಲ್ಲಿ ನಡೆಯುವ ಜನಸಂಪರ್ಕ ಸಭೆಯಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಮೃಗಾಲಯದ 'ತಾಯಮ್ಮ' ಸಾವು



ಮೈಸೂರು, ಡಿ.24(ಎಂಟಿವೈ)–ಅನಾರೋಗ್ಯದಿಂದ ಬಳಲುತ್ತಿದ್ದ ಮೈಸೂರಿನ ಮೃಗಾಲಯದ 'ತಾಯಮ್ಮ' ಹುಲಿ ಬುಧವಾರ ಮುಂಜಾನೆ ಮೃತಪಟ್ಟಿದೆ ಎಂದು ಮೃಗಾಲಯದ ಕಾರ್ಯ ನಿರ್ವಾಹಕ ನಿರ್ದೇಶಕಿ ಪಿ.ಅನುಷ ತಿಳಿಸಿದ್ದಾರೆ. ತಾಯಮ್ಮ ಹೆಣ್ಣು ಹುಲಿಗೆ 4 ವರ್ಷ, 10 ತಿಂಗಳು ವಯಸ್ಸಾಗಿದ್ದು, ಅದನ್ನು ಎರಡು ತಿಂಗಳ ಮರಿಯಾಗಿದ್ದಾಗ 2021ರ ಮಾ.28ರಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಿಂದ ರಕ್ಷಣೆ ಮಾಡಿ ಮೈಸೂರು ಮೃಗಾಲಯಕ್ಕೆ ತಂದು ಆರೈಕೆ ಮಾಡಿ, ಸಾಕಲಾಗಿತ್ತು. ಮೃಗಾಲಯದ ಪಾಲಕರು ನೀಡಿದ ಪ್ರೀತಿಯ ಆರೈಕೆಯಿಂದ ಬೆಳೆದಿದ್ದ ತಾಯಮ್ಮ ಹುಲಿ, ಕಳೆದ 10 ದಿನದ ಹಿಂದೆ ಅನಾರೋಗ್ಯಕ್ಕೀಡಾಗಿ ಆಹಾರ ತ್ಯಜಿಸಿತ್ತು. ರಕ್ತಕಣದ ಸಮಸ್ಯೆಗೊಳಗಾಗಿದ್ದ ತಾಯಮ್ಮ ಹುಲಿಗೆ ಡಿ.17ರಿಂದ ವಿಶೇಷ ಆರೈಕೆಯೊಂದಿಗೆ ಚಿಕಿತ್ಸೆ ಆರಂಭಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಇಂದು ಬೆಳಗ್ಗೆ 3.45ರಲ್ಲಿ ತಾಯಮ್ಮ ಮೃತಪಟ್ಟಿದೆ. ನಿಯಮಾನುಸಾರ ಹುಲಿಯ ಮೃತದೇಹವನ್ನು ಅಂತ್ಯಕ್ರಿಯೆ ಮಾಡಲಾಗಿದೆ. ತಾಯಮ್ಮ ಹುಲಿ ನಿಧನಕ್ಕೆ ಮೃಗಾಲಯದ ಸಿಬ್ಬಂದಿ ಕಂಬನಿ ಮಿಡಿದಿದ್ದಾರೆ.

ಪ್ರಮಾಣ ಪತ್ರ ವಿತರಣೆ...



ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ಜಯಪುರ ಶಾಖೆಯಲ್ಲಿ ಫ್ಯಾಷನ್ ಡಿಸೈನಿಂಗ್, ಬ್ಯೂಟಿಸಿಯನ್ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಿಸಿದರು. ಸಮಾಜ ಸೇವಕ ಎಸ್.ಶ್ರೀಕಾಂತ್, ಜಯಪುರ ಗ್ರಾಪಂ ಅಧ್ಯಕ್ಷ ಎಂ.ಮಾದೇವಯ್ಯ, ಜಯಪುರ ಠಾಣಾ ಪಿಎಸ್ಐ ಕಾಳೇಗೌಡ, ಜೀವನಾಧಾರ ಕೇಂದ್ರ ಹಿರಿಯ ವ್ಯವಸ್ಥಾಪಕ ಪಿ.ಡಿ.ನಾಯಕ್, ಸಂಸ್ಥೆ ಸಂಯೋಜಕ ಅಬ್ದುಲ್ ರಶೀದ್, ಬ್ಯೂಟಿಸಿಯನ್ ತರಬೇತಿ ಶಿಕ್ಷಕಿ ನೇತ್ರಾವತಿ, ಫ್ಯಾಷನ್ ಡಿಸೈನಿಂಗ್ ತರಬೇತಿ ಶಿಕ್ಷಕಿ ಸೌಮ್ಯ, ಸಿಬ್ಬಂದಿ ಇದ್ದರು.

ಭೈರವಿ ಗೌಡತಿಯರ ಬಳಗದ ವಾರ್ಷಿಕೋತ್ಸವ; ಭೈರವಿ ಪ್ರಶಸ್ತಿ ಪ್ರದಾನ



ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಆಯೋಜಿಸಿದ್ದ ಭೈರವಿ ಗೌಡತಿಯರ ಬಳಗದ ಮೂರನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರದ ಮಹಿಳಾ ಸಾಧಕಿಯರಿಗೆ ಭೈರವಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಡಿ.24(ಜಿಎ)–ಮೈಸೂರಿನ ಭೈರವಿ ಗೌಡತಿಯರ ಬಳಗದ ಮೂರನೇ ವಾರ್ಷಿಕೋತ್ಸವ ಸಮಾರಂಭವನ್ನು ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಬುಧವಾರ ಆಚರಿಸಲಾಯಿತು.

ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್ ಗೌಡ ಉದ್ಘಾಟಿಸಿ, ಸಂತಸ ಫೌಂಡೇಷನ್ ಸಂಸ್ಥಾಪಕ ನಿರ್ದೇಶಕಿ ಡಾ.ಸೌಮ್ಯ ದಿನೇಶ್, ಶಿಕ್ಷಣ ತಜ್ಞೆ ಶೋಭಾ ರಾಜಶೇಖರ್, ವರ್ಷ ಅಸೋಸಿಯೇಟ್ಸ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕಿ ರಾಣಿ ಕುಮಾರ್ ಹಾಗೂ ಅಲ್ಟ್ರಾ ಡಿಸ್ಟೆನ್ಸ್ ಸೈಕ್ಲಿಸ್ಟ್ ವೀಣಾ ಅಶೋಕ್, ಆಹಾರ ಮತ್ತು ಕೃಷಿ ವ್ಯವಹಾರ ನಾಯಕತ್ವ ಸಂಸ್ಥೆಯ ಡಾ.ಚೈತ್ರ ಭರತ್ ಅವರಿಗೆ ಭೈರವಿ ಪ್ರಶಸ್ತಿ ನೀಡಿ, ಅಭಿನಂದಿಸಿದರು.

ನಂತರ ಮಾತನಾಡಿದ ಅವರು, ಭೈರವಿ ಗೌಡತಿಯರ ಬಳಗವು ಉತ್ತಮವಾಗಿ ಸಂಘಟನೆ ಮಾಡುತ್ತಿದೆ. ನಗರ ಪ್ರದೇಶದಲ್ಲಿ ಮಹಿಳೆಯರು ಬಹುತೇಕ ಸಬಲೀಕರಣಗೊಂಡಿದ್ದಾರೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಸಬಲೀಕರಣವಾಗಬೇಕಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣದಲ್ಲಿ ಮಹಿಳೆಯರಿಗಾಗಿ ವಿಶೇಷ ಕಾರ್ಯಕ್ರಮ ಆಯೋಜಿಸಿ ಮತ್ತು ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಹಕಾರ ನೀಡಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಶ್ರೀ ಆದಿ ಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಕೆ.ಆರ್.ಆಸ್ಪತ್ರೆ ಡೀನ್ ಡಾ.ದಾಕ್ಷಾಯಿಣಿ, ಜಾನಪದ ಕಲಾವಿದೆ ಸುಮಾ ಪ್ರಶಾಂತ್, ಬಿಜೆಪಿ ಮಹಿಳಾ ಮೋರ್ಚಾ ಮಾಜಿ ಅಧ್ಯಕ್ಷೆ ಹೇಮಾ ನಂದೀಶ್, ಸಮಾಜ ಸೇವಕರಾದ ಕೋಮಲ ವೆಂಕಟೇಶ್, ಸುಶೀಲ ಬಸವರಾಜು, ಭೈರವಿ ಗೌಡತಿಯರ ಬಳಗದ ಅಧ್ಯಕ್ಷೆ ರೇವತಿ ಕೃಷ್ಣಪ್ಪ, ಗೌರವಾಧ್ಯಕ್ಷೆ ರಾಧಾ ಲಂಕೇಗೌಡ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಡಿ.27, ಪುಸ್ತಕಗಳ ಬಿಡುಗಡೆ ಸಮಾರಂಭ

ಮೈಸೂರು,ಡಿ.24–ಸಾಹಿತಿ, ಸಂಸ್ಥಾಪಕ ನಿರ್ದೇಶಕರಾದ ಡಾ.ಕೆಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ಡಾ.ಕೆ.ಲೀಲಾಪ್ರಕಾಶ್ ಅವರ 2 ಪುಸ್ತಕಗಳಾದ ಪಂಚತಂತ್ರ ಭಾಗ–1 (ಮಿತ್ರಭೇದ), ಭಗವದ್ಗೀತಾ ಸಾರ ಸಂಗ್ರಹ ಹಾಗೂ ಖ್ಯಾತ ಲೇಖಕರು ಮತ್ತು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಕಬ್ಬಿನಾಲೆ ವಸಂತ ಭಾರದ್ವಾಜರ 'ಹರಿದಾಸರ ಮುಂಡಿಗೆಗಳು' ಪುಸ್ತಕಗಳ ಬಿಡುಗಡೆ ಸಮಾರಂಭವನ್ನು ಡಿ.27ರಂದು ಸಂಜೆ 5 ಗಂಟೆಗೆ ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಕೃತಿಗಳ ಲೋಕಾರ್ಪಣೆ ಮಾಡಲಿದ್ದು, ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಅಧ್ಯಕ್ಷತೆ ವಹಿಸುವರು. ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಪ್ರಾಸ್ತಾವಿಕ ನುಡಿಗಳನ್ನಾಡುವರು.

ಕ್ರಿಸ್‌ಮಸ್ ಶುಭಾಶಯ...



ಮೈಸೂರು ಕ್ರೈಸ್ತ ಧರ್ಮ ಪ್ರಾಂತ್ಯದ ಧರ್ಮಗುರು (ಬಿಷಪ್) ಮೋಸ್ಟ್ ರೆವರೆಂಡ್ ಡಾ.ಫ್ರಾನ್ಸಿಸ್ ಸೆರಾವೊ ಎಸ್‌ಜೆ ಅವರನ್ನು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭೇಟಿ ಮಾಡಿ, ಕ್ರಿಸ್‌ಮಸ್ ಶುಭಾಶಯ ಕೋರಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಶ್ರೀಧರ್, ಆಶ್ರಯ ಸಮಿತಿ ಸದಸ್ಯ ಗುಣಶೇಖರ್, ಮುಖಂಡರಾದ ವಿಶ್ವನಾಥ್ (ವಿಶ್ವ), ರೂಪೇಶ್, ಸಂತೋಷ್, ನಾಗಮಹದೇವ ಮತ್ತಿತರರಿದ್ದರು.

ಸಿಎಂ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣರಿಗೆ 'ಲಾಗೈಡ್' ವತಿಯಿಂದ ಸನ್ಮಾನ



ಬುಧವಾರ ಕಾರ್ಯ ನಿಮಿತ್ತ ಮೈಸೂರಿಗೆ ಆಗಮಿಸಿದ ಸಿಎಂ ಕಾನೂನು ಸಲಹೆಗಾರರೂ ಆದ ಶಾಸಕ ಎ.ಎಸ್.ಪೊನ್ನಣ್ಣ ಅವರನ್ನು ಲಾಗೈಡ್ ಬಳಗದ ವತಿಯಿಂದ ಮೈಸೂರಿನ ಏರ್‌ಲೈನ್ಸ್ ಹೋಟೆಲ್‌ನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರ ಅಪರೂಪದ ಭಾವಚಿತ್ರ ನೀಡಿ ಸನ್ಮಾನಿಸಲಾಯಿತು. ಈ ವೇಳೆ ಹಿರಿಯ ವಕೀಲರೂ ಆದ 'ಲಾಗೈಡ್' ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕ ಎಚ್.ಎನ್.ವೆಂಕಟೇಶ್, ಹಿರಿಯ ವಕೀಲರಾದ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ, ತಿಮ್ಮಯ್ಯ, ಡಿವೈಎಸ್‌ಪಿ ಕೆ.ಎನ್.ಯಶವಂತಕುಮಾರ್ ಇತರರಿದ್ದರು.

ಗಾಯಕರಿಗೆ ಪ್ರಮಾಣ ಪತ್ರ ವಿತರಣೆ....



ಮೈಸೂರಿನ ಹೂಟಗಳ್ಳಿಯ ಶ್ರೀ ಅನಂತೇಶ್ವರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ನಾಡಗೀತೆಗೆ ನೂರರ ಸಂಭ್ರಮ, ಸಾವಿರಾರು ಸ್ವರಗಳ ಸಂಗಮ'ದಲ್ಲಿ ಪಾಲ್ಗೊಂಡಿದ್ದ ಗಾಯಕರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ವಿದ್ಯಾರ್ಥಿಗಳು ಬೆಳಗ್ಗೆದ್ದ ಕೂಡಲೇ ಮೊಬೈಲ್ ಮುಟ್ಟಬೇಡಿ; ಓದಿನತ್ತ ಗಮನ ಹರಿಸಿ

ಪ್ರಸಾರಾಂಗದ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು ಸಲಹೆ



ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಪಿಯುಸಿ ಬಾಲಕರ ವಿದ್ಯಾರ್ಥಿನಿಲಯದಲ್ಲಿ ನಡೆದ 'ಜಾನಪದ ನಡಿಗೆ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಕಡೆಗೆ' ಕಾರ್ಯಕ್ರಮಕ್ಕೆ ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು ಚಾಲನೆ ನೀಡಿದರು.

ಮೈಸೂರು, ಡಿ.24(ಎಂಟಿವೈ)–ವಿದ್ಯಾರ್ಥಿಗಳು ಮೊಬೈಲ್ ಗೀಳಿನಿಂದ ಹೊರ ಬಂದು ಜಾನಪದ ಸಂಸ್ಕೃತಿಯ ಮೌಲ್ಯ ಅರಿತುಕೊಳ್ಳುವ ಪ್ರಯತ್ನ ಮಾಡಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಜಾನಪದ ವಿಭಾಗ, ಕರ್ನಾಟಕ ಜಾನಪದ ಸಂಶೋಧಕರ ಸಂಘದ ವತಿಯಿಂದ ಡಾ.ಬಿ.ಆರ್ ಅಂಬೇಡ್ಕರ್ ಸರ್ಕಾರಿ ಪಿಯುಸಿ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಆಯೋಜಿಸಿದ್ದ 'ಜಾನಪದ ನಡಿಗೆ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಕಡೆಗೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಯುವ ವಿದ್ಯಾರ್ಥಿ ಸಮೂಹ ಮೊಬೈಲ್ ಸೇರಿದಂತೆ ಸಾಮಾಜಿಕ ಜಾಲತಾಣದ ಮೋಹಕ್ಕೆ ಒಳಗಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳ ಮನೋವಿಕಾಸವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಬದಲಾಗುತ್ತಿರುವ ಜಗತ್ತಿನಲ್ಲಿ ವಿದ್ಯಾರ್ಥಿಗಳು ಜಾನಪದ ಸಂಸ್ಕೃತಿಯ ಮೌಲ್ಯವನ್ನು ತಿಳಿಯಬೇಕಾದ ಅನಿವಾರ್ಯತೆ ಇದೆ ಎಂದರು.

ಮೊಬೈಲ್ ಹಾವಳಿ ನಡುವೆಯೂ ಸಾಕಷ್ಟು ವಿದ್ಯಾರ್ಥಿಗಳು ಓದಿನ ಕಡೆ ಗಮನಹರಿಸುತ್ತಿರುವುದು ಒಳ್ಳೆಯ ಬೆಳವಣಿಗೆ. ಬಹುತೇಕ ವಿದ್ಯಾರ್ಥಿಳಗಳು ಪ್ರತಿದಿನ ನಿದ್ದೆಯಿಂದ ಎದ್ದ ಕೂಡಲೇ ಮೊಬೈಲ್ ನೋಡುವ ಪರಿಪಾಠ ಅನುಸರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮೊಬೈಲ್ ಬಳಸದೆ ನಿಲಯದ ವಿದ್ಯಾರ್ಥಿಗಳು ಓದುತ್ತಿರುವುದು ಒಳ್ಳೆಯ ಬೆಳವಣಿಗೆ. ವಿದ್ಯಾರ್ಥಿಗಳು ಯಾವುದೇ ವ್ಯಸನಗಳಿಗೆ ಬಲಿಯಾಗದೆ ತಮ್ಮ ಮನಸ್ಸನ್ನು ಓದುವ ಕಡೆ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಜಾನಪದ ವಿಭಾಗದ ಶಿಕ್ಷಕರಾದ ಹೆಚ್.ಪಿ.ಮಂಜು ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಜಾನಪದ ಸಂಸ್ಕೃತಿ ನಾಶವಾಗುತ್ತಿದೆ. ಅದನ್ನು ಉಳಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಸಹಕಾರ ಮುಖ್ಯ. ಕಲುಷಿತವಾಗುತ್ತಿರುವ ಸಂದರ್ಭದಲ್ಲಿ ಸಾವಯವ ಕೃಷಿ, ಜನಪದ ಸಂಸ್ಕೃತಿ ಪದ್ಧತಿಯನ್ನು ಕಾಪಾಡುವುದು ನಮ್ಮ ಕರ್ತವ್ಯ ಎಂದು ತಿಳಿಸಿದರು.

ಸಾಮಾಜಿಕ ಹೋರಾಟಗಾರ ಡಾ.ಮರಿದೇವಯ್ಯ ಮಾತನಾಡಿ, ಮೊಬೈಲ್ ಇಂದು ನಿಮ್ಮನ್ನು ತಲೆ ತಗ್ಗಿಸುವಂತೆ ಮಾಡಿದರೆ ಪುಸ್ತಕ ತಲೆ ಎತ್ತುವಂತೆ ಮಾಡುತ್ತದೆ. ನಿಮ್ಮ ಆಯ್ಕೆ ನಿಮ್ಮ ತಂದೆ, ತಾಯಿಯ ಕನಸನ್ನು ನನಸು ಮಾಡುವುದೇ ಆಗಿರಬೇಕು ಎಂದು ಆಶಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿಲಯ ಮೇಲ್ವಿಚಾರಕ ಚಿಕ್ಕೀರಯ್ಯ ವಹಿಸಿದ್ದರು. ಈ ಸಂದರ್ಭದಲ್ಲಿ ಹದಿನಾರು ಶಾಲೆಯ ಪ್ರಾಂಶುಪಾಲ ಕೆ.ಇ.ಎಸ್ ರಂಗಸ್ವಾಮಿ, ಗಾಯಕ ಅಮ್ಮ ರಾಮಚಂದ್ರ ಸಂಶೋಧಕ ದಿಲೀಪ್, ಅರುಣ್, ಸಂತೋಷ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ವಿವಿಧ ವಸತಿ ಬಡಾವಣೆಗೆ ಮುಡಾ ಅಧ್ಯಕ್ಷರ ಭೇಟಿ

ಕುಂದುಕೊರತೆ ಪರಿಶೀಲನೆ

ಮಂಡ್ಯ, ಡಿ.24– ನಗರದ ಕೆರೆ ಅಂಗಳ ಹಾಗೂ ಮಂಡ್ಯ ನಗರಾಭಿವೃದ್ಧಿ ವ್ಯಾಪ್ತಿಯ ವಿವಿಧ ವಸತಿ ನಿವೇಶನ ಪ್ರದೇಶಗಳಿಗೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ಪಿ.ಪ್ರಕಾಶ್ ಅವರು ಬುಧವಾರ ಭೇಟಿ ನೀಡಿ, ಅಲ್ಲಿನ ನಿವಾಸಿಗಳ ಕುಂದು–ಕೊರತೆಗಳನ್ನು ಆಲಿಸುವ ಮೂಲಕ ಪರಿಶೀಲಿಸಿದರು.

ಕೆರೆ ಅಂಗಳದ ವಿವೇಕಾನಂದ ಬಡಾವಣೆಗೆ ಭೇಟಿ ನೀಡಿದ ಅವರು, ಕುಡಿಯುವ ನೀರು, ಒಳಚರಂಡಿ, ರಸ್ತೆ, ಸ್ವಚ್ಛತೆ, ಬೀದಿ ದೀಪ ಸೇರಿದಂತೆ ಮೂಲ ಸೌಕರ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ನಿವಾಸಿಗಳಿಂದ ಮಾಹಿತಿ ಪಡೆದರು. ಬಳಿಕ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ತಕ್ಷಣ ಪರಿಹಾರ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ ಅವರು, ಕೆಲವು ಸಮಸ್ಯೆಗಳನ್ನು ಸ್ಥಳದಲ್ಲಿಯೇ ಪರಿಹರಿಸಲಾಗಿದ್ದು, ಇತರೆ ಸಮಸ್ಯೆಗಳಿಗೂ ಶೀಘ್ರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ನಗರಾಭಿವೃದ್ಧಿ ವ್ಯಾಪ್ತಿಯ ನಾಗರಿಕರ ಸಮಸ್ಯೆಗಳಿಗೆ ಸ್ಪಂದಿಸುವುದು ಪ್ರಾಧಿಕಾರದ ಕರ್ತವ್ಯವಾಗಿದ್ದು, ಮುಂದಿನ ದಿನಗಳಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಬಡಾವಣೆಗಳಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಂತರ ನಿವಾಸಿಗಳಿಂದ ಸಮಸ್ಯೆಗಳ ಮಾಹಿತಿ ಪಡೆದು ಬಗೆಹರಿಸುವ ಕೆಲಸವನ್ನು ನಿರಂತರವಾಗಿ ನಡೆಸಲಾಗುವುದು ಎಂದರು.



ವಿವಿಧ ವಸತಿ ಬಡಾವಣೆಗಳಿಗೆ ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್ ಭೇಟಿ ನೀಡಿ, ಪರಿಶೀಲಿಸಿದರು.

ಮೂಲ ಸೌಕರ್ಯ ಕಲ್ಪಿಸುವಂತೆ ಮನವಿ: ವಿವೇಕಾನಂದ ಬಡಾವಣೆಗೆ ಮೂಲ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ವಿವೇಕಾನಂದ ನಗರ ನಿವಾಸಿಗಳ ಹಿತ ರಕ್ಷಣಾ ಸಮಿತಿ ಪದಾಧಿಕಾರಿಗಳು ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್ ಅವರಿಗೆ ಮನವಿ ಸಲ್ಲಿಸಿದರು.

ಬಡಾವಣೆ ನಿವಾಸಿಗಳಿಗೆ ಖಾತೆ ಮಾಡಿಕೊಡುವ ಮೂಲಕ ಮನೆಗಳ ನಿರ್ಮಾಣಕ್ಕೆ ಅವಕಾಶ ಕಲ್ಪಿಸಬೇಕು. ಬಡಾವಣೆಯ ರಸ್ತೆಯ 2 ಇಕ್ಕೆಲಗಳಲ್ಲಿ ಚರಂಡಿ ನಿರ್ಮಾಣ ಮಾಡಬೇಕು. ಬಡಾವಣೆಯಲ್ಲಿರುವ ಎರಡು ರಾಜಕಾಲುವೆಗಳಿಗೆ ತಡೆಗೋಡೆ ನಿರ್ಮಿಸುವ ಮೂಲಕ ಮಳೆಗಾಲದಲ್ಲಿ ನೀರು ಮನೆಗಳಿಗೆ ನುಗ್ಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬಡಾವಣೆಯ ಉದ್ಯಾನಗಳ ಅಭಿವೃದ್ಧಿ ಮಾಡಬೇಕು. ಬಡಾವಣೆ ರಸ್ತೆ ಹಾಗೂ ವೃತ್ತಗಳಿಗೆ ನಾಮಫಲಕ ಅಳವಡಿಸಬೇಕು. ಎಲ್ಲಾ ರಸ್ತೆಗಳಿಗೆ ಕಾಂಕ್ರೀಟ್ ಹಾಗೂ ಆರ್‌ಸಿಸಿ ಚರಂಡಿ ನಿರ್ಮಾಣ ಮಾಡಬೇಕು. ಕಾವೇರಿ ನೀರು ಸರಬರಾಜು ಮಾಡಬೇಕು. ಒಳಚರಂಡಿ ವ್ಯವಸ್ಥೆ ಕಲ್ಪಿಸಬೇಕು. ಬಡಾವಣೆಯಲ್ಲಿ ಬೆಳೆದು ನಿಂತಿರುವ ಗಿಡಗಂಟಿಗಳನ್ನು ತೆರವುಗೊಳಿಸಬೇಕು. ವಿವೇಕಾನಂದ ಬಡಾವಣೆಯನ್ನು ನಗರಸಭೆಗೆ ಸೇರಿಸಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಸ್ಪಂದಿಸಿದ ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಈ ಸಮಸ್ಯೆಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ, ಅಗತ್ಯ ತುರ್ತು ಕ್ರಮ ಕೈಗೊಳ್ಳುವಂತೆ ಶಾಸಕರು ಹಾಗೂ ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಭರವಸೆ ನೀಡಿದರು.

ಸಮಿತಿ ಪದಾಧಿಕಾರಿಗಳಾದ ಗೌರವಾಧ್ಯಕ್ಷ ಶ್ಯಾಂಪ್ರಸಾದ್, ಅಧ್ಯಕ್ಷ ಟಿ.ರಾಜು, ಎಂ.ಪುಟ್ಟೇಗೌಡ, ಕಾರ್ಯದರ್ಶಿ ರಘು, ಸಹ ಕಾರ್ಯದರ್ಶಿ ಮಂಜುನಾಥ್, ವಸಂತೇಗೌಡ, ಸಂಘಟನಾ ಕಾರ್ಯದರ್ಶಿ ಬಿ.ಪಿ.ಅಜಯ್‌ಕುಮಾರ್, ರಾಜು ಸೇರಿದಂತೆ ಮತ್ತಿತರರಿದ್ದರು.

ಸಾರಿಗೆ ಬಸ್‌ಗೆ ಡಿಕ್ಕಿ ಹೊಡೆದು ಲಾರಿ ಪಲ್ಟಿ



ಹಳ್ಳಕ್ಕೆ ಉರುಳಿ ಬಿದ್ದಿರುವ ಸಿಮೆಂಟ್ ಲಾರಿ.



ಜಖಂಗೊಂಡಿರುವ ಸಾರಿಗೆ ಬಸ್.

ಭಾರತೀನಗರ, ಡಿ.24– ಕೆಎಸ್‌ಆರ್‌ಟಿಸಿ ಬಸ್‌ಗೆ ಸಿಮೆಂಟ್ ಸಾಗಿಸುತ್ತಿದ್ದ ಲಾರಿ ಡಿಕ್ಕಿ ಹೊಡೆದು ಬಳಿಕ ನಿಯಂತ್ರಣ ತಪ್ಪಿ ಹಳ್ಳಕ್ಕೆ ಪಲ್ಟಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಹನುಮಂತನಗರ ಬಳಿ ನಡೆದಿದೆ.

ಮಂಡ್ಯದಿಂದ ಕೆ.ಎಂ.ದೊಡ್ಡಿ ಕಡೆಗೆ ಸಾರಿಗೆ ಬಸ್(ಕೆಎ 11, ಎಫ್ 0474) ತೆರಳುತ್ತಿತ್ತು. ಭಾರತೀನಗರದಿಂದ ಮಂಡ್ಯ ಕಡೆಗೆ ಗಣೇಶ್ ಟ್ರಾನ್ಸ್‌ಫೋರ್ಟ್‌ಗೆ ಸೇರಿದ ಸಿಮೆಂಟ್ ಲಾರಿ (ಕೆಎ–09, ಸಿ.9785) ತೆರಳುತ್ತಿತ್ತು. ಈ ವೇಳೆ ಹನುಮಂತನಗರದ ವೇಬ್ರಿಡ್ಜ್ ಮಧ್ಯೆ ಇರುವ ತಿರುವಿನಲ್ಲಿ ಸಿಮೆಂಟ್ ತುಂಬಿದ ಲಾರಿ ಕೆಎಸ್‌ಆರ್‌ಟಿಸಿ ಬಸ್‌ಗೆ ಡಿಕ್ಕಿ ಹೊಡೆದು ನಿಯಂತ್ರಣ ತಪ್ಪಿ ರಸ್ತೆ ಬದಿಯ ಹಳ್ಳಕ್ಕೆ ಪಲ್ಟಿಯಾಗಿದೆ. ಘಟನೆಯಲ್ಲಿ ಬಸ್‌ನಲ್ಲಿದ್ದ ಪ್ರಯಾಣಿಕರು ಹಾಗೂ ಲಾರಿ ಚಾಲಕನಿಗೆ ಯಾವುದೇ ಅಪಾಯ ಸಂಭವಿಸಿಲ್ಲ. ಬದಲಿಗೆ ಲಾರಿಯಲ್ಲಿದ್ದ ಸಿಮೆಂಟ್ ನೆಲಕ್ಕೆ ಬಿದ್ದು, ಸಾಕಷ್ಟು ನಷ್ಟ ಸಂಭವಿಸಿದೆ. ವಿಷಯ ತಿಳಿದು ಸ್ಥಳಕ್ಕಾಮಿಸಿದ ಕೆ.ಎಂ.ದೊಡ್ಡಿ ಪೊಲೀಸರು ಪರಿಶೀಲನೆ ನಡೆಸಿ ಸಾರಿಗೆ ಬಸ್ ಹಾಗೂ ಲಾರಿಯನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಬೈಕ್‌ನಿಂದ ಬಿದ್ದು ಗಾಯಗೊಂಡಿದ್ದ ವೃದ್ಧೆ ಸಾವು

ಭಾರತೀನಗರ, ಡಿ.24– ಕಳೆದ 3 ತಿಂಗಳ ಹಿಂದೆ ಬೈಕ್‌ನಿಂದ ಬಿದ್ದು ಗಾಯಗೊಂಡಿದ್ದ ವೃದ್ಧೆಯೊಬ್ಬರು ಮಂಗಳವಾರ ರಾತ್ರಿ ಸಾವನ್ನಪ್ಪಿದ್ದಾರೆ.



ದುಂಡಮ್ಮ

ಅರೆಚಾಕನಹಳ್ಳಿ ಗ್ರಾಮದ ನಿವಾಸಿ ದುಂಡಮ್ಮ(60) ಸಾವನ್ನಪ್ಪಿದವರು. ಈಕೆ ಸೆ.11ರಂದು ಆಲಭುಜನಹಳ್ಳಿ ಗ್ರಾಮಕ್ಕೆ ಅದೇ ಮಾರ್ಗವಾಗಿ ತೆರಳುತ್ತಿದ್ದ ರುದ್ರಯ್ಯ ಎಂಬುವರ ಬೈಕ್ ಹತ್ತಿ ಹೋಗುತ್ತಿದ್ದ ವೇಳೆ ರಸ್ತೆ ಕಾಮಗಾರಿ ನಡೆಯುತ್ತಿದ್ದರಿಂದ ರಸ್ತೆಯಲ್ಲಿದ್ದ ಜಲ್ಲಿ ಕಲ್ಲುಗಳಿಂದಾಗಿ ನಿಯಂತ್ರಣ ತಪ್ಪಿ ದುಂಡಮ್ಮ ಬೈಕ್‌ನಿಂದ ಬಿದ್ದ ಪರಿಣಾಮ ಹೊಟ್ಟೆ ಭಾಗಕ್ಕೆ ತೀವ್ರವಾಗಿ ಪೆಟ್ಟಾಗಿತ್ತು. ಬಳಿಕ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದು ಮನೆಗೆ ಮರಳಿ ವಿಶ್ರಾಂತಿ ಪಡೆಯುತ್ತಿದ್ದರು. ಆದರೆ ಮಂಗಳವಾರ ರಾತ್ರಿ ಈಕೆ ಇದ್ದಕ್ಕಿದ್ದಂತೆ ಕುಸಿದು ಬಿದ್ದು ಮನೆಯಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ ಶವವನ್ನು ಕೆ.ಎಂ.ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಳವಾಯಿಕೋಡಿಹಳ್ಳಿಯಲ್ಲಿ ವೃದ್ಧನ ಹತ್ಯೆ

ಹಲಗೂರು: ದುಷ್ಕರ್ಮಿಗಳು ವೃದ್ಧನ ತಲೆ ಮೇಲೆ ಸೈಜುಗಲ್ಲು ಎತ್ತಿ ಹಾಕಿ ಹತ್ಯೆ ಮಾಡಿರುವ ಘಟನೆ ಇಲ್ಲಿಗೆ ಸಮೀಪದ ದಳವಾಯಿ ಕೋಡಿಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಚಿಕ್ಕಪುಟ್ಟೇಗೌಡ(68) ಹತ್ಯೆಯಾದವರು. ಆಸ್ತಿ ವಿಚಾರವಾಗಿ ತಂದೆ ಮಕ್ಕಳ ನಡುವೆ ಆಗಾಗ್ಗೆ ಕಲಹ ನಡೆಯುತ್ತಿತ್ತು ಎನ್ನಲಾಗಿದೆ. ಚಿಕ್ಕಪುಟ್ಟೇಗೌಡ ತಮ್ಮ ಹಳೆಯ ಮನೆಯಲ್ಲಿದ್ದು, ಪತ್ನಿ ನಾಗಮ್ಮ ಕಳೆದ 2 ತಿಂಗಳಿಂದ ಸಂಬಂಧಿಕರ ಮನೆಯಲ್ಲಿದ್ದರು. ಮಂಗಳವಾರ ಬೆಳಗ್ಗೆ ತೋಟದಲ್ಲಿ ಕೆಲಸ ಮಾಡುತ್ತಿದ್ದ ಚಿಕ್ಕಪುಟ್ಟೇಗೌಡರ ತಲೆ ಮೇಲೆ ದುಷ್ಕರ್ಮಿಗಳು ಸೈಜುಗಲ್ಲು ಎತ್ತಿ ಹಾಕಿ ಕೊಲೆ ಮಾಡಿ ಪರಾರಿಯಾಗಿದ್ದಾರೆ ಎಂದು ಗ್ರಾಮಸ್ಥರು ಹಲಗೂರು ಠಾಣೆಗೆ ದೂರು ನೀಡಿದ್ದು, ಈ ಸಂಬಂಧ ಹಲಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಚಿಕ್ಕಾಡಮ್ಮ ನಿಧನ

ಭಾರತೀನಗರ, ಡಿ.24– ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆ ಗ್ರಾಮದ ನಿವಾಸಿ ಹಾಗೂ ನಾಟಿ ಹಿರಿಯ ಪ್ರಸೂತಿ ತಜ್ಞೆ ಚಿಕ್ಕಾಡಮ್ಮ(92) ಬುಧವಾರ ನಿಧನರಾದರು. ಮೃತರು ಪುತ್ರ, ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ಗುರುವಾರ ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಪ್ರತಿಭಟನೆ



ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಶ್ರೀರಂಗಪಟ್ಟಣ: ಬಾಂಗ್ಲಾದೇಶದಲ್ಲಿ ಅಲ್ಪ ಸಂಖ್ಯಾತ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ತಾಲೂಕು ಹಿಂದೂ ಹಿತರಕ್ಷಣಾ ಸಮಿತಿ ವತಿಯಿಂದ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಅಂಬೇಡ್ಕರ್ ವೃತ್ತದಿಂದ ತಾಲೂಕು ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಸಮಿತಿ ಸದಸ್ಯರು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ತಾಲೂಕು ಆಡಳಿತದ ಮೂಲಕ ರಾಷ್ಟ್ರಪತಿ, ಪ್ರಧಾನ ಮಂತ್ರಿ ಹಾಗೂ ಕೇಂದ್ರ ಗೃಹ ಸಚಿವರಿಗೆ ಮನವಿ ಸಲ್ಲಿಸಿದರು.

ನಂತರ ಮಾತನಾಡಿದ ಸಮಿತಿ ಸದಸ್ಯರು, ಭಾರತದಿಂದ ಬೇರ್ಪಟ್ಟ ಬಾಂಗ್ಲಾದೇಶದಲ್ಲಿ ಲಕ್ಷಾಂತರ ಶಾಂತಿಪ್ರಿಯ ಹಿಂದೂಗಳು ವಾಸಿಸುತ್ತಿದ್ದಾರೆ. ಆದರೆ ಇತ್ತೀಚೆಗೆ ಅಲ್ಲಿನ ಜಿಹಾದಿಗಳು ಅಮಾಯಕ ಹಿಂದೂಗಳ ಮೇಲೆ ನಿರಂತರ ದೌರ್ಜನ್ಯ ಎಸಗುತ್ತಿದ್ದಾರೆ. ಡಿ.19 ರಂದು ದೀಪು ಚಂದ್ರ ದಾಸ್ ಎಂಬ ಅಮಾಯಕ ಹಿಂದೂ ವ್ಯಕ್ತಿಯನ್ನು ಅಮಾನುಷವಾಗಿ ಹಿಂಸಿಸಿ, ಸಜೀವ ದಹನ ಮಾಡಿರುವುದು ಹೇಯ ಕೃತ್ಯವಾಗಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಸಮಿತಿಯ ಮುಖ್ಯಸ್ಥ ಚಂದನ್, ವಕೀಲರಾದ ಬಾಲರಾಜ್, ಜಯಕುಮಾರ್, ರವೀಶ್, ಬಿಎಂಎಸ್ ವಾಸು, ಚಂದ್ರು, ರವಿ, ರಾಜು, ಶಿವು, ಶಂಕರ್, ಸನತ್, ಸರಸ್ವತಿ ಸೇರಿದಂತೆ ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

ಬನ್ನಂಗಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ನೂರು ವರ್ಷ ಹಿನ್ನೆಲೆ

ಡಿ.28, ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮ



ಕಾರ್ಯಕ್ರಮದ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಲಾಯಿತು.

ಪಾಂಡವಪುರ, ಡಿ.24– ತಾಲೂಕಿನ ಬನ್ನಂಗಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಶಾಲೆಯ ಹಿರಿಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಂದ ಡಿ.28ರಂದು ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಾಪಂ ಮಾಜಿ ಸದಸ್ಯ, ಹಿರಿಯ ವಿದ್ಯಾರ್ಥಿ ಮುಖಂಡ ಬಿ.ಸಿ.ಶ್ರೀನಿವಾಸ್ ತಿಳಿಸಿದರು.

ಶಾಲೆಯಲ್ಲಿ ಸಭೆ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬನ್ನಂಗಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆರಂಭವಾಗಿ ನೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಶತಮಾನೋತ್ಸವ ಸಂಭ್ರಮ ಆಚರಿಸಲಾಗುತ್ತಿದೆ. 1925ರಲ್ಲಿ ಬನ್ನಂಗಾಡಿ ಗ್ರಾಮದ ಮಾರಿಗುಡಿ ದೊಡ್ಡಮ್ಮನ ದೇವಸ್ಥಾನದ ಆವರಣದಲ್ಲಿ 10 ಮಕ್ಕಳಿಂದ ಆರಂಭಗೊಂಡ ಶಾಲೆಯಲ್ಲಿ ಈವರೆಗೆ ಸಾವಿರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಿ ಹೊರ ಹೋಗಿದ್ದಾರೆ. 2007–18ರವರೆಗೆ ಶಾಲೆಯಲ್ಲಿ ಪ್ರತಿ ವರ್ಷ 400 ವಿದ್ಯಾರ್ಥಿಗಳು ವ್ಯಾಸಂಗ ಮಾಡಿದ್ದಾರೆ. ಆ ನಂತರ ಶಾಲೆಯನ್ನು ಕರ್ನಾಟಕ ಪಬ್ಲಿಕ್ ಶಾಲೆಯನ್ನಾಗಿ ಘೋಷಣೆ ಮಾಡಿದ್ದು, ಇದೀಗ ಶಾಲೆಯಲ್ಲಿ ಎಲ್‌ಕೆಜಿ, ಯುಕೆಜಿಯಿಂದ ಪದವಿ ಪೂರ್ವ ಕಾಲೇಜುವರೆಗೂ ಮಕ್ಕಳು ವಿದ್ಯಾಭ್ಯಾಸ ನಡೆಸುತ್ತಿದ್ದಾರೆ ಎಂದರು.

ಕಾರ್ಯಕ್ರಮವನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಉದ್ಘಾಟಿಸಲಿದ್ದು, ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್ ಉಪಸ್ಥಿತರಿದ್ದು, ನಟ ಮುಖ್ಯಮಂತ್ರಿ ಚಂದ್ರು ಪ್ರಧಾನ ಭಾಷಣ ಮಾಡಲಿದ್ದು, ಹಲವು ಗಣ್ಯರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮಕ್ಕೂ ಮುನ್ನ ಬೆಳ್ಳಿ ಸಾರೋಟ್‌ನಲ್ಲಿ ಭುವನೇಶ್ವರಿ, ಶಾರದಾಂಬೆ ಫೋಟೋಗಳನ್ನು ವಿವಿಧ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಸಲಾಗುವುದು. ಇದೇ ವೇಳೆ ಶಾಲೆ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ನೀಡಿದವರನ್ನು ಸನ್ಮಾನಿಸಲಾಗುವುದು. ಅಲ್ಲದೇ ಶಿಕ್ಷಕರಿಗೆ ಗುರುವಂದನೆ ಸಲ್ಲಿಸಲಾಗುವುದು. ವೇದಿಕೆಯಲ್ಲಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದರು.

ಸಂಜೆ 6ಕ್ಕೆ ನಡೆಯುವ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ಶ್ರೀನಿಶ್ಚಲಾನಂದನಾಥ ಸ್ವಾಮೀಜಿ ವಹಿಸಲಿದ್ದಾರೆ. ಪ್ರಾಥಮಿಕ, ಪ್ರೌಢಶಾಲೆ, ಕಾಲೇಜು ಮುಖ್ಯಸ್ಥರು ಕಾರ್ಯಕ್ರಮ ಉದ್ಘಾಟಿಸುವರು. ಕಲಾವಿದ ಮಂಡ್ಯ ರವಿ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದರು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಬಿ.ಡಿ.ಹುಚ್ಚೇಗೌಡ, ನಿವೃತ್ತ ಶಿಕ್ಷಕ ಶಿವೇಗೌಡ, ಜಿಲ್ಲಾ ಕುರುಬರ ಸಂಘದ ಉಪಾಧ್ಯಕ್ಷ ಬಿ.ಕೆ.ರೇವಣ್ಣ, ಹೋರಿ ನಂಜುಂಡೇಗೌಡ, ಎಸ್.ಕೆ.ರಾಮಚಂದ್ರೇಗೌಡ, ಶಿಕ್ಷಕರು, ಉಪನ್ಯಾಸಕರು, ಮುಖಂಡರು ಇದ್ದರು.

ಒಂದನೇ ಪುಟದಿಂದ

22 ನಿವೇಶನ ಮಾರಾಟ ಯತ್ನ!

ಬೇರೊಬ್ಬರಿಗೆ ನೋಂದಣಿ ಮಾಡಿಸಲು ಮುಂದಾಗಿದ್ದಾನೆ.

ಆಸಾಮಿ ಪರಾರಿ: ಮೈಸೂರಿನ ವಿಜಯ ನಗರದಲ್ಲಿರುವ ಪಶ್ಚಿಮ ಉಪನೋಂದಣಾಧಿಕಾರಿ ಕಚೇರಿಯಲ್ಲಿ ನಿವೇಶನಗಳ ನೋಂದಣಿಗೆ ಡಿ.23 ರಂದು ಅರ್ಜಿ ಸಲ್ಲಿಸಿದ್ದು, ಇಂದು ಬೆಳಗ್ಗೆ ನಿವೇಶನಗಳ ನೋಂದಣಿ ಪ್ರಕ್ರಿಯೆ ನಡೆಯಬೇಕಾಗಿತ್ತು. ಆದರೆ, ಉಪನೋಂದಣಾಧಿಕಾರಿ ಕಚೇರಿ ಸಿಬ್ಬಂದಿಯೊಬ್ಬರು ಸಿದ್ದರಾಜು ಅವರ ದಾಖಲೆ ಗಮನಿಸಿ, ಸಿದ್ದ ರಾಜು ಅವರಿಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ತಿಳಿದು ಇಂದು ಬೆಳಗ್ಗೆ ಉಪನೋಂದಣಾಧಿಕಾರಿ ಕಚೇರಿಗೆ ಕೆಲ ಬೆಂಬಲಿಗರೊಂದಿಗೆ ಸಿದ್ದರಾಜು ಆಗಮಿಸಿ ದ್ದಾರೆ. ವಿಷಯ ಬಯಲಾಗುತ್ತಿದ್ದಂತೆ ನಕಲಿ ದಾಖಲೆ ಸೃಷ್ಟಿಸಿ ನಿವೇಶನ ಮಾರಾಟಕ್ಕೆ ಬಂದಿದ್ದ ವ್ಯಕ್ತಿ, ಸ್ಥಳದಿಂದ ಕಾಲ್ಕಿತ್ತಿದ್ದಾನೆ.

> “ನಿವೇಶನ ಮಾರಾಟ ಮಾಡಲು ಬಂದ ವ್ಯಕ್ತಿ ಯಾರು ಎಂದು ನನಗೂ ತಿಳಿದಿಲ್ಲ. ಆತನನ್ನು ಹಿಡಿಯಲು ಬಂದರೆ, ಆತ ಎಚ್ಚೆತ್ತುಕೊಂಡು ಪರಾರಿ ಯಾಗಿದ್ದಾನೆ. ಜನಪ್ರತಿನಿಧಿಯ ನಿವೇಶನವನ್ನೇ ಕಬಳಿಸಲು ಮುಂದಾಗುವವರು ಜನಸಾಮಾನ್ಯರ ಆಸ್ತಿಯನ್ನು ಸುಮ್ಮನೆ ಬಿಡುತ್ತಾರಾ ಎಂಬ ಆತಂಕ ನಮ್ಮದಾಗಿದೆ. ಆ ಕಾರಣದಿಂದ ನಿವೇಶನ ನೋಂದಣಿ ಪ್ರಕ್ರಿಯೆ ತಡೆ ಹಿಡಿಯುವಂತೆ ಮನವಿ ಮಾಡಿದ್ದೇನೆ. ಅಲ್ಲದೆ, ಆ ವ್ಯಕ್ತಿಯ ಸಿಸಿ ಕ್ಯಾಮರಾ ದೃಶ್ಯ, ಆತ ನೀಡಿರುವ ದಾಖಲೆ ಸೇರಿದಂತೆ ಸಂಬಂಧಪಟ್ಟ ದಾಖಲೆ ನೀಡುವಂತೆ ಕೋರಿದ್ದೇನೆ.
> –ಸಿದ್ದರಾಜು, ಮಾಜಿ ಎಂಎಲ್‌ಸಿ.

ತಕರಾರು ಅರ್ಜಿ ಸಲ್ಲಿಕೆ: ನಿವೇಶನ ಮಾರಾಟಕ್ಕೆ ಯತ್ನಿಸಿದ ವ್ಯಕ್ತಿಯನ್ನು ಹಿಡಿಯಲೇಬೇಕೆಂದು ಮಧ್ಯಾಹ್ನದವರೆಗೂ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಸಿದ್ದರಾಜು ಹಾಗೂ ಬೆಂಬಲಿಗರು ಕಾದು ಕುಳಿತಿದ್ದರೂ, ಆ ವ್ಯಕ್ತಿ ಬರಲಿಲ್ಲ. ಕೊನೆಗೆ ಸಿದ್ದರಾಜು, ಪಶ್ಚಿಮ ಉಪನೋಂದಣಾಧಿಕಾರಿ ಎನ್.ಶ್ರೀಕಾಂತ್ ಅವರಿಗೆ ತಕರಾರು ಅರ್ಜಿ ಸಲ್ಲಿಸಿ, ನನ್ನ ಮಾಲೀಕತ್ವದ ನಿವೇ ಶನಗಳನ್ನು ನಕಲಿ ದಾಖಲೆ ಸೃಷ್ಟಿಸಿ ಮಾರಾಟ ಮಾಡಲು ಯತ್ನಿಸಿದ್ದು, ಸದರಿ ನಿವೇಶನಗಳನ್ನು ನೋಂದಣಿ ಮಾಡದಂತೆ ಕೋರಿದ್ದಾರೆ. ಅಲ್ಲದೆ, ನಿವೇಶನ ಮಾರಾಟ ಮಾಡಲು ಬಂದ ವ್ಯಕ್ತಿಯ ಸಿಸಿ ಕ್ಯಾಮರಾ ದೃಶ್ಯಾವಳಿ, ಆತ ಸಲ್ಲಿಸಿರುವ ದಾಖಲೆ ಪ್ರತಿ ನೀಡುವಂತೆ ಮನವಿ ಸಲ್ಲಿಸಿದ್ದಾರೆ.

22 ಕೋಟಿ ರೂ. ಆಸ್ತಿ ಕಬಳಿಕೆಗೆ ಯತ್ನ: ಉಪನೋಂದಣಾಧಿಕಾರಿಗೆ ಮನವಿ ಸಲ್ಲಿಸಿದ ಬಳಿಕ ಪತ್ರಕರ್ತರೊಂದಿಗೆ ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು ಮಾತನಾಡಿ, ಮೈಸೂರು ತಾಲೂಕಿನ ಜಯಪುರ ಹೋಬಳಿಯ ಕೇರ್ಗಳ್ಳಿ ಸರ್ವೆ ನಂಬರ್ 189, 203, 204/1,2,3, 207/1, 207/5, 208/5 ಮತ್ತು 291ರಲ್ಲಿ ವಸತಿ ಉದ್ದೇಶಕ್ಕಾಗಿ ಅಭಿವೃದ್ಧಿಪಡಿಸಿ ಬಡಾವಣೆ ನಿರ್ಮಿಸಿದ್ದೇನೆ. ಕೆಲವರು ನಕಲಿ ದಾಖಲೆ ಸೃಷ್ಟಿಸಿ, ಈ ಬಡಾವಣೆಯಲ್ಲಿ 22 ನಿವೇಶನಗಳನ್ನು ಮಾರಾಟ ಮಾಡಲು ಯತ್ನಿಸಿದ್ದಾರೆ. ಇದರಲ್ಲಿ ಕೆಲವು ಅಧಿಕಾರಿಗಳು ಶಾಮೀಲಾಗಿರುವ ಶಂಕೆ ಇದೆ. ನನ್ನ ಆಧಾರ್ ಕಾರ್ಡ್, ಪಾನ್ ಕಾರ್ಡ್ ಸೇರಿದಂತೆ ಕೆಲವು ನಕಲಿ ದಾಖಲೆ ಸೃಷ್ಟಿಸಿ ನನ್ನ ಮಾಲೀಕತ್ವದ ನಿವೇಶನಗಳನ್ನು ಮಾರಾಟ ಮಾಡಲು ಯತ್ನಿಸಿದ್ದಾರೆ. ಉಪನೋಂದಣಾಧಿಕಾರಿ ಕಚೇರಿಯಲ್ಲಿನ ಸಿಬ್ಬಂದಿಯೊಬ್ಬರು ನಕಲಿ ದಾಖಲೆ ಗಮನಿಸಿ ನನ್ನ ಗಮನಕ್ಕೆ ತಂದಿದ್ದಾರೆ.

ಬೋಗಾದಿ ಪಟ್ಟಣ ಪಂಚಾಯ್ತಿಗೂ ತೆರಳಿ ತಕರಾರು ಅರ್ಜಿ ಸಲ್ಲಿಸುತ್ತೇನೆ. ಅಲ್ಲಿ ನನ್ನ ನಿವೇಶನಕ್ಕೆ ಸಂಬಂಧಿಸಿದಂತೆ ಆ ವ್ಯಕ್ತಿಗೆ ಇ–ಖಾತಾ/ ಇ–ಸ್ವತ್ತು/ ಇ–ಆಸ್ತಿ ಮಾಡಿಕೊಟ್ಟಿದ್ದಾರಾ ಎಂದು ಪರಿಶೀಲಿಸುತ್ತೇನೆ. ಒಂದು ವೇಳೆ ಅಧಿಕಾರಿಗಳು ಲೋಪ ಎಸಗಿದ್ದರೆ ಅವರ ವಿರುದ್ಧವೂ ದೂರು ದಾಖಲಿಸುತ್ತೇನೆ. ಎಲ್ಲಾ ದಾಖಲೆ ಪಡೆದ ನಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುತ್ತೇನೆ.

ಈಗಾಗಲೇ ನಕಲಿ ದಾಖಲೆ ಸೃಷ್ಟಿಸಿ, ನಿವೇಶನ ಮಾರಾಟ ಮಾಡಲು ಬಂದಿರುವ ಬಗ್ಗೆ ವಿಜಯ ನಗರದ ಠಾಣಾಧಿಕಾರಿಗಳಿಗೆ ಮೌಖಿಕವಾಗಿ ಮಾಹಿತಿ ನೀಡಿದ್ದೇನೆ ಎಂದು ತಿಳಿಸಿದರು.

ಯಾರಿಗೂ ತೊಂದರೆ ಕೊಡಲ್ಲ

ಅವರನ್ನು ಭೇಟಿ ಮಾಡಿ ತೊಂದರೆ ಕೊಡಲು ಇಷ್ಟಪಡುವುದಿಲ್ಲ ಎಂದರು. ರಾಹುಲ್ ಅಷ್ಟೇ ಅಲ್ಲ, ಪಕ್ಷದ ಯಾವುದೇ ನಾಯಕರನ್ನು ನಾನು ಭೇಟಿ ಮಾಡಲು ಇಚ್ಛಿಸುವುದಿಲ್ಲ. ಕಾರ್ಯಕರ್ತನಾಗಿರಲು ಇಷ್ಟಪಡುತ್ತೇನೆ ಎಂಬುದನ್ನಷ್ಟೇ ತಿಳಿಸಲು ಬಯಸುತ್ತೇನೆ ಎಂದು ಮುಂದಿನ ಪ್ರಶ್ನೆಗಳಿಗೆ ಉತ್ತರಿಸಲಿಲ್ಲ. ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರು ರಾಹುಲ್ ಗಾಂಧಿ ಅವರಿಗೆ ಬರೆಯುತ್ತಿರುವ ಪತ್ರಗಳು ಹಾಗೂ ಕಳೆದ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ಹಂಚಿಕೆಗೆ ಸಂಬಂಧಿಸಿದಂತೆ ಮಾಡಿರುವ ಆರೋಪ ಪ್ರಶ್ನೆಗೆ, ನನಗೆ ಅನುಭವ ಕಡಿಮೆ, ತರಬೇತಿ ಪಡೆದುಕೊಳ್ಳುವೆ ಎಂದಷ್ಟೇ ಹೇಳಿದರು.

ಮೈಸೂರಲ್ಲಿ ಸಂಭ್ರಮದ ಕ್ರಿಸ್‌ಮಸ್

ಹಬ್ಬದ ದಿನ ಚರ್ಚ್‌ಗೆ ಸಾರ್ವಜನಿಕರಿಗೆ ಪ್ರವೇಶ ನೀಡಲಾಗುತ್ತದೆ. ಕ್ರಿಸ್‌ಮಸ್ ದಿನವಾದ 25ರಂದು ಬೆಳಗ್ಗೆ 5ರಿಂದಲೇ ಪ್ರಾರ್ಥನಾ ಸಭೆಗಳು ನಡೆಯಲಿವೆ. ಬೆಳಗ್ಗೆ 5ಕ್ಕೆ ತಮಿಳು, 6ಕ್ಕೆ ಕನ್ನಡ ಮತ್ತು 7ರಿಂದ ಇಂಗ್ಲಿಷ್‌ನಲ್ಲಿ ಸಭೆಗಳು ನಡೆಯಲಿವೆ. ದಿನವಿಡೀ ವಿವಿಧ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು.



ವಿವಿಧ ಬಣ್ಣದ ವಿದ್ಯುತ್ ದೀಪಗಳಿಂದ ಜಗಮಗಿಸುತ್ತಿರುವ ಸಂತ ಫಿಲೋಮಿನಾ ಚರ್ಚ್‌ನ ವಿಹಂಗಮ ನೋಟ

ಕಳೆಗಟ್ಟಿದ ಸಂಭ್ರಮ: ದೇವರ ಮಗ ಮತ್ತು ಮಾನವತೆಯ ರಕ್ಷಕ ಎಂದು ನಂಬಲಾಗಿರುವ ಯೇಸುವನ್ನು ಸ್ವಾಗತಿಸಲು ಕ್ರೈಸ್ತ ಬಾಂಧವರು, ವೆಸ್ಲಿ ಕೆಥಡ್ರಾಲ್ ಚರ್ಚ್ ಹಾಗೂ ಬಿಷಪ್ ಹೌಸ್, ಮನೆ, ಆಸ್ಪತ್ರೆಗಳು, ಅಂಗಡಿ–ಮಳಿಗೆಗಳು, ಶಾಲಾ– ಕಾಲೇಜುಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಿದ್ದರು.

ಮನೆ ಮನೆಗಳಲ್ಲಿಯೂ ಕ್ರಿಸ್ಮಸ್ ಮರದ ಅಲಂಕಾರ, ನಕ್ಷತ್ರ ದೀಪಗಳು, ಸಾಂತಾಕ್ಲಾಸ್, ಕ್ರಿಸ್‌ಮಸ್ ರೀತ್‌ಗಳನ್ನು ಅಳವಡಿಸಿ, ವಿಶೇಷ ಪ್ರಾರ್ಥನೆ, ವಿಶಿಷ್ಟ ದೀಪಾಲಂಕಾರ, ಕೇಕ್ ಕತ್ತರಿಸುವುದು, ಕ್ಯಾರಲ್ ಹಾಡುಗಳನ್ನು ಹಾಡುವುದು ಮತ್ತು ಉಡುಗೊರೆ ವಿನಿಮಯದಂತಹ ಸಂಪ್ರದಾಯಗಳಿಗೆ ಮೈಸೂರು ಸಾಕ್ಷಿಯಾಯಿತು.

ಕ್ರೈಸ್ತರ ಹಬ್ಬದ ಖಾದ್ಯಗಳಾದ ರೋಸ್ ಕೇಕ್, ಕಜ್ಜಾಯ, ಹಲ್ವಾ ಸೇರಿದಂತೆ ವಿವಿಧ ಬಗೆಯ ಸಿಹಿ ತಿನಿಸು ತಯಾರಿಸಲಾಗಿತ್ತು. ಕೇರಳ, ತಮಿಳುನಾಡು, ಗೋವಾ ಸೇರಿದಂತೆ ಇತರೆ ರಾಜ್ಯಗಳಿಂದ ಮೈಸೂರಿಗೆ ಬಂದು ನೆಲೆಸಿರುವ ಕ್ರೈಸ್ತರು ತಮ್ಮ–ತಮ್ಮ ಊರಿನ ಸಾಂಪ್ರದಾಯಿಕ ಖಾದ್ಯ ಸಿದ್ದಪಡಿಸಿ, ಸಂತ ಫಿಲೋಮಿನಾ ಚರ್ಚ್‌ನಲ್ಲಿ ಪ್ರಾರ್ಥನೆಗೆ ಬಂದಿದ್ದವರಿಗೆ ಹಂಚಲಾಯಿತು.

ನಗರದ ಸಂತಫಿಲೋಮಿನಾ ಚರ್ಚ್ ಮಾತ್ರವಲ್ಲದೇ, ಪುಲಿಕೇಶಿ ರಸ್ತೆಯ ಸಾಡೇ ಮೆಮೋರಿಯಲ್ ಚರ್ಚ್, ವೆಸ್ಲಿ, ಬೆಂಗಳೂರು–ನೀಲಗಿರಿ ರಸ್ತೆಯ ಸಿಎಸ್‌ಐ ಬಾರ್ತೋಲೋನಿಯಾ ಚರ್ಚ್, ವಾಣಿ ವಿಲಾಸ ರಸ್ತೆಯಲ್ಲಿರುವ ಸಿಎಸ್‌ಐ ಹಾರ್ಡ್ವಿಕ್ ಚರ್ಚ್, ಆರ್.ಎಸ್.ನಾಯ್ಡು ನಗರದ ಇನ್ಫೆಂಟ್ ಜೀಸಸ್, ಯಾದವಗಿರಿಯ ಸೇಕ್ರೆಡ್ ಹಾರ್ಟ್, ಜಯಲಕ್ಷ್ಮಿಪುರಂನ ಸೇಂಟ್ ಜೋಸೆಫ್, ವಿಶ್ವೇಶ್ವರ ನಗರದ ಸೇಂಟ್ ಥಾಮಸ್, ಸೇಂಟ್ ಮೇರಿಸ್ ಸೇರಿದಂತೆ ನಗರದಲ್ಲಿರುವ 40ಕ್ಕೂ ಅಧಿಕ ಚರ್ಚ್ ಹಾಗೂ ಪ್ರಾರ್ಥನಾ ಮಂದಿರಗಳು ವಿದ್ಯುತ್ ದೀಪಗಳಿಂದ ಜಗಮಗಿಸಿದವು.

ಯೇಸುವಿನ ಸುಂದರ ಮನೆ ನಿರ್ಮಾಣ: ಸಂತ ಫಿಲೋಮಿನಾ ಚರ್ಚ್‌ನ ಆವರಣದಲ್ಲಿ ಯೇಸು ಕ್ರಿಸ್ತ ಜನಿಸಿದ ಎನ್ನಲಾದ ಜೆರುಸಲೆಂನ ಬೆತ್ಲೆಹೆಮ್ ಗ್ರಾಮದಲ್ಲಿನ ಯೇಸು ಕ್ರಿಸ್ತನ ಮನೆಯ ಮಾದರಿಯನ್ನು ನಿರ್ಮಾಣ ಮಾಡಲಾಗಿದೆ.

ನೆಲ ಹುಲ್ಲು, ಥರ್ಮೋ ಕೋಲಿನಿಂದ ಬಳಸಿ ಮಂಜು ಬೀಳುತ್ತಿರುವಂತೆ ಗ್ರಾಮದ ಮಾದರಿಯ ನಿರ್ಮಿಸಲಾಗಿದೆ. ಒಂದಷ್ಟು ಕುರಿಗಳು ಗೋದಲಿಯ ಎಡ ಭಾಗದಲ್ಲಿರುವಂತೆ, ಯೇಸುವಿನ ತಂದೆ–ತಾಯಿ ಗೋದಲಿ ಬಳಿ ನಿಂತಿರುವಂತೆ ಹಾಗೂ ಸುತ್ತಲೂ ಸಂಗೀತ ವಾದ್ಯಗಳನ್ನು ನುಡಿಸುತ್ತಿರುವ ಮೂರ್ತಿಗಳು ನೋಡುಗರಿಗೆ ಆಕರ್ಷಕವಾಗಿ ಕಾಣುವಂತೆ ನಿರ್ಮಿಸಲಾಗಿದೆ.

ಅಲ್ಲದೇ ಚರ್ಚ್ ಆವರಣದಲ್ಲಿ ಐಫೆಲ್ ಟವರ್ ಪ್ರತಿಕೃತಿ, ಸಂತಾ ಕ್ಲಾಸ್‌ನ ಬೃಹತ್ ಕಟೌಟ್, ಬಣ್ಣ ಬಣ್ಣದ ದೀಪಾಲಂಕಾರ, ಬಗೆಬಗೆಯ ಹೂಗಳಿಂದ ಸಿಂಗರಿಸಲ್ಪಟ್ಟ ಚರ್ಚ್‌ಗಳು ಹಬ್ಬದ ದಿನದ ಪ್ರಮುಖ ಆಕರ್ಷಣೆಯಾಗಿತ್ತು.

ಹಿನಕಲ್‌ನ ಇನ್‌ಫಂಟ್ ಜೀಸಸ್ ಕ್ಯಾಥೆಡ್ರಲ್ ಚರ್ಚ್ ಸೇರಿದಂತೆ ನಗರದ ಎಲ್ಲಾ ಚರ್ಚ್‌ಗಳಲ್ಲಿ ಇಂದು ಮಧ್ಯರಾತ್ರಿ ಪೂಜೆ, ಪ್ರಾರ್ಥನೆ ಯೊಂದಿಗೆ ಯೇಸುಕ್ರಿಸ್ತನನ್ನು ಸ್ಮರಿಸಲಾಯಿತು. ನಾಳೆಯೂ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ಜೊತೆಗೆ ಕ್ರಿಸ್‌ಮಸ್ ಅಂಗವಾಗಿ ಸಂತ ಫಿಲೋಮಿನಾ ಚರ್ಚ್ ಆವರಣದಲ್ಲಿ ಡಿ.19ರಂದು ಆರಂಭಿಸಿದ್ದ ಕ್ರಿಸ್‌ಮಸ್ ಕಾರ್ನಿವಲ್ ಡಿ.25 ಮತ್ತು 26ರಂದು ಸಹ ಮುಂದುವರೆಯಲಿದೆ.

ಸಂಪರ್ಕ ಬ್ಯೂರೋ ಕಚೇರಿ ಸ್ಥಗಿತ ಬೇಡ

ಪ್ರವಾಸಿಗರು ಭೇಟಿ ನೀಡುತ್ತಾರೆ ಎಂಬ ಅಂಶವನ್ನು ಉಲ್ಲೇಖ ಮಾಡಿದ್ದಾರೆ.

ಕೇಂದ್ರ ಸರ್ಕಾರ ಕೈಗೊಳ್ಳುತ್ತಿರುವ ಜನಪರ ಕಾರ್ಯಕ್ರಗಳನ್ನು ಪ್ರಸರಣ ಮಾಡುವಲ್ಲಿ ಈ ಬ್ಯೂರೋ ಪ್ರಮುಖ ಪಾತ್ರ ವಹಿಸುತ್ತಿದ್ದು, ಮುಖ್ಯವಾಗಿ ಮೈಸೂರು, ಚಾಮರಾಜನಗರ, ಕೊಡಗು, ಹಾಸನ ಜಿಲ್ಲೆಗಳ ಜನತೆಗೆ ಮಾಹಿತಿ ನೀಡುವಲ್ಲಿ ಉತ್ತಮವಾಗಿ ಕೆಲಸ ಮಾಡುತ್ತಿದೆ. ಒಂದು ವೇಳೆ ಈ ಬ್ಯೂರೋದ ಕಚೇರಿ ಸ್ಥಗಿತವಾದರೆ ಕೇಂದ್ರ ಸರ್ಕಾರ ಹಾಗೂ ಜನರ ನಡುವಿನ ಸಂಪರ್ಕ ಸೇತುವೆ ಇಲ್ಲವಾಗುತ್ತದೆ ಎಂಬ ಅಂಶವನ್ನು ಸಚಿವ ಕುಮಾರಸ್ವಾಮಿ ಅವರು ವಾರ್ತಾ ಸಚಿವರ ಗಮನಕ್ಕೆ ತಂದಿದ್ದಾರೆ.

ಮೈಸೂರು ಮತ್ತು ಸುತ್ತಮುತ್ತಲಿನ ಜಿಲ್ಲೆಗಳು ಅನನ್ಯ ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವವನ್ನು ಹೊಂದಿವೆ. ಮೈಸೂರು ನಗರವನ್ನು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಪರಿಗಣಿಸಲಾಗಿದೆ. ಈ ನಗರವು ಮೈಸೂರು ಅರಮನೆ ಮತ್ತು ಜಗನ್ಮೋಹನ ಅರಮನೆಯಂತಹ ಸಾಂಪ್ರದಾಯಿಕ ಪರಂಪರೆಯ ಹೆಗ್ಗುರುತುಗಳಿಗೆ ನೆಲೆಯಾಗಿದೆ. ಅಲ್ಲದೆ ಜಗದ್ವಿಖ್ಯಾತ ದಸರಾ ಮಹೋತ್ಸವದ ಮೂಲಕ ವಿಶ್ವಪ್ರಸಿದ್ಧಿ ಹೊಂದಿದೆ. ಈ ಮೂಲಕ ಭಾರತೀಯ ಶ್ರೀಮಂತ ಸಾಂಸ್ಕೃತಿಕ ಮೇರು ನೆಲೆಯಾಗಿ ಮೈಸೂರು ಗುರುತಿಸಲ್ಪಡುತ್ತದೆ. ಹೀಗಾಗಿ ಇಲ್ಲಿ ಅನೇಕ ಸಾಂಸ್ಕೃತಿಕ, ಕಲಾ, ಸಂಗೀತ, ಪ್ರವಾಸಿ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತವೆ. ಇಂಥ ಸಮಯದಲ್ಲಿ ಸುಗಮ ಸಂವಹನ, ಸಮನ್ವಯ ಮತ್ತು ಸಾರ್ವಜನಿಕ ಸಂಪರ್ಕವನ್ನು ಖಚಿತಪಡಿಸಿಕೊಳ್ಳಲು ಕ್ರಿಯಾತ್ಮಕವಾಗಿ ಕೆಲಸ ಮಾಡುವ ಕೇಂದ್ರೀಯ ಸಂಪರ್ಕ ಬ್ಯೂರೋ ಕಚೇರಿ ಇರುವುದು ಅತ್ಯಗತ್ಯವಾಗಿದೆ.

ಈ ಜಿಲ್ಲೆಗಳಲ್ಲಿ ಗಣನೀಯ ಪ್ರಮಾಣದಲ್ಲಿ ಬುಡಕಟ್ಟು ಸಮುದಾಯಗಳ ಜನರು ವಾಸ ಮಾಡುತ್ತಿದ್ದಾರೆ. ಜೇನು ಕುರುಬ, ಕಾಡು ಕುರುಬ, ಸೋಲಿಗರು ಹಾಗೂ ಯರವ ಬುಡಕಟ್ಟು ಜನರು ಇಲ್ಲಿದ್ದಾರೆ. ಇಂತಹ ಸಮುದಾಯಗಳಿಗೆ ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ನೀಡುವುದು, ಅವರ ಶ್ರೇಯೋಭಿವೃದ್ಧಿಗೆ ಶ್ರಮಿಸುವ ದೃಷ್ಟಿಯಿಂದ ಮೈಸೂರು ಕಚೇರಿಯನ್ನು ಉಳಿಸಿಕೊಳ್ಳುವುದು ಅಗತ್ಯವಾಗಿದೆ ಎಂದು ಕುಮಾರಸ್ವಾಮಿ ಅವರು ಒತ್ತಿ ಹೇಳಿದ್ದಾರೆ.

ಯಾವುದೇ ಕಾರಣಕ್ಕೂ ಮೈಸೂರು ನಗರದಲ್ಲಿರುವ ಕೇಂದ್ರೀಯ ಸಂಪರ್ಕ ಬ್ಯೂರೋವನ್ನು ಸ್ಥಗಿತಗೊಳಿಸದೆ, ಅದಕ್ಕೆ ಮತ್ತಷ್ಟು ಶಕ್ತಿಯನ್ನು ತುಂಬಿ ಮುಂದುವರಿಸಬೇಕು ಎಂದು ಸಚಿವ ಕುಮಾರಸ್ವಾಮಿ ಅವರು ಅಶ್ವಿನಿ ವೈಷ್ಣವ್ ಅವರನ್ನು ಕೋರಿದ್ದಾರೆ.

ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಕೇಂದ್ರೀಯ ಸಂಪರ್ಕ ಬ್ಯೂರೋಗಳ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಸಚಿವ ಕುಮಾರಸ್ವಾಮಿ ಅವರು, ಮೈಸೂರು ಕಚೇರಿಯನ್ನು ಸ್ಥಗಿತಗೊಳಿಸುವ ಕ್ರಮ ವಹಿಸಬಾರದು ಎಂದು ಮನವಿ ಮಾಡಿದ್ದಾರೆ.

ಸಿದ್ದರಾಮಯ್ಯ ಅಧಿಕಾರ ಕೊಡಲ್ಲ, ಡಿ.ಕೆ.ಶಿವಕುಮಾರ್ ದೇವಸ್ಥಾನ ಬಿಡಲ್ಲ

ವಿಪಕ್ಷ ನಾಯಕ ಅಶೋಕ್ ವ್ಯಂಗ್ಯ

ಬೆಂಗಳೂರು, ಡಿ.24– ಸಿದ್ದರಾಮಯ್ಯ ಅಧಿಕಾರ ಕೊಡಲ್ಲ, ಡಿ.ಕೆ.ಶಿವಕುಮಾರ್ ದೇವಸ್ಥಾನ ಬಿಡಲ್ಲ. ಕರ್ನಾಟಕದಲ್ಲಿ ಇಷ್ಟೇ ನಡೆಯುತ್ತಿರೋದು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ವ್ಯಂಗ್ಯವಾಡಿದ್ದಾರೆ.



ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಗ್ಯಾಂಗ್ ಡಿನ್ನರ್ ಪಾಲಿಟಿಕ್ಸ್ ಮಾಡುತ್ತಿದೆ. ಡಿ.ಕೆ.ಶಿವಕುಮಾರ್ ಟೆಂಪಲ್ ರನ್ ಮಾಡುತ್ತಿದ್ದಾರೆ. ಅಧಿವೇಶನಕ್ಕೆ ಡಿ.ಕೆ.ಶಿವಕುಮಾರ್ ಬರುತ್ತಿರಲಿಲ್ಲ. ಅಧಿವೇಶನ ನಡೆಯುತ್ತಿರುವಾಗ ಜನಪ್ರತಿನಿಧಿಯಾಗಿ ಕೆಲಸ ಮಾಡಬೇಕಿತ್ತು. ಅದು ಬಿಟ್ಟು ಜನರ ತೆರಿಗೆ ಹಣದಲ್ಲಿ ದೇವಸ್ಥಾನ ರೌಂಡ್ ಹಾಕುತ್ತಿದ್ದರು ಎಂದು ವಾಗ್ದಾಳಿ ನಡೆಸಿದರು.

ಈಗ ಸಾಮಾನ್ಯ ಕಾರ್ಯಕರ್ತನಾಗಿ ಇರುತ್ತೇನೆ ಅಂತಿದ್ದಾರೆ ಅದ್ಯಾಕೆ? ಹಾಗಾದ್ರೆ ರಾಜೀನಾಮೆ ಕೊಟ್ಟು ಇರಲಿ ಎಂದು ಡಿಕೆಶಿಗೆ ಟಕ್ಕರ್ ಕೊಟ್ಟರು. ಇನ್ನು ಕರ್ನಾಟಕದ ಕೆಲವು ಕಡೆಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಚುನಾವಣೆ ನಡೆದಿದೆ. ಎಲ್ಲಾ ಕಡೆ ಬಿಜೆಪಿ ಹೆಚ್ಚು ಸ್ಥಾನ ಗೆದ್ದಿದ್ದೆ. ಕಾಂಗ್ರೆಸ್ ಸರ್ಕಾರ ತೊಲಗುವ ಮುನ್ಸೂಚನೆ ಇದು. ಇವರು ಇದೇ ರೀತಿ ಕಾಂಗ್ರೆಸ್‌ನಲ್ಲಿ ಕಿತ್ತಾಡುತ್ತಿದ್ದರೆ ಮನೆಗೆ ಹೋಗೋದು ಗ್ಯಾರಂಟಿ ಎಂದು ಭವಿಷ್ಯ ನುಡಿದರು.

ಕೆಎನ್ ರಾಜಣ್ಣರೇ ಕಾಂಗ್ರೆಸ್‌ಗೆ ಕೊಳ್ಳಿ ಇಡುತ್ತಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಡಿಕೆಶಿ ಫೇಲ್ಯೂರ್ ಅಂತಾ ಪತ್ರ ಬರೆದಿದ್ದಾರೆ. ಕೇಂದ್ರದವರು ಕೂಡ ನಿಮ್ಮ ಸಹವಾಸ ಬೇಡ ಎಂದಿದ್ದಾರೆ. ತೀರ್ಮಾನ ತೆಗೆದುಕೊಳ್ಳದ ವೀಕ್ ನಾಯಕತ್ವ ಅಂದರೆ ಕಾಂಗ್ರೆಸ್ ನಾಯಕತ್ವ ಎಂದು ಟೀಕಿಸಿದರು.

ಮಿತಿ ಮೀರಿದ ಫ್ಯಾನ್ಸ್ ವಾರ್: ಪೊಲೀಸರಿಗೆ ವಿಜಯಲಕ್ಷ್ಮಿ ದೂರು

ಬೆಂಗಳೂರು, ಡಿ.24– ಸಾಮಾಜಿಕ ಜಾಲತಾಣದಲ್ಲಿ ತನ್ನ ವಿರುದ್ಧ ಕೆಟ್ಟ ಕಮೆಂಟ್ ಪೋಸ್ಟ್ ಮಾಡಿದ ಖಾತೆಗಳ ವಿರುದ್ಧ ದರ್ಶನ್ ಪತ್ನಿ ವಿಜಯಲಕ್ಷ್ಮಿ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ದರ್ಶನ್ ಇದ್ದಾಗ ಯಾರೂ ಮಾತನಾಡುತ್ತಿರಲಿಲ್ಲ. ಈಗ ವೇದಿಕೆ, ಟಿವಿ ಚಾನೆಲ್‌ಗಳಲ್ಲಿ ಮಾತನಾಡುತ್ತಾರೆ. ದರ್ಶನ್ ಇದ್ದಾಗ ಇವರೆಲ್ಲಾ ಇದ್ರೋ ಇರಲಿಲ್ವೋ ಎಂದು ಪ್ರಶ್ನಿಸಿ ದಾವಣಗೆರೆಯಲ್ಲಿ ವಿಜಯಲಕ್ಷ್ಮಿ ಹೇಳಿಕೆ ನೀಡಿದ್ದರು.

ಈ ಹೇಳಿಕೆ ನೀಡಿದ ಬಳಿಕ ವಿಜಯಲಕ್ಷ್ಮಿ ಅವರ ವಿರುದ್ಧ ನಿಂದನೆಗಳ ಪೋಸ್ಟ್ ಪ್ರಕಟವಾಗುತ್ತಿದೆ. ನಿಂದನೆಯ ವಿರುದ್ಧ ಸಿಡಿದ ವಿಜಯಲಕ್ಷ್ಮಿ 15 ಇನ್‌ಸ್ಟಾಗ್ರಾಂ ಐಡಿ ಮತ್ತು 150ಕ್ಕೂ ಹೆಚ್ಚು ಕೆಟ್ಟ ಕಮೆಂಟ್ ವಿರುದ್ಧ ಫೋಟೋ ಸಮೇತ ದೂರು ನೀಡಿದ್ದಾರೆ. ದೂರು ನೀಡಿದ ಬಳಿಕ ಮಾಧ್ಯಮಗಳು ವಿಜಯಲಕ್ಷ್ಮಿ ಅವರನ್ನು ಮಾತನಾಡಲು ಪ್ರಯತ್ನಿಸಿದವು. ಆದರೆ ವಿಜಯಲಕ್ಷ್ಮಿ ಯಾವುದೇ ಪ್ರತಿಕ್ರಿಯೆ ನೀಡದೇ ಕಾರು ಹತ್ತಿ ತೆರಳಿದರು. ವಿಜಯಲಕ್ಷ್ಮೀ ಖಾತೆಗೆ ಬಂದ ಕಾಮೆಂಟ್‌ಗಳು ಸುದೀಪ್ ಅಭಿಮಾನಿಗಳದ್ದೇ ಎಂಬ ಅನುಮಾನ ಮೂಡಿದೆ. ಏಕೆಂದರೆ ಕೆಲವು ಖಾತೆಗಳು ಸುದೀಪ್ ಅಭಿಮಾನಿಗಳ ಹೆಸರಲ್ಲಿ ಇದೆ. ಈ ಕುರಿತು ಇನ್ಸ್ಟಾಗ್ರಾಂನಲ್ಲಿ ಸ್ಟೋರಿ ಹಾಕಿದ್ದಾರೆ ವಿಜಯಲಕ್ಷ್ಮಿ. ಅಲ್ಲದೇ ಕೆಟ್ಟದಾಗಿ ಕಾಮೆಂಟ್ಸ್ ಮಾಡಿದ ಖಾತೆಗಳ ಸ್ಕ್ರೀನ್‌ಶಾಟ್‌ಗಳನ್ನು ಸಹ ಸ್ಟೋರಿಯಲ್ಲಿ ಹಂಚಿಕೊಂಡಿದ್ದಾರೆ. ಕ್ಲಾಸ್ ಫ್ಯಾನ್ಸ್ ಎಂದು ಕರೆಯಲ್ಪಡುವ ಎಲ್ಲರಿಗೂ ನಿಮ್ಮ ಮಟ್ಟವನ್ನು ಸಾರ್ವಜನಿಕವಾಗಿ ಪ್ರದರ್ಶಿಸಿದ್ದಕ್ಕಾಗಿ ಧನ್ಯವಾದಗಳು. ಈ ಖಾತೆಗಳ ವಿರುದ್ಧ ಪೊಲೀಸ್ ದೂರುಗಳನ್ನು ದಾಖಲಿಸಲಾಗಿದೆ. ಅಭಿಮಾನದ ಹೆಸರಲ್ಲಿ ಇನ್ನುಮುಂದೆ ಕಿರುಕುಳ ನಡೆಯುವುದಿಲ್ಲ ಎಂದು ಖಡಕ್ ವಾರ್ನಿಂಗ್ ಕೊಟ್ಟಿದ್ದಾರೆ.

ಹೈಕಮಾಂಡ್ ಮಧ್ಯಪ್ರವೇಶ ಮಾಡಲ್ಲ

ಹೈಕಮಾಂಡ್‌ಗೆ ಮಾತ್ರ ಗೊತ್ತು. ಈ ನಡುವೆ ಡಿಸಿಎಂ ಹಾಗೂ ಸಿಎಂ ಇಬ್ಬರನ್ನೂ ನಾನು ಭೇಟಿಯಾಗಿದ್ದೇನೆ. ಇಬ್ಬರ ಜೊತೆ ರಾಜಕೀಯ ಚರ್ಚೆ ಜೊತೆಗೆ ಕ್ಷೇತ್ರದ ಅಭಿವೃದ್ಧಿ ಕುರಿತು ಮಾತನಾಡಿದ್ದೇನೆ ಎಂದು ಸ್ಪಷ್ಟಪಡಿಸಿದರು. ನಾನು ರಾಹುಲ್ ಗಾಂಧಿ ಅವರಿಗೆ ಬರೆದ ಲೆಟರ್ ಈಗ ಲೀಕ್ ಆಗಿದೆ. ವೋಟ್ ಚೋರಿ ಕುರಿತಂತೆ ನಾನು ಕೊಟ್ಟ ಹೇಳಿಕೆ ಲೆಟರ್ ಓದಿದರೆ ಗೊತ್ತಾಗುತ್ತದೆ. ಅದು ಹೈಕಮಾಂಡ್‌ಗೆ ಮನವರಿಕೆ ಮಾಡೋ ಪ್ರಯತ್ನ ಮಾಡಿದ್ದೇನೆ. ಹೈಕಮಾಂಡ್ ಭೇಟಿಗೆ ಸಮಯ ಕೊಟ್ಟರೆ ಹೋಗಿ ಮನವರಿಕೆ ಮಾಡುತ್ತೇನೆ. ಮತ್ತೆ ಸಚಿವ ಸಂಪುಟದಲ್ಲಿ ಸ್ಥಾನ ಕೊಟ್ಟರೆ ಜನರಿಗಾಗಿ ಒಳ್ಳೆ ಕೆಲಸ ಮಾಡುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹೈಕಮಾಂಡ್ ಬಿಟ್ಟರೆ ಸಿದ್ದರಾಮಯ್ಯರ ಯಾರೂ ಅಧಿಕಾರದಿಂದ ಇಳಿಸಲು ಅಸಾಧ್ಯ

ಸಚಿವ ಜಮೀರ್ ಅಹಮದ್ ಖಾನ್



ಜಮೀರ್ ಅಹಮ್ಮದ್

ಮೈಸೂರು, ಡಿ.24(ಜಿಎ)–ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಯಾರಿಂದಲೂ ಸಾಧ್ಯವಿಲ್ಲ. ಅವರೇ 2028ರವರೆಗೆ ಮುಖ್ಯಮಂತ್ರಿ ಆಗಿರುತ್ತಾರೆ ಎಂದು ಸಚಿವ ಜಮೀರ್ ಅಹಮ್ಮದ್ ಖಾನ್ ತಿಳಿಸಿದರು.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹೈಕಮಾಂಡ್ ಮಾತ್ರ ಮುಖ್ಯಮಂತ್ರಿ ಬದಲಾವಣೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಹುದು. ಹೈ ಕಮಾಂಡ್ ಬಿಟ್ಟು ಬೇರೆ ಯಾರಿಂದಲೂ ಸಿದ್ದರಾಮಯ್ಯ ಕೆಳಗಿಳಿಸಲು ಸಾಧ್ಯವಿಲ್ಲ. ಸಿದ್ದರಾಮಯ್ಯನವರು ಸಿಎಂ ಕುರ್ಚಿಯಲ್ಲಿ ಭದ್ರವಾಗಿ ಕೂತಿದ್ದಾರೆ. ಸಿದ್ದರಾಮಯ್ಯ ಅವರೇ ಅದನ್ನ ಸ್ಪಷ್ಟವಾಗಿ ಹೇಳಿದ್ದಾರೆ. ಅಂತಿಮ ತೀರ್ಮಾನ ಹೈಕಮಾಂಡ್ ಹೇಳಿದಂತೆ ಎಂದು ಮತ್ತೆ ಮತ್ತೆ ಯಾಕೆ ಆ ಮಾತು. ಅಧಿಕಾರ ಹಂಚಿಕೆ ಒಪ್ಪಂದದ ಬಗ್ಗೆ ನನಗೆ ಗೊತ್ತಿಲ್ಲ ಎಂದು ತಿಳಿಸಿದರು.

ಡಿಸಿಎಂ ಡಿ.ಕೆ.ಶಿವಕುಮಾರ್ ದೆಹಲಿ ಪ್ರವಾಸ ಕುರಿತು ಪ್ರತಿಕ್ರಿಯಿಸಿ, ಅವರ ಇಲಾಖೆ ವಿಚಾರವಾಗಿ ಹೋಗಿದ್ದಾರೆ. ಹೈಕಮಾಂಡ್ ಭೇಟಿ ಮಾಡಲು ಹೋಗಿಲ್ಲ. ಈ ಬಗ್ಗೆ ಅವರೇ ಹೇಳಿದ್ದಾರೆ. ಇಕ್ಬಾಲ್ ಹುಸೇನ್ ಹೇಳಿಕೆ ವಿಚಾರವಾಗಿ ಪ್ರಸ್ತಾಪಿಸಿ, ಎಲ್ಲರಿಗೂ ಅವರವರ ಅಭಿಪ್ರಾಯಗಳನ್ನು ಹೇಳುವ ಅವಕಾಶವಿದೆ. ನಾನು ನನ್ನ ಅಭಿಪ್ರಾಯ ಹೇಳಿದ್ದೇನೆ ಅಷ್ಟೇ. ಅದರಂತೆ ಸಿದ್ದರಾಮಯ್ಯ ಈಗ ಸಿಎಂ ಖುರ್ಚಿ ಮೇಲೆ ಕೂತಿದ್ದಾರೆ. 2028ರವರೆಗೂ ಸಿದ್ದರಾಮಯ್ಯನವರೇ ಸಿಎಂ ಆಗಿರುತ್ತಾರೆ. ಇದು ನನ್ನ ಅಭಿಪ್ರಾಯ ಎಂದರು.

ಅಂತಿಮವಾಗಿ ನಮ್ಮದು ಹೈಕಮಾಂಡ್ ಪಕ್ಷ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಿಎಂ ಬದಲಾವಣೆ ಮಾಡಬೇಕಿರುವುದು. ಆದರೆ, ಸದ್ಯ ಸಿಎಂ ಬದಲಾವಣೆ ಅಂತಹ ಸನ್ನಿವೇಶಗಳು ಇಲ್ಲ ಎಂದು ಜಮೀರ್ ಪುನರ್ ಸ್ಪಷ್ಟಪಡಿಸಿದರು.

ಆಪ್ತ ಸಹಾಯಕ ಸರ್ಫರಾಜ್ ಮನೆ ಮೇಲೆ ಲೋಕಾಯುಕ್ತ ದಾಳಿ ವಿಚಾರ ಪ್ರತಿಕ್ರಿಯಿಸಿ, ನನಗೆ ಈ ಬಗ್ಗೆ ಮಾಹಿತಿ ಇಲ್ಲ. ಸರ್ಫರಾಜ್ ಅವರ ತಂದೆ ಕಾಲದಿಂದಲೂ ಶ್ರೀಮಂತರು. ಯಾಕೆ ದಾಳಿ ಆಗಿದೆ ಎಂಬುದು ಗೊತ್ತಿಲ್ಲ. ನೋಡೋಣ ಎಂದರು.

ನೈಸರ್ಗಿಕ ಕೃಷಿ ಪದ್ಧತಿ ಕುರಿತು ಕಾರ್ಯಾಗಾರ

ಮೈಸೂರು, ಡಿ.24(ಜಿಎ)–ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘದ ವತಿಯಿಂದ ಜ.3ರಿಂದ 6ರವರೆಗೆ ಹಾಸನ ಜಿಲ್ಲೆ ಬೇಲೂರು ತಾಲೂಕಿನ ಹಳೇಬೀಡು ಹೋಬಳಿಯ ಪುಷ್ಪಗಿರಿ ಮಠದಲ್ಲಿ ನೈಸರ್ಗಿಕ ಕೃಷಿ ಪದ್ಧತಿ ಕುರಿ ತಂತೆ 4 ದಿನಗಳ ಕಾರ್ಯಾಗಾರವನ್ನು ರೈತರು, ಕೃಷಿ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವವರಿಗಾಗಿ ಆಯೋಜಿಸಿರುವುದಾಗಿ ಸಂಘದ ಪದಾಧಿಕಾರಿ ಮಂಜು ಕಿರಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶೂನ್ಯ ಬಂಡವಾಳದಲ್ಲಿ ನೈಸರ್ಗಿಕ ಕೃಷಿಗೆ ಹೆಸರಾಗಿರುವ ಮಹಾರಾಷ್ಟ್ರದ ಪದ್ಮಶ್ರೀ ಡಾ.ಸುಭಾಷ್ ಪಾಳೇಕರ್ ಕಾರ್ಯಾಗಾರ ನಡೆಸಿಕೊಡಲಿದ್ದಾರೆ. ಈ ಕಾರ್ಯಾಗಾರಕ್ಕೆ ಸಾವಿರ ಜನರಿಗೆ ವಸತಿ ಸಹಿತ ಅವಕಾಶವಿದೆ. ಈ ಕಾರ್ಯಾಗಾರ ಪುಷ್ಪಗಿರಿ ಮಠದ ಡಾ.ಸೋಮಶೇಖರ ಶಿವಾಚಾರ್ಯ ಸ್ವಾಮೀಜಿಯವರ ಸಹಕಾರದೊಡನೆ ನಡೆಯುತ್ತಿದೆ ಎಂದರು.

ಸಾಲ ಮಾಡಿ ಖರೀದಿಸುವ ರಸಗೊಬ್ಬರ, ಕೀಟನಾಶಕ, ಹೈಬ್ರಿಡ್ ಬಿತ್ತನೆ ಬೀಜಗಳು ರೈತರನ್ನು ಆತ್ಮಹತ್ಯೆಯ ದಾರಿ ಹಿಡಿಯುವಂತೆ ಮಾಡಿವೆ. ಇದರಲ್ಲಿ ಕರ್ನಾಟಕ ಎರಡನೇ ಸ್ಥಾನ ಪಡೆದಿದೆ. ಈ ಪರಿಸ್ಥಿತಿಯಲ್ಲಿ ರೈತರು ರೈತರಾಗಿ ಉಳಿದು ಘನತೆಯ ಬದುಕನ್ನು ಕಟ್ಟಿಕೊಳ್ಳಬೇಕಾದರೆ ಯಾವುದನ್ನೂ ಖರೀದಿ ಮಾಡದೇ ಮಾಡಬಹುದಾದ ನೈಸರ್ಗಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಈ ಕಾರ್ಯಾಗಾರ ಉಪಯುಕ್ತವಾಗಿದೆ. ಹೆಚ್ಚಿನ ಮಾಹಿತಿಗೆ ದೂ. 9176762 80136 ಅನ್ನು ಸಂಪರ್ಕಿಸಿ ಎಂದರು. ಗೋಷ್ಠಿಯಲ್ಲಿ ಮೋಹನ್ ಬಾಬು, ಕೃಷ್ಣೇಗೌಡ, ವೆಂಕಟೇಶ್ ಇದ್ದರು.

ಶತಮಾನೋತ್ಸವ ಕಂಡ ದೊಡ್ಡಾಸ್ಪತ್ರೆಯ ಸೇವೆ ಸಾರ್ಥಕತೆಗಾಗಿ

ಮೈಸೂರು ಕೆ.ಆರ್.ಆಸ್ಪತ್ರೆ ಆವರಣದಲ್ಲಿ 75 ಕೋಟಿ ವೆಚ್ಚದ ಬಹುಮಹಡಿ ಹೊಸ ಓಪಿಡಿ ಕಟ್ಟಡ ನಿರ್ಮಾಣ

ಸ್ಪೆಷಲ್ ವಾರ್ಡ್‌ಗಳ ಹಳೇ ಕಟ್ಟಡ ನೆಲಸಮ, 2026ರ ನವೆಂಬರ್ ಒಳಗೆ ಕಾಮಗಾರಿ ಪೂರ್ಣಗೊಳಿಸಲು ಮೆ. ಸ್ಟಾರ್ ಇನ್ಫ್ರಾಟೆಕ್ ಕಂಪನಿಗೆ ಜವಾಬ್ದಾರಿ

ಮೈಸೂರು,ಡಿ.24(ಆರ್‌ಕೆ)– ಬಡವರಿಗೆ ಉಚಿತ ಆರೋಗ್ಯ ಸೇವೆ ಒದಗಿಸುವ ಮಹತ್ವಾಕಾಂಕ್ಷೆಯಿಂದ ಮೈಸೂರನ್ನು ಆಳಿದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನಿರ್ಮಿಸಿದ ದೊಡ್ಡಾಸ್ಪತ್ರೆಯೆಂದೇ ಖ್ಯಾತಿಯಾಗಿರುವ ಮೈಸೂರಿನ ಕೃಷ್ಣರಾಜೇಂದ್ರ (ಕೆ.ಆರ್.) ಆಸ್ಪತ್ರೆ ಆವರಣದಲ್ಲಿ ಇದೀಗ ನೂತನ ಹೊರರೋಗಿ ವಿಭಾಗದ (ಓಪಿಡಿ) ಬೃಹತ್ ಕಟ್ಟಡ ನಿರ್ಮಾಣಗೊಳ್ಳುತ್ತಿದೆ.

ಮೈಸೂರು ನಗರ ಹಾಗೂ ಜಿಲ್ಲೆ ಅಲ್ಲದೇ ನೆರೆಯ ಚಾಮರಾಜನಗರ, ಕೊಡಗು, ಹಾಸನ ಮತ್ತು ಮಂಡ್ಯ ಜಿಲ್ಲೆಗಳಿಂದಲೂ ರೋಗಿಗಳು ಕೆ.ಆರ್. ಆಸ್ಪತ್ರೆಗೆ ಬರುತ್ತಿರುವುದರಿಂದ ದಿನೇ ದಿನೆ ಹೊರರೋಗಿ ವಿಭಾಗ ಮತ್ತು ಒಳರೋಗಿ ವಾರ್ಡ್‌ಗಳಲ್ಲೂ ಒತ್ತಡ ಜಾಸ್ತಿಯಾಗುತ್ತಿರುವುದರಿಂದ ಉತ್ತಮ ಆರೋಗ್ಯ ಸೇವೆ ಒದಗಿಸುವ ದೃಷ್ಟಿಯಿಂದ ಒಂದೇ ಸೂರಿನಡಿ ಹಲವು ಸೌಲಭ್ಯಗಳನ್ನು ಕಲ್ಪಿಸಲು ಹೊಸದಾಗಿ ಸುಸಜ್ಜಿತ ಓಪಿಡಿ ಕಾಂಪ್ಲೆಕ್ಸ್ ನಿರ್ಮಿಸುವ ಅವಶ್ಯಕತೆಯಿದೆ ಎಂದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿ&ಆರ್‌ಐ) ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.


75 ಕೋಟಿ ರೂ. ಮಂಜೂರು: ಕಾಲೇಜಿನ ಪ್ರಸ್ತಾವನೆ ಪರಿಶೀಲಿಸಿದ ರಾಜ್ಯ ಸರ್ಕಾರವು ಆಸ್ಪತ್ರೆಗೆ ಕಟ್ಟಡ ಅಗತ್ಯವಿದೆ ಎಂಬುದು ಮನವರಿಕೆಯಾದ ಕಾರಣ ಕಳೆದ ವರ್ಷದ ಬಜೆಟ್‌ನಲ್ಲಿ ಪ್ರಸ್ತಾವನೆ ಅನುಮೋದಿಸಿ ಈ ಯೋಜನೆಗೆ 75 ಕೋಟಿ ರೂ. ಅನುದಾನವನ್ನು ಮೀಸಲಾಗಿರಿಸಿತ್ತು. ಇದೀಗ ಹಣ ಬಿಡುಗಡೆಯಾಗಿದ್ದು ಕಾಮಗಾರಿ ಆರಂಭವಾಗುತ್ತಿದೆ.

ಮೆ. ಸ್ಟಾರ್ ಇನ್ಫ್ರಾಟೆಕ್ ಕಂಪನಿಗೆ ಕಾಮಗಾರಿ: ಜಿ+3 ಕಟ್ಟಡ ನಿರ್ಮಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ವಿಭಾಗವು ಟೆಂಡರ್ ಮೂಲಕ ಬೆಂಗಳೂರು ಮೂಲದ ಮೆ. ಸ್ಟಾರ್ ಇನ್ಫ್ರಾಟೆಕ್ ಕಟ್ಟಡ ನಿರ್ಮಾಣ ಕಂಪನಿಗೆ ಕಾಮಗಾರಿ ಒಪ್ಪಿಸಿದೆ. ಕಂಪನಿಯು ಕೆ.ಆರ್.ಆಸ್ಪತ್ರೆ ಆವರಣದ ಕಲ್ಲು ಕಟ್ಟಡ, ಐಪಿಡಿ–ಓಪಿಡಿ ಬ್ಲಾಕ್, ಔಷಧ ಉಗ್ರಾಣ ಹಾಗೂ ರೇಡಿಯಾಲಜಿ ವಿಭಾಗದ ನಡುವೆ ಇರುವ ಒಟ್ಟು 12840 ಚದರ ಮೀಟರ್ ವಿಸ್ತಾರ ಪ್ರದೇಶದಲ್ಲಿ ಶೀಘ್ರವೇ ಕಾಮಗಾರಿಯನ್ನು ಆರಂಭಿಸಲಿದೆ.

ಹಳೆ ಕಟ್ಟಡ ನೆಲಸಮ: ಪ್ರಸ್ತುತ ಯೂ ಶೇಪ್‌ನಲ್ಲಿದ್ದ ಗಣ್ಯರ ವಿಶೇಷ ವಾರ್ಡ್‌ಗಳ ಶಿಥಿಲಾವಸ್ಥೆಯಲ್ಲಿದ್ದ ಹಳೆ ಕಟ್ಟಡವನ್ನು ಕೆ.ಆರ್. ಆಸ್ಪತ್ರೆ ವತಿಯಿಂದಲೇ ತೆರವುಗೊಳಿಸಿ ಇದೀಗ ಟೆಂಡರ್ ದಾರ ಕಂಪನಿಗೆ ಜಾಗವನ್ನು ಹಸ್ತಾಂತರಿಸಲಾಗಿದೆ. ಕಂಪನಿಯು ಅಲ್ಲಿ ಹಾದು ಹೋಗಿರುವ ಎಂಆರ್‌ಐ ಕೇಬಲ್ ಮಾರ್ಗವನ್ನು ಬದಲಿಸಿದ ಬಳಿಕವಷ್ಟೇ ಕೆಲಸ ಆರಂಭಿಸಬೇಕಾಗಿದೆ.

ಪಾರಂಪರಿಕ ಸಮಿತಿ ಅನುಮೋದನೆ ನಿರೀಕ್ಷೆ: ಕೆ.ಆರ್. ಆಸ್ಪತ್ರೆಯು ಪಾರಂಪರಿಕ ಕಟ್ಟಡವಾಗಿರುವುದರಿಂದ ಅಲ್ಲಿ ಹೊಸ ಕಟ್ಟಡ ನಿರ್ಮಿಸಲು ಗುತ್ತಿಗೆದಾರ ಕಂಪನಿಯು ಜಿಲ್ಲಾ ಪಾರಂಪರಿಕ ಸಮಿತಿಗೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಕೋರಿದೆ. ಈ ಕುರಿತಂತೆ ಜಿಲ್ಲಾಧಿಕಾರಿಗಳ ನೇತೃತ್ವದ ತಜ್ಞರ ಸಮಿತಿಯು ಹಲವು ಬಾರಿ ಸಭೆ ನಡೆಸಿದ್ದು, ಕೆಲ ನಿಬಂಧನೆಗಳನ್ನು ವಿಧಿಸಿ ಓಪಿಡಿ ಕಾಂಪ್ಲೆಕ್ಸ್‌ಗೆ ಅನುಮತಿ ನೀಡಲಿದೆ.

ಸೌಲಭ್ಯಗಳು: 3300 ಚ.ಮೀ.ಯ ಲೋಯರ್ ಗ್ರೌಂಡ್ ಫ್ಲೋರ್‌ನಲ್ಲಿ ರೇಡಿಯಾಲಜಿ (ಸಿಟಿ ಮತ್ತು ಎಂಆರ್‌ಐ), ಎಕ್ಸರೇ, ಫಾರ್ಮಸಿ ಸ್ಟೋರ್. ಮೆಟಿರಿಯಲ್ ಸ್ಟೋರ್, ಬ್ಲೋವರ್ ರೂಂ, ಎಲ್‌ಟಿ ಪ್ಯಾನಲ್, ಎಂಜಿಪಿಎಸ್ ಸೌಲಭ್ಯಗಳನ್ನು ಒದಗಿಸಲಾಗುವುದು. 3110 ಚ.ಮೀ. ವಿಸ್ತಾರದ ಅಪ್ಪರ್ ಗ್ರೌಂಡ್ ಫ್ಲೋರ್‌ನಲ್ಲಿ ಸೆಂಟ್ರಲ್ ರಿಜಿಸ್ಟ್ರೇಷನ್, ನಿರೀಕ್ಷಣಾ ಕೊಠಡಿ, ಮೆಡಿಸಿನ್ ವಿಭಾಗದ ಓಪಿಡಿಗಳು, ಫಾರ್ಮಸಿ, 9 ಹಾಸಿಗೆಗಳ ಪುರುಷರ ತುರ್ತು ವಾರ್ಡ್, 8 ಹಾಸಿಗೆಗಳ ಮಹಿಳೆಯರ ವಾರ್ಡ್, 9 ಹಾಸಿಗೆಗಳ ಪುರುಷರ ಇಆರ್ ಅಬ್ಸರ್‌ವೇಷನ್, ಮಹಿಳೆಯರಿಗಾಗಿ 8 ಹಾಸಿಗೆಗಳ ಇಆರ್ ಅಬ್ಸರ್‌ವೇಷನ್, 6 ಹಾಸಿಗೆಗಳ ಪೋಸ್ಟ್ ಓಪಿಯೊಂದಿಗೆ, ಮೇಜರ್ ಓಟಿ, 3090 ಚ.ಮೀ. ವಿಸ್ತಾರದ ಮೊದಲ ಮಹಡಿಯಲ್ಲಿ ದಂತ ವಿಭಾಗ, ವೆನರಾಲಜಿ, ಲೆಪ್ರಸಿ, ಡೆರ್ಮಟಾಲಜಿ, ಸೆಂಟರ್ ಲ್ಯಾಬ್, 3090 ಚ.ಮೀ. ವಿಸ್ತಾರದ 2ನೇ ಮಹಡಿಯಲ್ಲಿ 9 ಸಿಂಗಲ್ ಡಿಲಕ್ಸ್ ವಾರ್ಡ್, 30 ಹಾಸಿಗೆ ಸಾಮರ್ಥ್ಯದ ಸೆಮಿಸ್ಪೆಷಲ್ ವಾರ್ಡ್‌ಗಳು, 7 ವಿಐಪಿ ಸೂಟ್‌ಗಳು ಬರಲಿವೆ.





ನೂತನ ಕಟ್ಟಡದ ನೀಲನಕ್ಷೆ. ಕೆ.ಆರ್.ಆಸ್ಪತ್ರೆಯಲ್ಲಿ ಹಳೆ ಕಟ್ಟಡ ನೆಲಸಮ ಮಾಡಿರುವುದು.

> “ಹಿಂದೆ ರಾಜ–ಮಹಾರಾಜರು ನಿರ್ಮಿಸಿರುವ ಕೆ.ಆರ್. ಆಸ್ಪತ್ರೆ ಓಪಿಡಿ ವಿಭಾಗದಲ್ಲಿ ಒತ್ತಡ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಸುವ್ಯವಸ್ಥಿತ ಹಾಗೂ ವಿಸ್ತಾರವಾದ ಕಟ್ಟಡದ ಅಗತ್ಯವಿತ್ತು. ಬಹುನಿರೀಕ್ಷಿತ ಈ ಯೋಜನೆಗೆ ಸರ್ಕಾರವು ಅನುದಾನ ಒದಗಿಸಿರುವುದರಿಂದ ರೋಗಿಗಳ ಅನುಕೂಲಕ್ಕಾಗಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ನೂರು ವರ್ಷ ತುಂಬಿದ ಸವಿ ನೆನಪಿಗಾಗಿ ಸಂಸ್ಥೆಯಡಿ ಬರುವ ಕೆ.ಆರ್. ಆಸ್ಪತ್ರೆಗೆ ವಿನೂತನ ಸೆಂಟೆನರಿ ಓಪಿಡಿ ಕಾಂಪ್ಲೆಕ್ಸ್ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಅದು ಸಾಕಾರಗೊಂಡಲ್ಲಿ ಮೈಸೂರು ಹಾಗೂ ಸುತ್ತಮುತ್ತಲ ಭಾಗದ ರೋಗಿಗಳಿಗೆ ಒಂದೇ ಸೂರಿನಡಿ ಗುಣಮಟ್ಟದ ಚಿಕಿತ್ಸೆ ನೀಡಲು ಅನುಕೂಲ ವಾಗುತ್ತದೆ.
>
> –ಡಾ. ಕೆ.ಆರ್.ದಾಕ್ಷಾಯಿಣಿ, ಡೀನ್ ಮತ್ತು ಡೈರೆಕ್ಟರ್, ಮೈಸೂರು ಮೆಡಿಕಲ್ ಕಾಲೇಜು–ಸಂಶೋಧನಾ ಸಂಸ್ಥೆ



ಇತರ ಸೌಲಭ್ಯಗಳು

ಹೊಸ ಓಪಿಡಿ ಕಾಂಪ್ಲೆಕ್ಸ್ ಕಟ್ಟಡದಲ್ಲಿ ಅಗ್ನಿಶಾಮಕ ಉಪಕರಣಗಳು, 20 ಮಂದಿ ವ್ಯಕ್ತಿಗಳು ಮತ್ತು ರೋಗಿಯ ಬೆಡ್ ಸಾಮರ್ಥ್ಯದ ಲಿಫ್ಟ್, ಸಿಸಿ ಟಿವಿ ಕ್ಯಾಮರಗಳು, ನರ್ಸ್ ಕಾಲ್ ಸಿಸ್ಟಮ್, ಯುಪಿಎಸ್ ಸಿಸ್ಟಮ್, ಎವಿ ಸಿಸ್ಟಮ್, ಸೋಲಾರ್ ಸಿಸ್ಟಮ್, ಟೆಲಿಫೋನ್ ಮತ್ತು ನೆಟ್‌ವರ್ಕಿಂಗ್ ಸಿಸ್ಟಮ್ ಸೌಲಭ್ಯಗಳನ್ನು ಒದಗಿಸಲಾಗುವುದು.

ಹೈ–ಟೆಕ್ ಬೋಟ್‌ನಿಂದ ಸ್ವಚ್ಛಗೊಳಿಸಿದರೂ ಕುಕ್ಕರಹಳ್ಳಿ ಕೆರೆ ಸಂಪೂರ್ಣ ಸ್ವಚ್ಛಗೊಂಡಿಲ್ಲ

ಮೈಗ್ರಾಪ ಹೇಳಿಕೆ, ಪೂರ್ಣಯ್ಯ ನಾಲೆ ಒತ್ತುವರಿ ತೆರವಿಂದ ಮಾತ್ರ ಕೆರೆ ಶುದ್ಧೀಕರಣ ಸಾಧ್ಯ



ಕೆಎಸ್‌ಪಿಸಿಪಿ ಕಚೇರಿ ಭೇಟಿ ವೇಳೆ ಕೆಎಸ್‌ಪಿಸಿಬಿ ಜೋನಲ್ ಅಧಿಕಾರಿ ರಾಜಶೇಖರ್, ರೀಜನಲ್ ಅಧಿಕಾರಿ ಸುನಿಲ್, ಹರಿಪ್ರಸಾದ್, ಮೈಗ್ರಾಪದ ಭಾಮಿ ವಿ.ಶೆಣೈ, ಮೇಜರ್ ಜನರಲ್ ಒಂಬತ್ಕೆರೆ, ಡಿ.ವಿ.ದಯಾನಂದ್ ಸಾಗರ್, ಸುಮನ್ ಶೆಣೈ ಉಪಸ್ಥಿತರಿದ್ದರು.

ಮೈಸೂರು, ಡಿ.24– ಹೈ–ಟೆಕ್ ಬೋಟ್ ಮೂಲಕ ಸ್ವಚ್ಛಗೊಳಿಸಿದರೂ ಕುಕ್ಕರಹಳ್ಳಿ ಕೆರೆ ಸಂಪೂರ್ಣವಾಗಿ ಸ್ವಚ್ಛವಾಗಿಲ್ಲ. ಕೆರೆಯ ನೀರು ಹಿಂದಿನ ಪ್ರಮಾಣದಷ್ಟೇ ಕಲುಷಿತವಾಗಿದೆ ಎಂದು ಮೈಸೂರು ಗ್ರಾಹಕರ ಪರಿಷತ್ ತಿಳಿಸಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಮೈಗ್ರಾಪ, ಭಾಮಿ ವಿ ಶೆಣೈ ಅವರ ನೇತೃತ್ವದಲ್ಲಿ ಮೈಗ್ರಾಪ ನಿಯೋಗವು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಅವರನ್ನು ಕುಕ್ಕರಹಳ್ಳಿ ಕೆರೆಯ ವಿಷಯವಾಗಿ ಇತ್ತೀಚಿಗೆ ಭೇಟಿ ಮಾಡಿದ ಸಂದರ್ಭದಲ್ಲಿ ಅವರು, ಹೈ–ಟೆಕ್ ಬೋಟ್ ಖರೀದಿಸಲಾಗಿದೆ. ಈ ಬಾರಿ ಬೋಟ್ ಮುಖಾಂತರ ಕೆರೆಯನ್ನು ಶುದ್ಧಗೊಳಿಸಲು ಒಂದು ಪರಿಣಿತ ತಂಡವನ್ನು ತರಬೇತಿ ನೀಡಿ ಕಾರ್ಯಾರಂಭ ಮಾಡಲಾಗುವುದೆಂದು ತಿಳಿಸಿದರು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಹುಣಸೂರಿನ ಮುಖ್ಯರಸ್ತೆಯಲ್ಲಿ ಕೆರೆಯ ದುರ್ವಾಸನೆ ಹೆಚ್ಚಾಗಿರುವ ಕಾರಣ ಕೆಎಸ್‌ಪಿಸಿಬಿ ಕಚೇರಿಗೆ ತೆರಳಿ ಅಧಿಕಾರಿಗಳ ಜೊತೆ ಕೂಲಂಕುಶವಾಗಿ ಚರ್ಚೆ ಮಾಡಿ ಅಕ್ಟೋಬರ್ ಹಾಗೂ ನವೆಂಬರ್ ತಿಂಗಳಿನ ನೀರಿನ ಪ್ರಮಾಣದ ಲ್ಯಾಬ್ ರಿಪೋರ್ಟ್ ವರದಿ ತೆಗೆದುಕೊಂಡ ನಂತರ ಹಿಂದಿನಷ್ಟೇ ಪ್ರಮಾಣದಲ್ಲಿ ಕೆರೆಯ ನೀರು ಕಲುಷಿತಗೊಂಡಿರುವುದು ರಿಪೋರ್ಟ್‌ನಿಂದ ಗೊತ್ತಾಗಿದೆ.

ಹೈ–ಟೆಕ್ ಬೋಟ್‌ನಿಂದ ಸ್ವಚ್ಛಗೊಳಿಸಿದರೂ ಕೆರೆಯ ತಳಹದಿಯಲ್ಲಿರುವ ಪೂರ್ಣ ಸಾರಾಂಶ ತಿಳಿಯಾಗುವುದಿಲ್ಲ. ಆದ ಕಾರಣ ಮೈಸೂರು ವಿವಿಯಿಂದ ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆದು ಪೂರ್ಣಯ್ಯ ನಾಲೆ ತೆರವುಗೊಳಿಸಿದರೆ, ಹೊಸ ನೀರು ಕೆರೆಗೆ ಬರುವುದರಿಂದ ನೀರು ಶುದ್ಧಿಗೊಳ್ಳುವುದರ ಜೊತೆಗೆ ಕೆರೆಯನ್ನು ಸುಸ್ಥಿತಿಯಲ್ಲಿಡಬಹುದು ಈ ನಿಟ್ಟಿನಲ್ಲಿ ಕ್ರಮ ಕೈಗೊಳಬೇಕೆಂದು ಮೈಸೂರು ವಿವಿ ಕುಲಸಚಿವೆ ಸವಿತಾ ಅವರಲ್ಲಿ ಮೈಗ್ರಾಪ ಕಳಕಳಿಯ ಮನವಿ ಮಾಡುತ್ತದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಕೆಎಸ್‌ಪಿಸಿಪಿ ಕಚೇರಿಯ ಭೇಟಿಯ ಸಂದರ್ಭದಲ್ಲಿ ಕೆಎಸ್‌ಪಿಸಿಬಿ ಜೋನಲ್ ಅಧಿಕಾರಿ ರಾಜಶೇಖರ್, ರೀಜನಲ್ ಅಧಿಕಾರಿ ಸುನಿಲ್, ಹರಿಪ್ರಸಾದ್, ಮೈಗ್ರಾಪದ ಭಾಮಿ ವಿ.ಶೆಣೈ, ಮೇಜರ್ ಜನರಲ್ ಒಂಬತ್ಕೆರೆ, ಡಿ.ವಿ.ದಯಾನಂದ್ ಸಾಗರ್ ಸುಮನ್ ಶೆಣೈ ಉಪಸ್ಥಿತರಿದ್ದರು.

ನೂತನ ದಿನದರ್ಶಿಕೆ ಬಿಡುಗಡೆ ಸಮಾರಂಭ

ಮೈಸೂರು,ಡಿ.24–ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ ಆಶ್ರಯದಲ್ಲಿ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮ ದಿನಾಚರಣೆ ಹಾಗೂ ಸಂಧ್ಯಾ ಸುರಕ್ಷಾ ಟ್ರಸ್ಟ್‌ನ ನೂತನ ದಿನದರ್ಶಿಕೆ ಬಿಡುಗಡೆ ಸಮಾರಂಭವನ್ನು ಡಿ.27ರಂದು ಬೆಳಗ್ಗೆ 10.30ಕ್ಕೆ ದೇವಯ್ಯನಹುಂಡಿ ಮುಖ್ಯ ರಸ್ತೆಯಲ್ಲಿರುವ ಶಾಕಾಂಬರಿ ಧಾರ್ಮಿಕ ಕೇಂದ್ರದಲ್ಲಿ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಶಾಸಕರಾದ ಟಿ.ಎಸ್.ಶ್ರೀವತ್ಸ, ಜಿ.ಟಿ.ದೇವೇಗೌಡ, ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪುಷ್ಪ ಅಯ್ಯಂಗಾರ್, ಡಾ.ಲೀಲಾಪ್ರಕಾಶ್ ಭಾಗವಹಿಸಲಿದ್ದಾರೆ. ಇದೇ ವೇಳೆ ಹೋಟೆಲ್ ಉದ್ಯಮಿ ರಘುನಂದನ್ ಜಿ.ಜಿ. ಮತ್ತು ರಾಜೇಶ್ವರಿ ದಂಪತಿಯನ್ನು ಸನ್ಮಾನಿಸಲಾಗುವುದು.

ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು,ಡಿ.24–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಪಿಯುಸಿ ಮತ್ತು ಸಾಮಾನ್ಯ ಪದವಿ ಹೊರತುಪಡಿಸಿ ಉಳಿದ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2025–26ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿ, ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆಯ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಜನವರಿ 31ರವರೆಗೆ ವಿಸ್ತರಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಮಾಹಿತಿಗೆ ಸಹಾಯವಾಣಿ ಸಂ: 8050770005 ಸಂಪರ್ಕಿಸಿ.

ಡಿ.26, 27ಕ್ಕೆ ಸಿಸಿಎಆರ್‌ಡಿ ಅಂತರರಾಷ್ಟ್ರೀಯ ಸಮ್ಮೇಳನ



ಶ್ರೀ ನಿರ್ಮಲಾನಂದನಾಥ | ಡಾ.ಅಶ್ವಥ್ ನಾರಾಯಣ್ | ಶಿವರಾತ್ರಿ ಸ್ವಾಮೀಜಿ | ಡಾ.ವೀರೇಂದ್ರ ಹೆಗ್ಗಡೆ | ಡಾ.ಭಾಸ್ವತಿ | ಡಾ.ವಿಜಯಲಕ್ಷ್ಮಿ



ಡಾ.ಪ್ರಕಾಶ್ | ಡಾ.ವಿಜಯೇಂದ್ರ | ಡಾ.ಪ್ರಸಾದ್ | ಡಾ.ಚಂದ್ರಶೇಖರ್ | ಡಾ.ಸರಳ | ಡಾ.ನರೇಶ್‌ಕುಮಾರ್

ಮೈಸೂರು,ಡಿ.24(ಎಂಟಿವೈ)– ಚಾಮುಂಡಿಬೆಟ್ಟದ ತಪ್ಪಲಿನ ಎಸ್‌ಡಿಎಂಐಎಂಡಿ ಸಭಾಂಗಣದಲ್ಲಿ ಡಿ.26 ಮತ್ತು 27ರಂದು ಕಾವೇರಿ ಆಯುರ್ವೇದ ವೈದ್ಯಕೀಯ ಕಾಲೇಜು ವತಿಯಿಂದ 'ಆಹಾರ ಪದ್ಧತಿ–ವಿಹಾರ (ಜೀವನ ಶೈಲಿ)– ಸುಸ್ಥಿರ ಆರೋಗ್ಯ ವಿಚಾರ' ಕುರಿತ ಸಿಸಿಎಆರ್‌ಡಿ ಅಂತರರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಕಾವೇರಿ ಸಮೂಹ ಸಂಸ್ಥೆಯ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್ ತಿಳಿಸಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ ಆಯುರ್ವೇದ ವೈದ್ಯಕೀಯ ಕಾಲೇಜು ಹಾಗೂ ಕಾಲೇಜಿನ ಡಾ.ಚಂದ್ರಶೇಖರ್ ಕಾವೇರಿ ಆಯುರ್ವೇದ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಮತ್ತು ಮಹಾರಾಜ ಇನ್ಸ್ಟಿಟ್ಯೂಟ್ ಆಫ್ ಆಯುರ್ವೇದ ಮೆಡಿಕಲ್ ಸೈನ್ಸ್ ಕಾಲೇಜು ಮತ್ತು ಆಸ್ಪತ್ರೆ ಸಹಯೋಗದಲ್ಲಿ ಈ ಸಮ್ಮೇಳನ ಹಮ್ಮಿಕೊಳ್ಳಲಾಗಿದ್ದು, ಎಸ್‌ಡಿಎಂಐಎಂಡಿ ಸಭಾಂಗಣದಲ್ಲಿ ಡಿ.26ರಂದು ಸಂಜೆ 5ಕ್ಕೆ ಆದಿಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸಾನಿಧ್ಯದಲ್ಲಿ ಆರಂಭವಾಗುವ ಸಮ್ಮೇಳನದಲ್ಲಿ ಮಾಜಿ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ, ನವದೆಹಲಿಯ ಬೋರ್ಡ್ ಆಫ್ ಎಥಿಕ್ಸ್ ಅಂಡ್ ರಿಜಿಸ್ಟ್ರೇಷನ್ ಸದಸ್ಯ ಪ್ರೊ.ನಾರಾಯಣ ಎಸ್.ಜಾಧವ್, ಶಾಸಕ ಜಿ.ಟಿ.ದೇವೇಗೌಡ, ಆಯುಷ್ ಇಲಾಖೆ ಆಯುಕ್ತ ವಿಪಿನ್ ಸಿಂಗ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ.ಬಿ.ಸಿ.ಭಗವಾನ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಿಎಫ್‌ಟಿಆರ್‌ಐ ಮಾಜಿ ನಿರ್ದೇಶಕ ಡಾ.ವಿ.ಪ್ರಕಾಶ್ ಪ್ರಾಸ್ತಾವಿಕ ಭಾಷಣ ಮಾಡಲಿದ್ದಾರೆ ಎಂದರು.

ಡಿ.27ರಂದು ಮಧ್ಯಾಹ್ನ 3ಕ್ಕೆ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಶ್ರೀಗಳ ಸಾನ್ನಿಧ್ಯದಲ್ಲಿ ಸಮಾರೋಪ ಸಮಾರಂಭ ನಡೆಯಲಿದ್ದು, ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಟಿ.ಎಸ್.ಶ್ರೀವತ್ಸ, ಆಯುರ್ವೇದ ತಜ್ಞ ಡಾ.ವಿಜಯೇಂದ್ರ ಎಸ್.ಮೂರ್ತಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಾವೇರಿ ಸಮೂಹ ಸಂಸ್ಥೆಯ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್ ಅಧ್ಯಕ್ಷತೆ ವಹಿಸಲಿರುವ ಕಾರ್ಯಕ್ರಮದಲ್ಲಿ ಆಯುಷ್ ಇಲಾಖೆ ನಿವೃತ್ತ ವಿಶೇಷಾಧಿಕಾರಿ ಡಾ.ಎನ್.ಆಂಜನೇಯಮೂರ್ತಿ ಅವರಿಗೆ 'ಕಾವೇರಿ ಆಯುರ್ವೇದ ಗುರು ತಿಲಕ', ಶಿರಸಿ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ವೈದ್ಯಕೀಯ ಅಧಿಕಾರಿ ಡಾ.ಜಗದೀಶ್ ವಿಷ್ಣುಯಾಜಿ ಅವರಿಗೆ 'ಕಾವೇರಿ ಆಯುರ್ವೇದ ವೈದ್ಯ ಶ್ರೇಷ್ಠ' ಜೀವಮಾನ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಎಂದರು.

ಸಮ್ಮೇಳನದಲ್ಲಿ ಅಮೆರಿಕಾ, ಬ್ರಿಟನ್, ಆಸ್ಟ್ರೇಲಿಯಾ ಹಾಗೂ ದೇಶದ ವಿವಿಧ ಭಾಗಗಳಿಂದ ತಜ್ಞರು ಆಗಮಿಸಿ ಜೀವನ ಶೈಲಿ ಹಾಗೂ ಆರೋಗ್ಯ ಪರಿಸ್ಥಿತಿ, ಆಹಾರ ಪದ್ಧತಿ, ಸುಸ್ಥಿರ ಆರೋಗ್ಯ ಹಾಗೂ ಇನ್ನಿತರ ವಿಷಯ ಕುರಿತು ಬೆಳಕು ಚೆಲ್ಲಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಎನ್.ಕೃಷ್ಣಪ್ರಸಾದ್, ಡಾ.ಎನ್.ವಿ.ಕೃಷ್ಣಮೂರ್ತಿ, ಡಾ.ರಾಮಚಂದ್ರ, ಡಾ.ವಿ.ಪೂರ್ಣಿಮಾ ಇದ್ದರು.

ದೇಶ – ವಿದೇಶ

ಹಿಂಸಾಚಾರದಲ್ಲಿ ಹತ್ಯೆಗೀಡಾದ ಹಿಂದೂ ಕಾರ್ಮಿಕನ ಕುಟುಂಬದ ಜವಾಬ್ದಾರಿ ವಹಿಸಿಕೊಂಡ ಬಾಂಗ್ಲಾ ಸರ್ಕಾರ




ಢಾಕಾ: ಕಳೆದ ವಾರ ಧರ್ಮನಿಂದನೆಯ ಆರೋಪದ ಮೇಲೆ ಹತ್ಯೆಗೀಡಾದ ಹಿಂದೂ ಕಾರ್ಮಿಕನ ಕುಟುಂಬದ ಜವಾಬ್ದಾರಿಯನ್ನು ನಮ್ಮ ಸರ್ಕಾರ ವಹಿಸಿಕೊಳ್ಳುತ್ತದೆ ಎಂದು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಹಿರಿಯ ಸಲಹೆಗಾರರು ತಿಳಿಸಿದ್ದಾರೆ. ಡಿ.18ರಂದು ಮೈಮೆನ್ಸಿಂಗ್‌ನಲ್ಲಿ ಉದ್ರಿಕ್ತ ಗುಂಪು ಬೆಂಕಿಯಿಂದ ಸುಟ್ಟು ಹತ್ಯೆಗೀಡಾದ 25 ವರ್ಷದ ದೀಪು ದಾಸ್ ಅವರ ದುಃಖತಪ್ತ ಕುಟುಂಬಸ್ಥರನ್ನು ಶಿಕ್ಷಣ ಸಲಹೆಗಾರ ಸಿ.ಆರ್.ಅಬ್ರಾರ್ ಭೇಟಿ ಮಾಡಿ ಸಾಂತ್ವನ ಹೇಳಿದರು. ಸರ್ಕಾರವು ದೀಪುದಾಸ್ ಅವರ ಮಗು, ಹೆಂಡತಿ ಮತ್ತು ಪೋಷಕರನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಿಕೊಂಡಿದೆ ಎಂದು ಅಬ್ರಾರ್ ತಿಳಿಸಿದರು. ಕುಟುಂಬವನ್ನು ಭೇಟಿ ಮಾಡುವ ಮೊದಲು, ಮುಖ್ಯ ಸಲಹೆಗಾರ ಮುಹಮ್ಮದ್ ಯೂನಸ್ ಅವರೊಂದಿಗೆ ಮಾತುಕತೆ ನಡೆಸಿದರು. ಸರ್ಕಾರದ ಕಡೆಯಿಂದ ಯೂನಸ್ ಅವರು ಸಂತಾಪ ಸೂಚಿಸಿದ್ದಾರೆ ಎಂದರು.

ಪ್ರಶ್ನೆ ಪತ್ರಿಕೆ ವಿವಾದ, ಜೆಎಂಐ ಪ್ರೊಫೆಸರ್ ಅಮಾನತು

ನವದೆಹಲಿ: ದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾ (ಜೆಎಂಐ)ಪ್ರಾಧ್ಯಾಪಕರೊಬ್ಬರು ಸೆಮಿಸ್ಟರ್ ಪರೀಕ್ಷೆಯೊಂದಕ್ಕೆ ಆಯ್ಕೆ ಮಾಡಿದ ಪ್ರಶ್ನೆಯು ಸಾಮಾಜಿಕ ಮಾಧ್ಯಮದಲ್ಲಿ ವಿವಾದ ಹಾಗೂ ತೀವ್ರ ಆಕ್ರೋಶಕ್ಕೆ ಕಾರಣವಾದ ನಂತರ ಅವರನ್ನು ಅಮಾನತುಗೊಳಿಸಲಾಗಿದೆ.

ಈ ಕುರಿತು ತನಿಖೆಗೆ ವಿಶ್ವವಿದ್ಯಾನಿಲಯ ತನಿಖಾ ಸಮಿತಿಯೊಂದನ್ನು ರಚಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ವಾರದ ಆರಂಭದಲ್ಲಿ ನಡೆದ BA (Hons)Social work semester Exmination ನಲ್ಲಿ ಕೇಳದ 15 ಅಂಕಗಳ ಪ್ರಶ್ನೆಗೆ ಸಂಬಂಧಿಸಿದ ವಿವಾದ ಇದಾಗಿದೆ. ಭಾರತದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳನ್ನು ಚರ್ಚಿಸಿ, ಸೂಕ್ತ ಉದಾಹರಣೆಗಳನ್ನು ನೀಡುವಂತೆ ಪ್ರಶ್ನೆ ಕೇಳಲಾಗಿತ್ತು. ಪ್ರೊ.ವೀರೇಂದ್ರ ಬಾಲಾಜಿ ಶಹಾರೆ ಈ ಪ್ರಶ್ನೆ ಆಯ್ಕೆ ಮಾಡಿದ್ದರು ಎನ್ನಲಾಗಿದೆ. ದೂರುಗಳು ಬಂದ ನಂತರ ತನಿಖಾ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯು ತನ್ನ ವರದಿಯನ್ನು ಸಲ್ಲಿಸುವವರೆಗೆ, ಸಂಬಂಧಪಟ್ಟ ಪ್ರಾಧ್ಯಾಪಕರನ್ನು ಅಮಾನತುಗೊಳಿಸಲಾಗಿದೆ ಎಂದು ವಿಶ್ವವಿದ್ಯಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


ಬಾಂಗ್ಲಾದೇಶದ ಮೇಲೆ ದಾಳಿ ಮಾಡಿದರೆ ಭಾರತಕ್ಕೆ ಬಲದ ತಕ್ಕ ಉತ್ತರ: ಪಾಕ್ ಎಚ್ಚರಿಕೆ



ಇಸ್ಲಾಮಾಬಾದ್: ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಮುಂದಿಟ್ಟುಕೊಂಡು ಭಾರತ ದಾಳಿಗೆ ಮುಂದಾದರೆ ಪಾಕಿಸ್ತಾನ ತನ್ನ ಸಂಪೂರ್ಣ ಬಲದೊಂದಿಗೆ ಬಾಂಗ್ಲಾದೇಶ ಪರ ನಿಂತು ಹೋರಾಟ ನಡೆಸಲಿದೆ ಎಂದು ಪಾಕಿಸ್ತಾನ ಸರ್ಕಾರ ಎಚ್ಚರಿಸಿದೆ. ಭಾರತ ಮತ್ತು ಬಾಂಗ್ಲಾದೇಶದ ನಡುವಿನ ಸಂಬಂಧ ಹದಗೆಟ್ಟಿದ್ದು, ಇದರ ಬೆನ್ನಲ್ಲೇ ಈ ಪರಿಸ್ಥಿತಿಯನ್ನು ತನ್ನ ಲಾಭಕ್ಕೆ ಬಳಸಿಕೊಳ್ಳಲು ಪಾಕಿಸ್ತಾನ ಸಂಚು ರೂಪಿಸುತ್ತಿದೆ. ಬಾಂಗ್ಲಾದೇಶ ಮತ್ತು ಭಾರತದ ನಡುವಿನ ಅಸಮಾಧಾನವನ್ನು ಮತ್ತು ಶೀತಲ ಸಮರವನ್ನು ದುರುಪಯೋಗಪಡಿಸಿಕೊಳ್ಳಲು ಪಾಕ್ ಪ್ರಯತ್ನಿಸುತ್ತಿದೆ.

ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರ ಪಕ್ಷವಾದ ಪಾಕಿಸ್ತಾನ ಮುಸ್ಲಿಂ ಲೀಗ್ (ಪಿಎಂಎಲ್)ನ ಯುವ ವಿಭಾಗದ ನಾಯಕ ಕಮ್ರಾನ್ ಸಯೀದ್ ಉಸ್ಮಾನಿ ಇಂದು ಭಾರತಕ್ಕೆ ಬೆದರಿಕೆ ಹಾಕಿದ್ದು, ಬಾಂಗ್ಲಾದೇಶದ ಮೇಲೆ ಭಾರತದಿಂದ ಯಾವುದೇ ದಾಳಿ ನಡೆದರೆ ಪಾಕಿಸ್ತಾನದ ಸೈನ್ಯ ಮತ್ತು ಕ್ಷಿಪಣಿಗಳು ಅದಕ್ಕೆ ಪ್ರತಿಕ್ರಿಯಿಸುತ್ತವೆ ಎಂದು ಹೇಳಿದ್ದಾರೆ.

ದೆಹಲಿಯಲ್ಲಿ ಎರಡು ದಿನ ಇದ್ದಿದ್ದಕ್ಕೆ ಸೋಂಕು ತಗುಲಿದೆ: ನಿತಿನ್ ಗಡ್ಕರಿ




ನವದೆಹಲಿ: ದೆಹಲಿಯ ಗಾಳಿಯ ಗುಣಮಟ್ಟ ಮಂಗಳವಾರ ಗಣನೀಯವಾಗಿ ಹದಗೆಟ್ಟಿದ್ದು, ಮತ್ತೆ ತೀವ್ರ ಮಟ್ಟಕ್ಕೆ ಕುಸಿತವಾದ ವೇಳೆಯಲ್ಲೇ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಟೀಕಿಸಿದ್ದಾರೆ.

ದೆಹಲಿಯಲ್ಲಿ ನಡೆದ ಹಿರಿಯ ಪತ್ರಕರ್ತ ಮತ್ತು ಮಾಜಿ ಕೇಂದ್ರ ಮಾಹಿತಿ ಆಯುಕ್ತ ಉದಯ್ ಮಹೂರ್ಕರ್ ಅವರ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದ ಅವರು, ನಾನು ಇಲ್ಲಿ ವಾರಕ್ಕೆ ಎರಡು ದಿನ ವಾಸಿಸುತ್ತಿದ್ದೇನೆ. ಈ ಮಾಲಿನ್ಯದಿಂದಾಗಿ ನನಗೆ ಸೋಂಕು ಬರುತ್ತದೆ ಎಂದಿದ್ದಾರೆ. ದೆಹಲಿ ಮಾಲಿನ್ಯದಿಂದ ತತ್ತರಿಸುತ್ತಿರುವುದು ಏಕೆ? ಎಂದು ಪ್ರಶ್ನಿಸಿದರು.

ದೆಹಲಿ ಮತ್ತು ಅದರ ಪಕ್ಕದ ಪ್ರದೇಶಗಳಲ್ಲಿ ಮಾಲಿನ್ಯಕ್ಕೆ ಸಾರಿಗೆಯು ಶೇ.40ರಷ್ಟು ಕೊಡುಗೆ ನೀಡುತ್ತದೆ. ಶೇ.40ರಷ್ಟು ಮಾಲಿನ್ಯವು ಪಳೆಯುಳಿಕೆ ಇಂಧನದಿಂದಾಗಿ ಉಂಟಾಗುತ್ತಿದೆ. ಪಳೆಯುಳಿಕೆ ಇಂಧನಗಳನ್ನು ಆಮದು ಮಾಡಿಕೊಳ್ಳಲು ಮತ್ತು ಮಾಲಿನ್ಯವನ್ನು ಹೆಚ್ಚಿಸಲು ನಾವು 22 ಲಕ್ಷ ಕೋಟಿಗಳನ್ನು ಖರ್ಚು ಮಾಡುತ್ತಿದ್ದೇವೆ ಎಂದರು.

ಹಾದಿಯನ್ನು ಕೊಂದಿದ್ದೇ ನೀವು: ಬಾಂಗ್ಲಾ ಸರ್ಕಾರ ವಿರುದ್ಧ ಸೋದರನ ಗಂಭೀರ ಆರೋಪ



ಢಾಕಾ: ಫೆಬ್ರವರಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಚುನಾವಣೆಯನ್ನು ಹಳಿತಪ್ಪಿಸಲು ಮೊಹಮ್ಮದ್ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರದ ಒಂದು ಗುಂಪು ನನ್ನ ತಮ್ಮನನ್ನು ಹತ್ಯೆ ಮಾಡಿದೆ ಎಂದು ಬಾಂಗ್ಲಾದೇಶದ ವಿದ್ಯಾರ್ಥಿ ನಾಯಕ ಷರೀಫ್ ಉಸ್ಮಾನ್ ಹಾದಿ ಸೋದರ ಆರೋಪಿಸಿದ್ದಾರೆ.

ನಿಮ್ಮ ಆಡಳಿತದಲ್ಲಿ ಉಸ್ಮಾನ್ ಹತ್ಯೆಯಾಗಿದೆ. ನಿಮ್ಮ ಜವಬ್ದಾರಿಯಿಂದ ನುಣುಚಿಕೊಳ್ಳಬೇಡಿ. ನೀವು ನ್ಯಾಯವನ್ನು ಎದುರಿಸಬೇಕಾಗುತ್ತದೆ. ಎರಡು ತಿಂಗಳ ನಂತರ ನೀವು ದೇಶವನ್ನು ತೊರೆಯುತ್ತೀರಿ ಎಂದು ನೀವು ಭಾವಿಸಿದರೆ, ಅದು ಸಾಧ್ಯವಾಗುವುದಿಲ್ಲ ಎಂದು ಬಾಂಗ್ಲಾದೇಶದ ಮಾಧ್ಯಮ ಷರೀಫ್ ಒಮರ್ ಹಾದಿ ಹೇಳಿದ್ದಾರೆ.

ಹಾದಿಯನ್ನು ಕೊಂದಿದ್ದೇ ನೀವು. ಈಗ ನೀವು ಬಾಂಗ್ಲಾದೇಶದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಹಳಿತಪ್ಪಿಸಲು ಆತನ ಸಾವಿನ ವಿಷಯ ಬಳಸುತ್ತಿದ್ದೀರಿ ಎಂದು ಉಸ್ಮಾನ್ ಹಾದಿ ಅವರ ಸಹೋದರ ಹೇಳಿದ್ದಾರೆ.

ಮೈಸೂರು ಮಿತ್ರ ಗುರುವಾರ 25 ಡಿಸೆಂಬರ್ 2025

ಗ್ರಾಮಾಭಿವೃದ್ಧಿಯಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬೆಟ್ಟಗೇರಿ ವಲಯದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಸಲಕರಣೆಗಳನ್ನು ವಿತರಿಸಲಾಯಿತು.

ನಾಪೋಕ್ಲು, ಡಿ.24(ದುಗ್ಗಳ)–ಗ್ರಾಮಗಳು ಅಭಿವೃದ್ಧಿ ಹೊಂದಿದರೆ ದೇಶ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ವಿಧಾನಸಭಾ ಮಾಜಿ ಅಧ್ಯಕ್ಷ ಕೊಂಬಾರನ ಜಿ. ಬೋಪಯ್ಯ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ – ಮೇಕೇರಿ ಗೌರಿ ಶಂಕರ ದೇವಾಲಯದಲ್ಲಿ ಆಯೋಜಿಸಿದ್ದ ಸಾಮೂಹಿಕ ಶ್ರೀ ಸತ್ಯ ನಾರಾಯಣ ಪೂಜೆ ಮತ್ತು 1500 ಹೊಸ ಸದಸ್ಯರ ಸೇರ್ಪಡೆ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಆಯೋಜಿಸಲಾಗುತ್ತಿರುವ ಜನಪರ ಕಾರ್ಯಕ್ರಮಗಳಿಂದಾಗಿ ಗ್ರಾಮೀಣ ಜನರು ಸದೃಢರಾಗಲು ಸಹಕಾರಿಯಾಗಿದೆ ಎಂದರು.

ಗ್ರಾಮಾಭಿವೃದ್ಧಿ ಯೋಜನೆಯ ಉಡುಪಿ ಪ್ರಾದೇಶಿಕ ವಿಭಾಗದ ನಿರ್ದೇಶಕ ಆನಂದ ಸುವರ್ಣ ಮಾತನಾಡಿ, ಬಹಳ ದೊಡ್ಡ ಮಟ್ಟದಲ್ಲಿ ದೇಶಕ್ಕೆ ಸೈನಿಕರನ್ನು ಕೊಟ್ಟ ಪ್ರದೇಶ ಕೊಡಗಿನ ಬದುಕು ಮತ್ತು ಸಂಸ್ಕೃತಿಯನ್ನು ಮಕ್ಕಳಿಗೆ ತಿಳಿಸಿ ಹೇಳುವ ಅಗತ್ಯವಿದೆ. ಸ್ವಾಭಿಮಾನದ ಬದುಕನ್ನು ನಡೆಸಲು, ಸಂಸ್ಕಾರವನ್ನು ಹೆಚ್ಚಿಸಿಕೊಳ್ಳಲು ಇಂತಹ ಪೂಜಾ ಕಾರ್ಯಕ್ರಮಗಳನ್ನು ಸಂಸ್ಥೆ ಮಾಡುತ್ತದೆ ಎಂದರು.

ಜಿಲ್ಲಾ ಜನ ಜಾಗೃತಿ ವೇದಿಕೆ ಸದಸ್ಯ ಬೆಳ್ಯನ ಚಂದ್ರ ಪ್ರಕಾಶ ಕಾರ್ಯಕ್ರಮವನ್ನು ಸದುಪಯೋಗ ಪಡಿಸಿಕೊಳ್ಳುವ ಬಗ್ಗೆ ತಿಳಿಸಿ ಶುಭ ಹಾರೈಸಿದರು. ಶ್ರೀ ಗೌರಿಶಂಕರ ದೇವಾಲಯದ ಅಧ್ಯಕ್ಷ ಕೆ.ಕೆ ಪೂರ್ಣಯ್ಯ, ಉಪಾಧ್ಯಕ್ಷ ಕೆ.ಆರ್.ಬೆಳ್ಯಪ್ಪ, ಮೇಕೇರಿ ಗ್ರಾಪಂ ಸದಸ್ಯ ಹನೀಫ್, ಸುಶೀಲ, ಪ್ರಗತಿ ಜಿಲ್ಲಾ ಜನಜಾಗೃತಿ ವೇದಿಕೆಯ ಉಪಾ – ಸಮಿತಿಯ ಗೌರವಾಧ್ಯಕ್ಷ ಟಿ.ಎ, ಕುಮಾರ್ ಸ್ವಾಗತ್ ಯುವಕ ಸಂಘದ ಅಧ್ಯಕ್ಷ ಉಮೇಶ್ ಟಿ. ಬಂಧು ಸ್ವ ಸಹಾಯ ಸಂಘದ ಒಕ್ಕೂಟದ ಅಧ್ಯಕ್ಷ ನಳಿನಿ ಎನ್, ಒಕ್ಕೂಟದ ಅಧ್ಯಕ್ಷರು, ಪದಾಧಿಕಾರಿಗಳು, ಸರ್ವ ಸದಸ್ಯರು ಭಾಗವಹಿಸಿದ್ದರು.

ಮೂರ್ನಾಡುವಿನಲ್ಲಿ ಪ್ರಾಥಮಿಕ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ

ಜ.1ರಿಂದ ಜಿಲ್ಲಾ ಮಟ್ಟದ ಹಾಕಿ ಪಂದ್ಯಾವಳಿ

ಮಡಿಕೇರಿ, ಡಿ.24–ಕೊಡವ ಕುಟುಂಬಗಳ ನಡುವಿನ ಕೌಟುಂಬಿಕ ಚೇನಂಡ ಕಪ್ ಹಾಕಿ ಉತ್ಸವದ ಅಂಗವಾಗಿ ಜ.1ರಿಂದ 4ರವರೆಗೆ ಮೂರ್ನಾಡುವಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ಜಿಲ್ಲಾ ಮಟ್ಟದ ಹಾಕಿ ಪಂದ್ಯಾವಳಿ ನಡೆಯಲಿದೆ.



ಚೇನಂಡ ಕಪ್ ಹಾಕಿ ಉತ್ಸವದ ಆಯೋಜನಾ ಸಮಿತಿ ಅಧ್ಯಕ್ಷ ಚೇನಂಡ ಕಂಬಣಿ ಕರುಂಬಯ್ಯ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೂರ್ನಾಡು ಪ್ರಥಮ ದರ್ಜೆ ಕಾಲೇಜು ಮೈದಾನದಲ್ಲಿ 4ರಿಂದ 7ನೇ ತರಗತಿವರೆಗಿನ ಪ್ರಾಥಮಿಕ ವಿಭಾಗ ಮತ್ತು 8ರಿಂದ 10ನೇ ತರಗತಿವರೆಗಿನ ಪ್ರೌಢಶಾಲಾ ವಿಭಾಗದ ಬಾಲಕ ಬಾಲಕಿಯರಿಗಾಗಿ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ. ಈ ಪಂದ್ಯಾವಳಿ ಯಾವುದೇ ಒಂದು ಸಮೂಹಕ್ಕೆ ಸೀಮಿತ ವಾಗದೆ ಎಲ್ಲರಿಗೂ ಮುಕ್ತವಾಗಿರುತ್ತದೆ ಎಂದು ಚೇನಂಡ ಕಪ್ ಹಾಕಿ ಉತ್ಸವದ ಆಯೋಜನಾ ಸಮಿತಿ ಅಧ್ಯಕ್ಷ ಚೇನಂಡ ಕಂಬಣಿ ಕರುಂಬಯ್ಯ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ಪಂದ್ಯಾವಳಿಗೆ ಕೊಡಗಿನ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪ್ರಮುಖರು ತಮ್ಮ ಶಾಲೆಯ ಹಾಕಿ ತಂಡಗಳನ್ನು ಕಳುಹಿಸಿ ಕೊಡುವಂತೆ ಮನವಿ ಮಾಡಿದ ಕರುಂಬಯ್ಯ, ಯಾವುದೇ ಶಾಲೆ ಯಲ್ಲಿ ಎರಡು ಮೂರು ಹಾಕಿ ಆಟಗಾರರಿದ್ದು, ಪೂರ್ಣ ತಂಡ ಇಲ್ಲವಾದಲ್ಲಿ ಅಂತಹ ಆಟಗಾರರಿಗೂ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲು ಅವಕಾಶವನ್ನು ಒದಗಿಸಲಾಗಿದ್ದು, ಸದುಪಯೋಗ ಮಾಡಿಕೊಳ್ಳುವಂತೆ ಮನವಿ ಮಾಡಿದರು.

ಪಂದ್ಯಾವಳಿ ವಿಜೇತರಿಗೆ ಮತ್ತು ರನ್ನರ್ಸ್ ಅಪ್ ತಂಡಕ್ಕೆ ಆಕರ್ಷಕ ಬಹುಮಾನ ಮತ್ತು ಹಾಕಿ ಕೂರ್ಗ್ ವತಿಯಿಂದ ಪ್ರಶಸ್ತಿ ಪತ್ರವನ್ನು ವಿತರಿಸಲಾಗುತ್ತದೆ. ಶಾಲಾ ಮಕ್ಕಳ ಜಿಲ್ಲಾ ಮಟ್ಟದ ಹಾಕಿ ಪಂದ್ಯಾವಳಿಯಲ್ಲಿ ನೋಂದಾಯಿಸಿಕೊಳ್ಳಲು ಡಿ.28 ಕೊನೆಯ ದಿನವಾಗಿದೆ. ಈ ಅವಧಿಯ ಒಳಗಾಗಿ ಹರ್ಷ ಅಯ್ಯಣ್ಣ ಮೊ. 8762349951, ದೀನಾ ಚಂಗಪ್ಪ ಮೊ.9481114095, ವಿಪಿನ್ ಗಣಪತಿ ಮೊ. 9035198434 ಅವರನ್ನು ಸಂಪರ್ಕಿಸ ಬೇಕೆಂದು ತಿಳಿಸಿದರು.

ಪ್ರತಿಭಾವಂತ ಆಟಗಾರರ ಆಯ್ಕೆ: ಶಾಲಾ ಮಕ್ಕಳ ಈ ಪಂದ್ಯಾವಳಿಯಲ್ಲಿ ಪ್ರತಿಭಾವಂತ 30 ಹಾಕಿ ಆಟಗಾರರನ್ನು ಅಂತರರಾಷ್ಟ್ರೀಯ ಮಟ್ಟದ ನಿವೃತ್ತ ಒಲಂಪಿಯನ್‌ಗಳು ಆಯ್ಕೆ ಮಾಡಲಿದ್ದಾರೆ. ಆಯ್ಕೆಯಾದ ಆಟಗಾರರಿಗೆ ಏ.5ರಿಂದ ಮೇ.2ರವರೆಗೆ ನಾಪೋಕ್ಲುವಿನಲ್ಲಿ ನಡೆಯಲಿರುವ ಚೇನಂಡ ಕಪ್ ಹಾಕಿ ಉತ್ಸವದ ಸಂದರ್ಭ ಉಚಿತವಾಗಿ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿಯ ಅವಧಿಯಲ್ಲಿ ಅಂತಿಮವಾಗಿ ಆಯ್ಕೆಯಾಗುವ 12 ಮಂದಿ ಆಟಗಾರರಿಗೆ ಕ್ರೀಡಾಕಿಟ್‌ಗಳನ್ನು ಒದಗಿಸಲಾಗುತ್ತದೆ. ಮಾತ್ರವಲ್ಲದೆ ಅವರಿಗೆ ಕ್ರೀಡಾ ವಸತಿ ಶಾಲೆಯ ಪ್ರವೇಶಕ್ಕೆ ನೆರವಾಗುವುದರೊಂದಿಗೆ ಅವರನ್ನು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುವಾಗಿ ರೂಪಿಸಲು ಅಗತ್ಯ ಬೆಂಬಲವನ್ನು ನೀಡಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಆಯೋಜನಾ ಸಮಿತಿಯ ಕಾರ್ಯದರ್ಶಿ ಚೇನಂಡ ಮಧು ಮಾದಯ್ಯ, ವಕ್ತಾರ ಚೇನಂಡ ಸುರೇಶ್ ನಾಣಯ್ಯ, ನಿರ್ದೇಶಕರಾದ ಚೇನಂಡ ನಂದಾ ಜಗದೀಶ್, ಚೇನಂಡ ಸಂಪತ್ ಭೀಮಯ್ಯ ಉಪಸ್ಥಿತರಿದ್ದರು.

ಕಾಳಸಂತೆಯಲ್ಲಿ ಅನ್ನಭಾಗ್ಯ ಅಕ್ಕಿ ಮಾರಾಟ ವಿರುದ್ಧ ಅಗತ್ಯ ಕ್ರಮಕ್ಕೆ ಆಗ್ರಹ

ಮಡಿಕೇರಿ: ಕಾಳಸಂತೆಯಲ್ಲಿ ಅನ್ನಭಾಗ್ಯ ಯೋಜನೆಯ ಅಕ್ಕಿ ಮಾರಾಟವಾಗುವುದನ್ನು ತಡೆಯಲು ಅಗತ್ಯ ಕ್ರಮ ಕೈಗೊಳ್ಳುವಂತೆ ಪೊನ್ನಂಪೇಟೆ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಶಾಂತ್ ಸೂಚನೆ ನೀಡಿದ್ದಾರೆ.

ವಿರಾಜಪೇಟೆ ತಾಪಂ ಸಾಮರ್ಥ್ಯ ಸೌಧದಲ್ಲಿ ನಡೆದ ಪೊನ್ನಂಪೇಟೆ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಬಡವರ ಹಸಿವು ನೀಗಿಸುವುದಕ್ಕಾಗಿ ಅನ್ನಭಾಗ್ಯ ಯೋಜನೆಯ ಮೂಲಕ ಅಕ್ಕಿಯನ್ನು ವಿತರಿಸಲಾಗುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಅಕ್ಕಿ ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವ ಆರೋಪಗಳಿವೆ. ನ್ಯಾಯಬೆಲೆ ಅಂಗಡಿಗಳಲ್ಲಿ ತಕ್ಷಣ ಸೂಚನಾ ಫಲಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಬೇಕು ಎಂದರು.

ಸರಕಾರದ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ಮನದಟ್ಟು ಮಾಡಿಕೊಡುವ ನಿಟ್ಟಿನಲ್ಲಿ ಮಾ. ತಿಂಗಳಿನಲ್ಲಿ ಜಾಗೃತಿ ಅಭಿಯಾನವನ್ನು ಹಮ್ಮಿಕೊಳ್ಳಲು ಸಭೆ ನಿರ್ಧರಿಸಿತು.

ತಾಲೂಕಿನಲ್ಲಿ ಶೇ.99.26ರಷ್ಟು ಮಂದಿ ಗೃಹ ಜ್ಯೋತಿ ಯೋಜನೆಯನ್ನು ಸದುಪಯೋಗಪಡಿಸಿಕೊಂಡಿದ್ದಾರೆ. ವರ್ಷದ ಅಂತ್ಯದೊಳಗೆ ಎಲ್ಲಾ ವಿದ್ಯುತ್ ಸಂಬಂಧಿತ ಕಾಮಗಾರಿಗಳು ಪೂರ್ಣಗೊಳಿಸಲು ಕ್ರಮವಹಿಸಿ ಎಂದು ಚೆಸ್ಕಾಂ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಗೃಹಲಕ್ಷ್ಮಿ ಹಣ ಆಗಸ್ಟ್‌ವರೆಗೆ ಮಾತ್ರ ಜನರ ಖಾತೆಗೆ ಜಮೆಯಾಗಿರುತ್ತದೆ, ಬಾಕಿ ಇರುವ ಹಣವು ಮುಂದಿನ ದಿನಗಳಲ್ಲಿ ಜಮೆಯಾಗುತ್ತದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಯುವನಿಧಿ ಯೋಜನೆಯಡಿ ತಾಲೂಕಿನ ವ್ಯಾಪ್ತಿಯಲ್ಲಿ ಉದ್ಯೋಗ ಮೇಳವನ್ನು ಕೈಗೊಳ್ಳಲು ಕ್ರಮವಹಿಸಿ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡಲು ಶ್ರಮಿಸಿ ಎಂದು ಉದ್ಯೋಗ ವಿನಿಮಯ ಅಧಿಕಾರಿಗಳಿಗೆ ಆದೇಶಿಸಿದರು.

ವಿರಾಜಪೇಟೆ ತಾಪಂ ಇಓ ಕೆ.ಸಿ.ಅಪ್ಪಣ್ಣ, ಯೋಜನೆಯ ಸದಸ್ಯರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಪಟ್ಟಣದ ರಸ್ತೆಗಳ ಅಭಿವೃದ್ಧಿಗೆ ಕ್ರಮ: ಪೊನ್ನಣ್ಣ



ನೂತನ ಕಾಂಕ್ರೀಟ್ ರಸ್ತೆಯನ್ನು ಶಾಸಕ ಎ.ಎಸ್.ಪೊನ್ನಣ್ಣ ರಿಬ್ಬನ್ ಕತ್ತರಿಸಿ ಉದ್ಘಾಟಿಸಿದರು

ವಿರಾಜಪೇಟೆ, ಡಿ.24–ಪುರಸಭೆ ವ್ಯಾಪ್ತಿಯ ಕೆಲ ರಸ್ತೆ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈಗ ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಮುಗಿದ ಕೂಡಲೆ ಪಟ್ಟಣದ ಎಲ್ಲಾ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗುವುದು ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ನಗರದ ಗೌರಿಕೆರೆ ಬಳಿಯ ರಸ್ತೆ ಕಾಮಗಾರಿ 8 ಲಕ್ಷ ರೂ. ಅನುದಾನದಲ್ಲಿ ನಡೆದ ನೂತನ ಕಾಂಕ್ರೀಟ್ ರಸ್ತೆಯನ್ನು ರಿಬ್ಬನ್ ಕತ್ತರಿಸಿ ಉದ್ಘಾಟಿಸಿದ ಶಾಸಕ ಪೊನ್ನಣ್ಣ ಮಾತನಾಡಿ, ಮಳೆಯಿಂದಾಗಿ ಕಾಮಗಾರಿ ತಡವಾಗಿದ್ದು ಕೆಲ ವರ್ಷಗಳಿಂದ ಈ ರಸ್ತೆ ದುಸ್ಥಿತಿಯಲ್ಲಿದ್ದು, ಪಟ್ಟಣದಲ್ಲಿ ಕಿರಿದಾದ ರಸ್ತೆಯಲ್ಲಿ ದಿನ ದಿನಕ್ಕೆ ವಾಹನಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಮುಖ್ಯ ರಸ್ತೆ ಸೇರಿದಂತೆ ಎಲ್ಲಾ ರಸ್ತೆಗಳ ಅಭಿವೃದ್ಧಿ ಕಾಮಗಾರಿ ನಡೆಸಲಾಗುವುದು. ರಸ್ತೆಬದಿಯಲ್ಲಿರುವವರು ಜಾಗಬಿಟ್ಟು ಕೊಡುವ ಮೂಲಕ ಸಹಕಾರ ನೀಡುವಂತಾಗಬೇಕು ಎಂದರು.

ಪುರಸಭೆ ಸ್ಥಳಿಯ ವಾರ್ಡ್ ಮಾಜಿ ಸದಸ್ಯ ಸಿ.ಕೆ.ಪೃಥ್ವಿನಾಥ್ ಮಾತನಾಡಿ, ಖಾಸಗಿ ಬಸ್ ನಿಲ್ದಾಣದಿಂದ ಸಾರ್ವಜನಿಕ ಆಸ್ಪತ್ರೆಗೆ ಹಾಗೂ ಕೋರ್ಟ್ ಮತ್ತು ತಾಲೂಕು ಕಛೇರಿಗೆ ತೆರಳಲು ಹತ್ತಿರವಾಗಿರುವ ಈ ರಸ್ತೆಯ ಕಾಮಗಾರಿಯನ್ನು ಉತ್ತಮವಾಗಿ ಮಾಡಿರುವುದಕ್ಕೆ ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದರು.

ಪುರಸಭೆ ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ, ಕೊಡವ ಸಮಾಜದ ಉಪಾಧ್ಯಕ್ಷ ಕಣತಂಡ ಜಗದೀಶ್, ಹಿರಿಯರಾದ ಎಂ.ಎಸ್.ಪೂವಯ್ಯ, ಪುರಸಭೆ ಮಾಜಿ ಸದಸ್ಯ ರಜನಿಕಾಂತ್, ಜಲೀಲ್, ಡಿ.ಪಿ.ರಾಜೇಶ್, ಎಸ್.ಎಚ್.ಮತೀನ್, ಮಹ್ಮದ್ ರಾಫಿ, ಶೀಬಾ ಪೃಥ್ವಿನಾಥ್ ಉಪಸ್ಥಿತರಿದ್ದರು.

ವಸತಿ ನಿಗಮದ ಅಧಿಕಾರಿ ಮನೆ, ಎಸ್ಟೇಟ್ ಮೇಲೆ ಲೋಕಾಯುಕ್ತ ದಾಳಿ

ಮಡಿಕೇರಿ,ಡಿ.24–ರಾಜ್ಯ ವಸತಿ ನಿಗಮದ ಅಧಿಕಾರಿಯಾಗಿರುವ ಸರ್ದಾರ್ ಸರ್ಫರಾಜ್ ಖಾನ್‌ಗೆ ಸೇರಿದ ಕಾಫಿ ಎಸ್ಟೇಟ್ ಮತ್ತು ಫಾರ್ಮ್ ಹೌಸ್‌ನಲ್ಲಿ ಲೋಕಾಯುಕ್ತ ಅಧಿಕಾರಿಗಳು ಪರಿಶೀಲನೆ ನಡೆಸಿದರು.



ಲೋಕಾಯುಕ್ತ ದಾಳಿಗೊಳಗಾದ ವಸತಿ ನಿಗಮದ ಅಧಿಕಾರಿಯ ಫಾರ್ಮ್ ಹೌಸ್

ಬೆಳಿಗ್ಗೆ ತಾಲೂಕಿನ ಗಾಳಿಬೀಡು ಗ್ರಾಪಂ. ವ್ಯಾಪ್ತಿಯ ವಣಚಲ ಗ್ರಾಮದಲ್ಲಿರುವ ಫಾರ್ಮ್ ಹೌಸ್ ಹಾಗೂ ಕಾಟಕೇರಿ ಗ್ರಾಮದಲ್ಲಿ ಇರುವ ಕಾಫಿ ಎಸ್ಟೇಟ್‌ಗೆ ಬೆಂಗಳೂರಿನ ಲೋಕಾಯುಕ್ತ ಅಧಿಕಾರಿಗಳ ತಂಡ ಆಗಮಿಸಿ ಪರಿಶೀಲಿಸಿದ್ದಾರೆ. ಕಟ್ಟಡ ಕಾಮಗಾರಿಗಳ ಬಗ್ಗೆ ಫಾರ್ಮ್ ಹೌಸ್ ನಿರ್ಮಾಣದ ಕುರಿತು ಕಟ್ಟಡ ನಿರ್ಮಾಣ ಕಾಮಗಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರ ಬಳಿ ಮಾಹಿತಿ ಕಲೆ ಹಾಕಿದ್ದಾರೆ ಎನ್ನಲಾಗಿದೆ. ಸರ್ದಾರ್ ಸರ್ಫರಾಜ್ ಖಾನ್ ವಸತಿ ನಿಗಮಕ್ಕೆ ನಿಯೋಜನೆಗೊಂಡಿರುವ ಅಧಿಕಾರಿಯಾಗಿದ್ದು, ಅವರ ವಿರುದ್ಧ ಅಕ್ರಮ ಆಸ್ತಿ ಗಳಿಕೆಯ ಕುರಿತು ಪ್ರಕರಣ ದಾಖಲಾಗಿದ್ದ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ದಾಳಿಯನ್ನು ನಡೆಸಿದ್ದಾರೆ ಎನ್ನಲಾಗಿದೆ.

ರಸಪ್ರಶ್ನೆ ಸ್ಪರ್ಧೆ : ಮಾನಸ ತಂಡ ಪ್ರಥಮ



ಕುಶಾಲನಗರ, ಡಿ.24(ಆರ್‌ಹೆಚ್)–ಮರಗೋಡು ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧಾ ಕಾರ್ಯ ಕ್ರಮದಲ್ಲಿ ಕೂಡಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಯರ ತಂಡ ಪ್ರಥಮ ಸ್ಥಾನಗಳಿಸಿದೆ.

ಕೂಡಿಗೆ ಪಿಯು ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿ ಪಿ.ಜಿ. ಮಾನಸ ಹಾಗೂ ಪ್ರಥಮ ಪಿಯುಸಿ ವಿದ್ಯಾರ್ಥಿ ಎಂ.ಆರ್.ಮಾನಸ ತಂಡ ಪ್ರಥಮ ಸ್ಥಾನಗಳಿಸಿ ರೂ.10 ಸಾವಿರ ನಗದು ಹಾಗೂ ಪಾರಿತೋಷಕವನ್ನು ಪಡೆದಿದ್ದಾರೆ. ವಿಜೇತ ವಿದ್ಯಾರ್ಥಿಗಳನ್ನು ಕಾಲೇಜಿನ ಪ್ರಾಂಶುಪಾಲ ಹಂಡ್ರಂಗಿ ನಾಗರಾಜ್ ಅಭಿನಂದಿಸಿದ್ದಾರೆ. ತಂಡದ ವ್ಯವಸ್ಥಾಪಕರಾಗಿ ಕನ್ನಡ ಉಪನ್ಯಾಸಕ ರವೀಶ್ ಕಾರ್ಯನಿರ್ವಹಿಸಿದರು. ಉಪನ್ಯಾಸಕ ನಾಗಪ್ಪ ಎಲ್ಕಿಕಟ್ಟೆ ಉಪಸ್ಥಿತರಿದ್ದರು.

ಲಾರಿಗಳ ನಿಲುಗಡೆಗೆ ಟ್ರಕ್ ಟರ್ಮಿನಲ್ ನಿರ್ಮಾಣ

ಚಾಲಕರಿಗೆ ಮೂಲ ಸೌಲಭ್ಯದ ವ್ಯವಸ್ಥೆ: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭರವಸೆ

ಗುಂಡ್ಲುಪೇಟೆ, ಡಿ.24– ಸರಕು ಸಾಗಾಣಿಕೆಯಲ್ಲಿ ಪ್ರಮುಖವಾಗಿರುವ ಲಾರಿಗಳ ನಿಲುಗಡೆಗೆ ಸರ್ಕಾರ ಟ್ರಕ್ ಟರ್ಮಿನಲ್ ನಿರ್ಮಿಸಿ ಚಾಲಕರಿಗೆ ಮೂಲ ಸೌಲಭ್ಯ ಕಲ್ಪಿಸುತ್ತಿದೆ ಎಂದು ಸಾರಿಗೆ ಸಚಿವ ರಾಮ ಲಿಂಗಾರೆಡ್ಡಿ ತಿಳಿಸಿದರು.

ಪಟ್ಟಣದ ಹೊರವಲಯದ ಚಾಮರಾಜ ನಗರ ರಸ್ತೆಯ ಕಲ್ಯಾಣಿ ಕೊಳದ ಸಮೀಪ ನಿರ್ಮಿಸಿರುವ ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ಪ್ರದೇಶವನ್ನು ವೀಕ್ಷಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಸಾವಿರಾರು ಟ್ರಕ್‌ಗಳಿದ್ದು, ಇವುಗಳ ನಿಲುಗಡೆಗೆ ಸ್ಥಳಾವಕಾಶದ ಕೊರತೆ ಇದೆ. ಅತೀ ಹೆಚ್ಚಿನ ಸಂಚಾರ ದಟ್ಟಣೆ ಇರುವ ಬೆಂಗಳೂರು ಭಾಗದಲ್ಲಿ ಹಗಲಿನ ವೇಳೆ ಟ್ರಕ್‌ಗಳು ಓಡಾಡಲು ಅವಕಾಶವಿಲ್ಲ. ಆದ್ದರಿಂದ ಡಿ.ದೇವರಾಜ ಅರಸು ಕಾಲದಲ್ಲಿ ಟ್ರಕ್ ಟರ್ಮಿನಲ್ ಆರಂಭಿಸಿದ್ದರಿಂದ ಚಾಲಕರಿಗೆ ಅನುಕೂಲವಾಗಿದೆ. ಈ ಭಾಗದಲ್ಲಿ ಟ್ರಕ್ ಟರ್ಮಿನಲ್ ನಿರ್ಮಿಸಲು ಶಾಸಕ ಗಣೇಶ್ ಪ್ರಸಾದ್ ಕಾರಣರಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಟ್ರಕ್ ಟರ್ಮಿನಲ್ ಪ್ರವೇಶವನ್ನು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಉದ್ಘಾಟಿಸಿದರು.

ಸದ್ಯ ಟರ್ಮಿನಲ್‌ನಲ್ಲಿ ಉಚಿತವಾಗಿ ಲಾರಿ ನಿಲುಗಡೆಗೆ ಅವಕಾಶ ಕಲ್ಪಿಸಲಾಗುವುದು. ಕಾಂಕ್ರೀಟ್ ರಸ್ತೆ ಮತ್ತು ಮೂಲ ಸೌಕರ್ಯ ಕಲ್ಪಿಸಿದ ನಂತರ ಅದಕ್ಕೆ ಶುಲ್ಕ ಪಾವತಿ ವ್ಯವಸ್ಥೆ ಮಾಡಲಾಗುತ್ತದೆ. ಮೈಸೂರು, ಹುಬ್ಬಳ್ಳಿ, ಧಾರವಾಡ, ದಾಂಡೇಲಿ ಮುಂತಾದ ಕಡೆಯಲ್ಲೂ ಟ್ರಕ್ ಟರ್ಮಿನಲ್ ಇದ್ದು ಕೆಲವು ಕಡೆ ಒತ್ತುವರಿಯಾಗಿದೆ. ಆದ್ದರಿಂದ ಮೊದಲು ಸುತ್ತುಗೋಡೆ ನಿರ್ಮಿಸಿ ಒತ್ತುವರಿ ತಡೆಗಟ್ಟಲಾಗುವುದು. ಮುಂದಿನ ವರ್ಷ ಉದ್ಘಾಟಿಸಲಾಗುವುದು. ಸಾರಿಗೆ ಬಸ್‌ಗಳ ಕೊರತೆಯಿಂದ ನಾನಾ ತೊಂದರೆಯಾಗುತ್ತಿದೆ. ಬೆಂಗಳೂರು ಮೈಸೂರುಗಳಿಗೆ ಬ್ಯಾಟರಿ ಚಾಲಿತ ಬಸ್‌ಗಳನ್ನು ನೀಡಲಾಗುತ್ತಿದೆ. ಆದ್ದರಿಂದ ಮುಂದಿನ ಬಾರಿ ಗುಂಡ್ಲುಪೇಟೆಗೆ ಹೆಚ್ಚಿನ ಹೊಸ ಬಸ್‌ಗಳನ್ನು ನೀಡಲಾಗುವುದು ಎಂದು ಭರವಸೆ ನೀಡಿದರು.

> ನಿರ್ಮಾಣ ಹಂತದ ಟ್ರಕ್ ಟರ್ಮಿನಲ್ ವೀಕ್ಷಣೆಗೆ ಖುದ್ದಾಗಿ ಸಾರಿಗೆ ಸಚಿವರೇ ಆಗಮಿಸಿದ್ದಾರೆ. ಈ ಭಾಗದಲ್ಲಿ 13.6 ಎಕರೆ ಜಾಗದಲ್ಲಿ ಟ್ರಕ್ ಟರ್ಮಿನಲ್ ಅನ್ನು ನಿರ್ಮಾಣ ಮಾಡಲಾಗುತ್ತಿದೆ. ರಸ್ತೆ, ಕುಡಿಯುವ ನೀರು, ಡಾರ್ಮೆಟರಿ ಮುಂತಾದ ಮೂಲ ಸೌಕರ್ಯಗಳನ್ನು ಕಲ್ಪಿಸಿದ ನಂತರ ಮುಂದಿನ ದಿನಗಳಲ್ಲಿ ಟ್ರಕ್ ಲಾರಿ ಚಾಲಕರಿಗೆ ಹೆಚ್ಚಿನ ಉಪಯೋಗವಾಗಲಿದೆ.
> –ಹೆಚ್.ಎಂ.ಗಣೇಶ್ ಪ್ರಸಾದ್, ಶಾಸಕ.

ಟ್ರಕ್ ಟರ್ಮಿನಲ್ ಅಧ್ಯಕ್ಷ ಸಯ್ಯದ್ ಅಹಮ್ಮದ್, ಎಂ.ಡಿ.ಶಿವಪ್ರಸಾದ್, ಹೆಚ್.ಎಸ್. ನಂಜುಂಡ ಪ್ರಸಾದ್, ಜಿಪಂ ಮಾಜಿ ಉಪಾಧ್ಯಕ್ಷ ಕೆ.ಎಸ್. ಮಹೇಶ್, ಟಿಎಪಿಸಿ ಎಂಎಸ್ ಅಧ್ಯಕ್ಷ ಮಡಿವಾಳಪ್ಪ ಹಲವರಿದ್ದರು.

ಹುಲಿಗಳ ಸೆರೆಗೆ ಚುರುಕುಗೊಂಡ ಕಾರ್ಯಾಚರಣೆ

● ವಿಶೇಷ ಬೋನ್‌ಗಳ ಅಳವಡಿಕೆ ● ಮತ್ತೆರಡು ಆನೆಗಳ ಬಳಕೆ

ಚಾಮರಾಜನಗರ, ಡಿ.24– ತಾಲೂಕಿನ ನಂಜೇದೇವನಪುರ ಸುತ್ತಮುತ್ತ ಬೀಡು ಬಿಟ್ಟಿರುವ 5 ಹುಲಿಗಳ ಸೆರೆಗೆ ಅರಣ್ಯ ಇಲಾಖೆ ನಡೆಸುತ್ತಿರುವ ಕಾರ್ಯಾಚರಣೆ ಚುರುಕುಗೊಳಿಸಲಾಗಿದೆ.

ಯಾವುದೇ ಜೀವ ಹಾನಿಯಾಗದಂತೆ ಹುಲಿಗಳನ್ನು ಸುರಕ್ಷಿತವಾಗಿ ಸೆರೆ ಹಿಡಿಯಲು ಅರಣ್ಯ ಇಲಾಖೆ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡುತ್ತಿದ್ದಂತೆಯೇ ಹುಲಿ ಸೆರೆ ಕಾರ್ಯಾಚರಣೆ ಚುರುಕುಗೊಂಡಿದೆ.

ವಿಶೇಷ ಬೋನ್‌ಗಳ ಅಳವಡಿಕೆ: ಆಯಕಟ್ಟಿನ ಸ್ಥಳಗಳಲ್ಲಿ ಒಂದು ವಾಕ್ ಥ್ರೂ ಕೇಜ್, ಒಂದು ಬೃಹದಾಕಾರದ ತುಮಕೂರು ಕೇಜ್ ಹಾಗೂ ಒಂದು ಸಾಮಾನ್ಯ ಬೋನ್ ಅಳವಡಿಸಲಾಗಿದೆ. ವಾಕ್ ಥ್ರೂ ಕೇಜ್ ವಿಶಿಷ್ಟವಾಗಿದ್ದು, ಇದರ ಮಧ್ಯ ಭಾಗದಲ್ಲಿ ಯಾವುದೇ ಪ್ರಾಣಿ ನಡೆದು ಹೋದರೂ ಎರಡೂ ಕಡೆ ತಕ್ಷಣ ಲಾಕ್ ಆಗಲಿದ್ದು, ಆ ಪ್ರಾಣಿ ಸೆರೆಯಾಗಲಿದೆ. ಇನ್ನು ತುಮಕೂರು ಕೇಜ್ ಬೃಹದಾಕಾರವಾಗಿದ್ದು, ಇದು ಬೋನು ಎಂಬುದೇ ಗೊತ್ತಾಗದಂತಿದ್ದು, ಹುಲಿ ಇದರ ಒಳಹೊಕ್ಕರೆ ಜೀವ ಹಾನಿಯಾಗದಂತೆ ಸೆರೆಯಾಗಲಿದೆ.

ಮತ್ತೆರಡು ಆನೆಗಳ ಬಳಕೆ: ಹುಲಿ ಸೆರೆ ಕಾರ್ಯಾಚರಣೆಗೆ 100ಕ್ಕೂ ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಪ್ರಸ್ತುತ 2 ಸಾಕಾನೆಗಳ ಮೂಲಕ ಹುಲಿ ಶೋಧ ಕಾರ್ಯ ನಡೆಸಲಾಗುತ್ತಿದ್ದು, ನಾಳೆ ಬಂಡೀಪುರದ ರಾಮಾಪುರ ಶಿಬಿರದಿಂದ ಇನ್ನೂ ಎರಡು ಸಾಕಾನೆಗಳು ಬರಲಿದ್ದು, ಕಾರ್ಯಾಚರಣೆಯಲ್ಲಿ ಭಾಗವಹಿಸಲಿವೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.



ಹುಲಿಗಳ ಸೆರೆಗೆ ಅರಣ್ಯ ಇಲಾಖೆ ಸಿಬ್ಬಂದಿ ಬೋನ್ ಅಳವಡಿಸುತ್ತಿರುವುದು.

ಮೂರು ಡ್ರೋನ್ ತಂಡ: ಹುಲಿಗಳ ಸೆರೆಗೆ ಮೂರು ಡ್ರೋನ್ ತಂಡಗಳ ಮೂಲಕ ಬೇರೆ ಬೇರೆ ಕಡೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ರಾತ್ರಿ ವೇಳೆ ಥರ್ಮಲ್ ಡ್ರೋನ್ ಮೂಲಕ ಹುಲಿಗಳಿಗಾಗಿ ಶೋಧ ಕಾರ್ಯ ನಡೆಸಿ ಅವುಗಳ ಚಲನವಲನಗಳ ಬಗ್ಗೆ ತೀವ್ರ ನಿಗಾ ವಹಿಸಲಾಗುತ್ತಿದೆ.

ಹುಲಿಗಳು ಕಂಡ ಕೂಡಲೇ ಬೋನಿನ ಬಳಿ ಹೋಗುವಂತೆ ಮಾಡುವುದು. ಇಲ್ಲವೇ ಅವುಗಳು ಕಂಡ ಸ್ಥಳದಲ್ಲೇ ಅರವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿಯಲು ಯೋಜನೆ ರೂಪಿಸಲಾಗಿದ್ದು, ಅರಣ್ಯಾಧಿಕಾರಿಗಳು ಇನ್ನು 3 ದಿನಗಳ ಒಳಗೆ ಹುಲಿಗಳನ್ನು ಸುರಕ್ಷಿತವಾಗಿ ಸೆರೆ ಹಿಡಿದು ಸ್ಥಳಾಂತರ ಮಾಡುವ ವಿಶ್ವಾಸ ಹೊಂದಿದ್ದಾರೆ.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿ ಪೂಜೆ ನೆರವೇರಿಸಿದರು.

ಚಾಮರಾಜನಗರ, ಡಿ.24– ತಾಲೂಕಿನ ಕಾಡಂಚಿನ ಗ್ರಾಮ ಪುಣಜನೂರು ಗ್ರಾಪಂ ವ್ಯಾಪ್ತಿಯ ಚಿಕ್ಕಮೂಡಳ್ಳಿ ಗ್ರಾಮದಲ್ಲಿ ಕಾಡಾ ಅನುದಾನದ 21.50 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಬುಧವಾರ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಶಾಸಕರು, ರಸ್ತೆಗಳು ಗ್ರಾಮಾಭಿವೃದ್ಧಿಯ ಸಂಕೇತವಾಗಿದ್ದು, ಕ್ಷೇತ್ರದಲ್ಲಿ ಇದುವರೆಗೆ ಜನರಿಗೆ ಬೇಕಾದ ಕುಡಿಯುವ ನೀರು, ವಸತಿ, ವಿದ್ಯುತ್, ರಸ್ತೆ, ಚರಂಡಿ ನಿರ್ಮಾಣ, ಕೃಷಿ ಚಟುವಟಿಕೆ ಸಂಬಂಧ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಸುವುದಕ್ಕೆ ನಿಗಮಗಳಿಂದ ಸಾಲ ಸೌಲಭ್ಯ ಒದಗಿಸಲಾಗಿದೆ. ಕ್ಷೇತ್ರದ ಜನರು ಸರ್ಕಾರದಿಂದ ಸಿಗುವ ಸವಲತ್ತು ಪಡೆದು, ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಮುಖ್ಯರಸ್ತೆಯಿಂದ ಚಿಕ್ಕಮೂಡಳ್ಳಿಗೆ ತೆರಳುವ ಸಂಪರ್ಕ ರಸ್ತೆ ನಿರ್ಮಿಸಿ ಕೊಡಬೇಕು ಎಂದು ಗ್ರಾಮಸ್ಥರು ಶಾಸಕರಿಗೆ ಮನವಿ ಮಾಡಿದರು. ದೊಡ್ಡಮೂಡಳ್ಳಿಯಲ್ಲಿ ನೂತನವಾಗಿ ನಿರ್ಮಿಸಿರುವ ಶಾಲಾ ಕೊಠಡಿ, ಕುಡಿಯುವ ನೀರಿನ ವ್ಯವಸ್ಥೆಯನ್ನು ಶಾಸಕರು ಪರಿಶೀಲಿಸಿದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಗ್ರಾಪಂ ಉಪಾಧ್ಯಕ್ಷ ರಾಚಪ್ಪ, ಪಿಎಸಿಎಸ್ ಅಧ್ಯಕ್ಷ ಮಣಿನಾಯಕ, ತಾಪಂ ಮಾಜಿ ಸದಸ್ಯ ಪಿ.ಕುಮಾರ ನಾಯಕ, ಶಂಕರ್, ಜಡೆಯಪ್ಪ, ಲಿಂಗಪ್ಪ, ಮಹದೇವಸ್ವಾಮಿ, ಚನ್ನಬಸವಯ್ಯ, ನಾಗರಾಜು, ನಂಜುಂಡಿ, ನಾಗಪ್ಪ, ಮಹೇಂದ್ರ, ಉಲ್ಲೇಶ ನಾಯಕ, ಬಂಗಾರು, ಎಇಇ ಗಣೇಶ್, ಗುತ್ತಿಗೆದಾರ ಗೋವಿಂದರಾಜು ಇತರರಿದ್ದರು.

ಉಡಿಗಾಲದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಚಾಮರಾಜನಗರ: ತಾಲೂಕಿನ ಉಡಿಗಾಲದಲ್ಲಿ ಎಸ್‌ಪಿಕೆ ಗ್ರೂಪ್, ಅಭಿಮಾನಿ ಬಳಗದಿಂದ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿಯಾಗಿ ನಡೆಯಿತು.

ಗ್ರಾಮದ ಸರ್ಕಾರಿ ಪ್ರಾಥಮಿಕ ಆಸ್ಪತ್ರೆ ಮುಂಭಾಗ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ತಾವೇ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಮರಿಯಾಲ ಮಹಾಸಂಸ್ಥಾನ ಮಠದ ಶ್ರೀ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮದಲ್ಲಿ ಎಸ್‌ಪಿಕೆ ಗ್ರೂಪ್, ಅಭಿಮಾನಿ ಬಳಗದಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿರುವುದು ಶ್ಲಾಘನೀಯ.



ಕಾರ್ಯಕ್ರಮವನ್ನು ಶ್ರೀಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ಹೀಗಾಗಿ ಪ್ರತಿಯೊಬ್ಬರೂ ಶಿಬಿರದಲ್ಲಿ ಪಾಲ್ಗೊಂಡು ತಪಾಸಣೆಗೆ ಒಳಪಟ್ಟು ಆರೋಗ್ಯ ಕಾಪಾಡಿಕೊಳ್ಳಬೇಕು ಎಂದ ಅವರು ಮನುಷ್ಯ ಸಮಾಜಕ್ಕೆ ಉಪಯೋಗವಾಗುವ ನಿಟ್ಟಿನಲ್ಲಿ ಏನಾದರು ಕೊಡುಗೆ ನೀಡಬೇಕು. ಹೀಗಾಗಿ ಮನುಷ್ಯ ಧರ್ಮ ಕಾರ್ಯ, ಇಂತಹ ಸಾರ್ಥಕ ಕಾರ್ಯಕ್ರಮಗಳನ್ನು ಸದಾ ಮಾಡಿಕೊಂಡು ಹೋಗಬೇಕು ಎಂದರು.

ಚಾಮರಾಜನಗರದ ಶ್ರೀಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀಚನ್ನಬಸವಸ್ವಾಮೀಜಿ, ಉಡಿಗಾಲ ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀಪ್ರಸಾದ್ ಸ್ವಾಮೀಜಿ ಮಾತನಾಡಿದರು. ಶಿಬಿರದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಪಟ್ಟರು. 68 ಮಂದಿ ಕಣ್ಣಿನ ಶಸ್ತ್ರ ಚಿಕಿತ್ಸೆ, 26 ಮಂದಿ ಕಿವಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾದರು. 200ಕ್ಕೂ ಹೆಚ್ಚು ಮಂದಿ ಕಿಡ್ನಿ ತಪಾಸಣೆ ಮಾಡಿಸಿಕೊಂಡರು.

ಅಹಿಂದ ಯುವ ಘಟಕ ರಾಜ್ಯಾಧ್ಯಕ್ಷ ಮಹೇಶ್ ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಮಾಜಿ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಮುಖಂಡ ಆರ್.ಉಮೇಶ್, ಗ್ರಾಪಂ ಅಧ್ಯಕ್ಷೆ ರೇಖಾ, ಉಪಾಧ್ಯಕ್ಷೆ ಮಹದೇವಮ್ಮ, ಸದಸ್ಯರಾದ ಮಲ್ಲೇಶ್, ಬಸವರಾಜಪ್ಪ, ಮಾಜಿ ಸದಸ್ಯ ಮಹದೇವ್, ಚಂದ್ರಶೇಖರ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ನಿರ್ದೇಶಕ ಪುರುಷೋತ್ತಮ, ರೈತ ಮುಖಂಡರಾದ ಮಹದೇವಸ್ವಾಮಿ, ಯು.ಜಿ.ಮಾದಪ್ಪ ಪ್ರದೀಪ್, ಕಾಂಗ್ರೆಸ್ ಮುಖಂಡರಾದ ನಂಜಪ್ಪ, ಮಂಜು, ತಿರುಪತಿನಾಯಕ, ನಂಜಪ್ಪ, ರಾಘವೇಂದ್ರ ಹಾಜರಿದ್ದರು.

ಅರ್ಜಿ ಆಹ್ವಾನ

ಚಾಮರಾಜನಗರ: ಚಾಮರಾಜನಗರ ಜಿಲ್ಲೆ ಆಯುಷ್ ಇಲಾಖೆ ವ್ಯಾಪ್ತಿಯ ಚಾಮರಾಜನಗರದ ಸರ್ಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಖಾಲಿ ಇರುವ ಆಯುರ್ವೇದ ತಜ್ಞ ವೈದ್ಯರ ಒಂದು ಹುದ್ದೆಗೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.


ಪ.ಜಾತಿ, ಸಾಮಾನ್ಯ ವರ್ಗದ ಅಭ್ಯರ್ಥಿಗಳು ಆಯುರ್ವೇದದಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ನಗರದ ಜಿಲ್ಲಾಡಳಿತ ಭವನದ 3ನೇ ಮಹಡಿಯಲ್ಲಿರುವ ಜಿಲ್ಲಾ ಆಯುಷ್ ಕಚೇರಿ ಸಂಪರ್ಕಿಸಿ. ಅರ್ಜಿ ಸಲ್ಲಿಸಲು ಜ.6 ಕೊನೆ ದಿನ ಎಂದು ಪ್ರಕಟಣೆ ತಿಳಿಸಿದೆ.

ಕೊಳ್ಳೇಗಾಲ ಪತ್ರಕರ್ತರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

ಕೊಳ್ಳೇಗಾಲ, ಡಿ.24– ಇಲ್ಲಿನ ಪತ್ರಕರ್ತರ ಸಂಘಕ್ಕೆ ಅಧ್ಯಕ್ಷರು, ಉಪಾಧ್ಯಕ್ಷರೂ ಸೇರಿದಂತೆ ಪದಾಧಿಕಾರಿಗಳನ್ನು ಬುಧವಾರ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಚಿಕ್ಕಮಾಳಿಗೆ, ಪ್ರಧಾನ ಕಾರ್ಯದರ್ಶಿಯಾಗಿ ಎನ್.ನಟರಾಜು, ಉಪಾಧ್ಯಕ್ಷರಾಗಿ ವಸಂತ್ ಕುಮಾರ್, ಚಂದ್ರ ಮೋಹನ್, ಸಹ ಕಾರ್ಯದರ್ಶಿಗಳಾಗಿ ಆರ್.ಸಾಗರ್, ಗಿರೀಶ್ ಕುಮಾರ್, ಖಜಾಂಚಿ ಪ್ರೇಮ್ ಸಾಗರ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಎ.ಹೆಚ್.ಗೋವಿಂದ, ಎಸ್.ರಾಜು, ಡಿ.ಸಿದ್ದರಾಜು, ಬಸಂತ್ ಮೋಟಾಯ್, ಪಿ.ಲಿಂಗರಾಜು, ಎಂ.ಪಿ. ಮಹೇಶ್, ಅವಿನ್ ಪ್ರಕಾಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಮಂಜುನಾಥ್, ಸಹಾಯಕ ಚುನಾವಣಾಧಿಕಾರಿಯಾಗಿ ಮಹೇಂದ್ರ, ವಿಜಯ್ ಕಾರ್ಯ ನಿರ್ವಹಿಸಿದರು.

ಇದೇ ವೇಳೆ ನೂತನ ಪದಾಧಿಕಾರಿಗಳನ್ನು ಚಾಮರಾಜನಗರ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಸಿದ್ದಲಿಂಗಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್, ಮರಿಸ್ವಾಮಿ, ಮಲ್ಲಪ್ಪ, ಸುನೀಲ್, ನಿಶಾಂತ್, ಕುಮಾರ್, ಮಹೇಶ್, ರಾಜಶೇಖರ, ಡಿ.ನಟರಾಜು, ಜಗದೀಶ ಇನ್ನಿತರರು ಅಭಿನಂದಿಸಿದರು.



ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳನ್ನು ಅಭಿನಂದಿಸಲಾಯಿತು.

ಡಿ.27, ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಸಂತೇಮರಹಳ್ಳಿ ಉಪ ವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಡಿ.27ರಂದು ಬೆಳಗ್ಗೆ 10ರಿಂದ ಸಂಜೆ 5 ರವರೆಗೆ ಹಿರಿಕೆರೆ, ಕಾಳಿಕಾಂಬ ಕಾಲೋನಿ, ಚಂದಕವಾಡಿ, ಹೆಬ್ಬಸೂರು, ಕಾಗಲವಾಡಿ, ರೇಚಂಬಳ್ಳಿ, ಸರಗೂರು ಮೋಳೆ, ಅಯ್ಯನಪುರ, ಮಲ್ಲೇದೇವನಹಳ್ಳಿ, ನವೋದಯ, ಹೊಂಡರಬಾಳು, ನಾಗವಳ್ಳಿ, ಜ್ಯೋತಿಗೌಡನಪುರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ದ್ವೇಷ ಭಾಷಣ ಮಸೂದೆ ವಿರುದ್ಧ ಎನ್‌ಆರ್ ಕ್ಷೇತ್ರದ ಬಿಜೆಪಿ ಪ್ರತಿಭಟನೆ

ರಾಜ್ಯ ಸರ್ಕಾರದ ದುರಾಡಳಿತದ ವಿರುದ್ಧ ಮಾತನಾಡದಂತೆ ಬಾಯಿ ಮುಚ್ಚಿಸುವ ಹುನ್ನಾರ ; ಮಾಜಿ ಮೇಯರ್ ಸಂದೇಶಸ್ವಾಮಿ ಆಕ್ರೋಶ



ಮೈಸೂರಿನ ರಾಜೇಂದ್ರನಗರದ ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದ ಮಹಾದ್ವಾರದ ಬಳಿ ಎನ್‌ಆರ್ ಕ್ಷೇತ್ರದ ಬಿಜೆಪಿ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಡಿ.24(ಪಿಎಂ)– ರಾಜ್ಯ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಲು ಉದ್ದೇಶಿಸಿರುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ 2025 ಅನ್ನು ವಿರೋಧಿಸಿ ಎನ್‌ಆರ್ ಕ್ಷೇತ್ರದ ಬಿಜೆಪಿ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ರಾಜೇಂದ್ರನಗರದ ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದ ಮಹಾದ್ವಾರದ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯ ಕಾಂಗ್ರೆಸ್ ಸರ್ಕಾರವು ಈ ಮಸೂದೆ ಮೂಲಕ ನಾಗರಿಕರ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ ಕಸಿದುಕೊಳ್ಳಲು ಮುಂದಾಗಿದೆ. ಇದು ರಾಜ್ಯ ಸರ್ಕಾರದ ವಿರುದ್ಧ ಮಾತನಾಡುವವರನ್ನು ಬಾಯಿ ಮುಚ್ಚಿಸುವ ಹುನ್ನಾರವಾಗಿದೆ ಎಂದು ಆರೋಪಿಸಿದರು.

ಸದರಿ ಮಸೂದೆಗೆ ನೀಡಿರುವ ವ್ಯಾಖ್ಯಾನವೇ ಅಸ್ಪಷ್ಟವಾಗಿದೆ. ಸರ್ಕಾರದ ವಿರುದ್ಧ ಟೀಕೆ ಅಥವಾ ಸತ್ಯ ಹೇಳುವುದನ್ನೂ ಕೂಡ ದ್ವೇಷ ಎಂದು ಪರಿಗಣಿಸುವ ಅಪಾಯವಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಿದೆ. ಯಾವುದೇ ಕಾರಣಕ್ಕೂ ಇದು ಕಾಯ್ದೆಯಾಗಿ ಜಾರಿಗೊಳ್ಳಬಾರದು. ಕೂಡಲೇ ರಾಜ್ಯ ಸರ್ಕಾರ ಈ ಮಸೂದೆಯನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.

ಮಾಜಿ ಮೇಯರ್ ಹಾಗೂ ಬಿಜೆಪಿ ಮುಖಂಡ ಸಂದೇಶ್‌ಸ್ವಾಮಿ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರದ ದುರಾಡಳಿತದ ವಿರುದ್ಧ ಯಾರು ಮಾತನಾಡಬಾರದು ಎಂಬ ದುರುದ್ದೇಶ ಇದರಲ್ಲಿ ಅಡಗಿದ್ದು, ಒಂದು ವೇಳೆ ಪ್ರಶ್ನೆ ಮಾಡಿದರೆ ಈ ಕಾನೂನಿನ ದುರ್ಬಳಕೆ ಮೂಲಕ ಅಂತಹವರನ್ನು ಹತ್ತಿಕ್ಕುವ ಕುತಂತ್ರ ಇದು ಎಂದು ದೂರಿದರು.

ಈ ರೀತಿಯ ಮಸೂದೆ ಮೂಲಕ ರಾಜ್ಯದ ಜನತೆ ಹಾಗೂ ಪ್ರತಿಪಕ್ಷದವರನ್ನು ಹತ್ತಿಕ್ಕಲು ಸರ್ಕಾರ ಮುಂದಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ದೇಶಕ್ಕೆ ನೀಡಿರುವ ಶ್ರೇಷ್ಠ ಸಂವಿಧಾನದ ಆಶಯಕ್ಕೆ ಈ ಮಸೂದೆ ವಿರುದ್ಧವಾಗಿದೆ. ಪ್ರಧಾನಿ ಮೋದಿಯವರನ್ನು ದಿನ ಬೆಳಗಾದರೆ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವಹೇಳನ ಮಾಡುತ್ತಾರೆ. ರಾಜ್ಯದಲ್ಲಿ ದಿನನಿತ್ಯ ಸಚಿವ ಪ್ರಿಯಾಂಕ್ ಖರ್ಗೆ, ಆರ್‌ಎಸ್‌ಎಸ್ ವಿರುದ್ಧ ಟೀಕಾಪ್ರಹಾರ ನಡೆಸುತ್ತಿದ್ದಾರೆ. ಇವರನ್ನು ಜೈಲಿಗೆ ಕಳುಹಿಸಲು ಈ ಕಾಯ್ದೆ ಜಾರಿಗೆ ಹೊರಡಿಸಿದ್ದೀರಾ ಎಂದು ವ್ಯಂಗ್ಯವಾಡಿದರು.

ಈ ಮಸೂದೆ ವಿರುದ್ಧ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿಯೂ ಬಿಜೆಪಿ ಪ್ರತಿಭಟನೆ ಮಾಡುತ್ತಿದ್ದು, ಯಾವುದೇ ಕಾರಣಕ್ಕೂ ರಾಜ್ಯಪಾಲರು ಈ ಮಸೂದೆಗೆ ಅಂಕಿತ ಹಾಕಬಾರದು ಎಂದು ಮನವಿ ಮಾಡಿದರು.

ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಸಾತ್ವಿಕ್, ಬಿಜೆಪಿ ನಗರ ಉಪಾಧ್ಯಕ್ಷ ಸು.ಮುರುಳಿ, ಎನ್‌ಆರ್ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಎಸ್.ಮಂಜುನಾಥ್, ಪ್ರಧಾನ ಕಾರ್ಯದರ್ಶಿಗಳಾದ ಪದ್ಮನಾಭ, ಮಂಜು ಸಿ.ಗೌಡ, ಎನ್‌ಆರ್ ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಇಂದಿರಾ, ಪ್ರಧಾನ ಕಾರ್ಯದರ್ಶಿ ಕವಿತಾ ಸಿಂಗ್, ಮುಖಂಡರಾದ ಆನಂದ್, ಶ್ರೀನಿವಾಸ್, ಪುನೀತ್, ನಾರಾಯಣ್, ಜಗದೀಶ್, ಕಾರ್ತಿಕ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅಭಿನಂದನೆ



ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ. ಬಿ ದಿನೇಶ್ ಅವರ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ಜಯದೇವ ಆಸ್ಪತ್ರೆಯ ಸಿಬ್ಬಂದಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ರವಿ, ತೇಜು, ವರದರಾಜು, ಟಿ.ಪಿ. ಸಿದ್ದರಾಜು, ಎ.ಪಿ. ಕುಮಾರ ಸ್ವಾಮಿ, ಜಿ. ಮುರಾಜು ಇದ್ದರು.

ಸಂತೋಷ್ ಎಂ.ಸೋಸಲೆಗೆ ಪಿಎಚ್.ಡಿ




ಮೈಸೂರು: ಡಾ. ಎನ್.ಎಸ್. ರಾಜು ಅವರ ಮಾರ್ಗದರ್ಶನದಲ್ಲಿ ಸಂತೋಷ್ ಎಂ. ಸೋಸಲೆ ಅವರು ಪರಿಸರ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವಾಟಾಳು ಶ್ರೀ ಸಿದ್ದಲಿಂಗಶಿವಾಚಾರ್ಯ ಸ್ವಾಮಿಗಳ ವಿಜೃಂಭಣೆಯ ವರ್ಧಂತಿ

ತಿ.ನರಸೀಪುರ, ಡಿ.24– ತಾಲೂಕಿನಲ್ಲಿ ನಡೆದಾಡುವ ದೇವರೆಂದೇ ಖ್ಯಾತರಾಗಿರುವ ಶ್ರೀ ಮದ್ವಾಟಾಳು ಸೂರ್ಯ ಸಿಂಹಾಸನ ಮಠದ ಶ್ರೀ ಸಿದ್ದಲಿಂಗಶಿವಾಚಾರ್ಯ ಸ್ವಾಮಿಗಳ 77 ನೇ ವರ್ಷದ ವರ್ಧಂತಿ ಕಾರ್ಯಕ್ರಮ ವಾಟಾಳು ಶ್ರೀ ಮಠದಲ್ಲಿ ವಿಜೃಂಭಣೆಯಿಂದ ನಡೆಯಿತು.

ವಾಟಾಳು ಶ್ರೀಗಳ 77ನೇ ಜನ್ಮ ವರ್ಧಂತಿ ಮಹೋತ್ಸವದ ಹಿನ್ನೆಲೆಯಲ್ಲಿ ಶ್ರೀ ಮಠದ ಗದ್ದುಗೆಯಲ್ಲಿ ಬೆಳ್ಳಗ್ಗೆಯಿಂದಲೇ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆದವು. ವಾಟಾಳು ಶ್ರೀಮಠದ ಭಕ್ತವೃಂದದ ಹಮ್ಮಿಕೊಂಡಿದ್ದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಸರ್ವ ಧರ್ಮ ಸಮನ್ವಯತೆಯುಳ್ಳ ವಾಟಾಳು ಶ್ರೀಗಳಿಗೆ ತಾಲೂಕು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಭಕ್ತಾದಿಗಳು ಹಾಗೂ ಜನಪ್ರತಿನಿಧಿಗಳು ಶುಭ ಕೋರಿದರು.

ಮಠದ ಆವರಣದಲ್ಲಿ ಬೆಳಗ್ಗೆಯಿಂದಲೇ ಶ್ರೀಮಠಕ್ಕೆ ಭಕ್ತಾದಿಗಳ ದಂಡೇ ಹರಿದು ಬಂದು ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀಗಳಿಗೆ ಶುಭ ಕೋರಿ, ಆಶೀರ್ವಾದ ಪಡೆದು ಕೊಂಡರು. ಶ್ರೀಗಳ ಜನ್ಮ ದಿನದ ಹಿನ್ನೆಲೆಯಲ್ಲಿ ಮಠಕ್ಕೆ ಭೇಟಿ ನೀಡಿ ಶ್ರೀಗಳಿಗೆ ಶುಭ ಕೋರಿ ಆಶೀರ್ವಚನ ಪಡೆದ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ತಾಲೂಕಿನಲ್ಲಿ ನಡೆದಾಡುವ ದೇವರೆಂದೇ ಖ್ಯಾತರಾದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿಗಳು ಯಾವುದೇ ಜಾತಿ, ಧರ್ಮಕ್ಕೆ ಸೀಮಿತರಾಗದೇ ಸರ್ವರನ್ನು ಸಮಾನತೆಯಿಂದ ಕಾಣುವ ಸಂಪ್ರದಾಯ ಬೆಳೆಸಿಕೊಂಡಿದ್ದಾರೆ. ಇವರು ತಾಲೂಕಿನಾದ್ಯಂತ ಭಕ್ತಾದಿಗಳ ಅಚ್ಚು ಮೆಚ್ಚಿನ ಸಂತರಾಗಿದ್ದಾರೆ ಎಂದರು.



ವಾಟಾಳು ಶ್ರೀ ಮಠದಲ್ಲಿ ಶ್ರೀ ಸಿದ್ದಲಿಂಗಶಿವಾಚಾರ್ಯ ಸ್ವಾಮಿಗಳ ವರ್ಧಂತಿ ವಿಜೃಂಭಣೆಯಿಂದ ನೆರವೇರಿತು.

ಮಾಜಿ ಶಾಸಕ ಜಿ.ಎನ್.ನಂಜುಂಡ ಸ್ವಾಮಿ ಮಾತನಾಡಿ, ತಾಲೂಕಿನ ಮಠಗಳಲ್ಲಿ ವಾಟಾಳು ಮಠಕ್ಕೆ ವಿಶೇಷ ಸ್ಥಾನವಿದೆ. ವಾಟಾಳು ಶ್ರೀಗಳು ಸರಳತೆಯ ಮೂರ್ತಿಯಾಗಿದ್ದು ಅಪಾರ ಭಕ್ತಾದಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಅವರ ಮಾರ್ಗದರ್ಶನ ಇಂದು ಪ್ರತಿಯೊಬ್ಬರಿಗೂ ಅವಶ್ಯಕವಾಗಿ ಬೇಕಿದೆ. ದೈವ ಸ್ವರೂಪಿಯಾದ ಶ್ರೀಗಳು ನೂರಾರು ಕಾಲ ಆರೋಗ್ಯದಿಂದ ಬದುಕಿ ಸಮಾಜವನ್ನು ಉತ್ತಮ ರೀತಿಯಲ್ಲಿ ಮುನ್ನೆಡೆಸುವಂತಹ ಶಕ್ತಿಯನ್ನು ನೀಡಲೆಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದ್ದೇನೆ ಎಂದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಠ ನೀಡುತ್ತಿರುವ ಸಾರ್ವಜನಿಕ ಸೇವೆ ಪರಿಗಣಿಸಿ ಶ್ರೀ ಮಠಕ್ಕೆ 3.50 ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡಿದ್ದಾರೆ ಎಂದು ತಿಳಿಸಿದರು.

ಹೊಸಾರುಂಡಿ ಮಠದ ರಾಜಶೇಖರ ಸ್ವಾಮೀಜಿ, ಚುಂಚನಹಳ್ಳಿ ಚನ್ನಬಸವ ಸ್ವಾಮೀಜಿ, ಬೇಡನಹಳ್ಳಿ ಮಹದೇವ ಸ್ವಾಮೀಜಿ, ಶಾಂತವಲ್ಲಿಕಾರ್ಜುನ ಸ್ವಾಮಿ, ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕರಾದ ಎಂ.ಅಶ್ವಿನ್ ಕುಮಾರ್, ಕೃಷ್ಣಪ್ಪ, ಜೆಡಿಎಸ್ ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಬಿಜೆಪಿ ಕ್ಷೇತ್ರಾಧ್ಯಕ್ಷ ಸತ್ಯಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಆಲ್ದೂರು ರಾಜಶೇಖರ್, ವಕೀಲ ಪರಮೇಶ್, ಜ್ಞಾನೇಂದ್ರಮೂರ್ತಿ, ನಾಗೇಂದ್ರಪ್ರಸಾದ್, ಸಾಮ್ರಾಟ್ ಸುಂದರೇಶನ್, ಕೃಷಿಕ ಸಮಾಜದ ತಾಲೂಕು ಅಧ್ಯಕ್ಷ ಬೆನಕನ ಹಳ್ಳಿ ಶಿವಮಲ್ಲಪ್ಪ, ಪುರಸಭಾ ಸದಸ್ಯ ಎಸ್.ಕೆ ಕಿರಣ್, ರೂಪಾ ಪರಮೇಶ್, ವಿಜಯಕುಮಾರ್, ಕುರುಬೂರು ಶಿವು, ಮಂಜು, ಕೆ. ಎಂ. ಮಲ್ಲು, ಪರಮೇಶ್ ಪಟೇಲ್, ಭಜನಾ ಮಂಡಳಿಯ ವಿಜಯ ಲಕ್ಷ್ಮಿ, ಶಶಿರೇಖಾ, ಸುಶೀಲ, ಮೆಡಿಕಲ್ ಮಂಜುನಾಥ್, ಪುಜಿತ್ ಮೆಡಿಕಲ್ ಕುಮಾರ್, ಡೈರಿ ಬಸವ ರಾಜು ಎಲ್ಐಸಿ ಪ್ರಕಾಶ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರ ಮೂರ್ತಿ, ಕನ್ನಡ ಪುಟ್ಟಸ್ವಾಮಿ, ಕುರುಬೂರು ವೀರಣ್ಣ, ಅತ್ತಹಳ್ಳಿ ರವಿ, ರಾಜಶೇಖರ್, ಅಕ್ಕಿ ನಾಗಪ್ಪ, ವಾಟಾಳು ಸುರೇಶ್, ಕಟ್ಟೇ ಪುರ ಸಿದ್ದಪ್ಪ, ಓಂಕಾರ್ ಸ್ವಾಮಿ ಮಠಕ್ಕೆ ಭೇಟಿ ನೀಡಿ ಶ್ರೀ ಗಳಿಗೆ ಶುಭ ಕೋರಿದರು.

ದೇಶದ ಆರ್ಥಿಕತೆ, ಅಭಿವೃದ್ಧಿಗೆ ಅನ್ನದಾತನ ಕೊಡುಗೆ ಅಮೂಲ್ಯ

ತಹಶೀಲ್ದಾರ್ ಶ್ರೀನಿವಾಸ್ ಅಭಿಮತ

ಹೆಚ್‌ಡಿ ಕೋಟೆ, ಡಿ.24– ದೇಶದ ಆರ್ಥಿಕತೆಗೆ ಮತ್ತು ಅಭಿವೃದ್ಧಿಗೆ ಅನ್ನದಾತನ ಕೊಡುಗೆ ಅಮೂಲ್ಯವಾಗಿದೆ ಎಂದು ತಹಶೀಲ್ದಾರ್ ಶ್ರೀನಿವಾಸ್ ತಿಳಿಸಿದರು.

ಪಟ್ಟಣದಲ್ಲಿರುವ ಕಸಬಾ ರೈತ ಸಂಪರ್ಕ ಕೇಂದ್ರದ ಆವರಣದಲ್ಲಿ ನಡೆದ ರೈತರ ದಿನಾಚರಣೆ ಹಾಗೂ ಕಿಸಾನ್ ಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಜನರಿಗೆ ಆಹಾರವನ್ನು ಒದಗಿಸುವುದರ ಮೂಲಕ ರೈತರು ದೇಶದ ಬೆನ್ನೆಲುಬಾಗಿದ್ದಾರೆ. ಹಾಗಾಗಿ ರೈತರ ಅಭಿವೃದ್ಧಿಗಾಗಿ ಮತ್ತು ಸಮಸ್ಯೆಗಳ ಪರಿಹಾರಕ್ಕಾಗಿ ನಮ್ಮ ಹಂತದಲ್ಲೇ ಬಗೆಹರಿಸುವ ಕೆಲಸವನ್ನು ಮಾಡಲಾಗಿದೆ ಎಂದರು.



ಹೆಚ್.ಡಿ.ಕೋಟೆಯ ಕಸಬಾ ರೈತ ಸಂಪರ್ಕ ಕೇಂದ್ರದ ಆವರಣದಲ್ಲಿ ನಡೆದ ರೈತರ ದಿನಾಚರಣೆ ಹಾಗೂ ಕಿಸಾನ್ ಗೋಷ್ಠಿ ಕಾರ್ಯಕ್ರಮದಲ್ಲಿ ಜಿಲ್ಲಾ ಮಟದಲ್ಲಿ ಉತ್ತಮ ರೈತ ಪ್ರಶಸ್ತಿ ಪಡೆದ ಫಯಾಜ್ ಅಹಮದ್, ಚೇತನ ಮಹೇಶ್, ಸಿದ್ದರಾಜು, ಇವರುಗಳನ್ನು ಅಭಿನಂದಿಸಲಾಯಿತು.

ಸಹಾಯಕ ಕೃಷಿ ನಿರ್ದೇಶಕ ಪ್ರಸಾದ್ ಮಾತನಾಡಿ, ಎಪ್ಪತರ ದಶಕದಲ್ಲಿ ವಿದೇಶದಿಂದ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು, ಅದು ಕೂಡ ಉತ್ತಮ ಆಹಾರವಾಗಿರಲಿಲ್ಲ. ಈಗ ಡಾ. ಸ್ವಾಮಿನಾಥನ್ ಅವರ ನೇತೃತ್ವದಲ್ಲಿ ದೇಶದಲ್ಲಿ ಹಸಿರು ಕ್ರಾಂತಿ ಮಾಡುವುದರ ಮೂಲಕ ಆಧುನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಹೆಚ್ಚು ಇಳುವರಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ವಿದೇಶಗಳಿಗೆ ಆಹಾರವನ್ನು ರಫ್ತು ಮಾಡುವ ಮಟ್ಟಿಗೆ ನಮ್ಮ ದೇಶ ಬೆಳೆದಿದೆ ಅದಕ್ಕೆ ಮುಖ್ಯ ಕಾರಣ ರೈತಾಪಿ ವರ್ಗ ಎಂದು ಶ್ಲಾಘಿಸಿದರು.

ವಿಜ್ಞಾನಿ ಡಾ. ಹರ್ಷ ಅವರು ರೈತರುಗಳು ನಿಮ್ಮ ಜಮೀನಿನಲ್ಲಿ ಹೆಚ್ಚಿನ ಆದಾಯ ಗಳಿಸಲು ಸಾಂಬಾರ ಬೆಳೆಗಳಾದ ಏಲಕ್ಕಿ, ಜೈಕಾಯಿ, ಕಾಳು ಮೆಣಸು, ಇವುಗಳ ಬೇಸಾಯಿ ಪದ್ದತಿಗಳ ಬಗ್ಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಮಟ್ಟದಲ್ಲಿ ಉತ್ತಮ ರೈತ ಪ್ರಶಸ್ತಿ ಪಡೆದ ಫಯಾಜ್ ಅಹಮದ್, ಚೇತನ ಮಹೇಶ್, ಸಿದ್ದರಾಜು, ಅವರುಗಳನ್ನು ಅಭಿನಂದಿಸಲಾಯಿತು.

ತಾಲೂಕು ರೈತ ಸಂಘದ ಅಧ್ಯಕ್ಷ ಮಾದೇವ ನಾಯಕ, ನೇತ್ರಾವತಿ, ಅಧಿಕಾರಿಗಳಾದ ಸಿದ್ದಪ್ಪಸ್ವಾಮಿ, ಪ್ರವೀಣ್, ಹೆಚ್.ಸಿ.ನರಸಿಂಹಮೂರ್ತಿ, ಕೃಷಿ ಸಮಾಜದ ಅಧ್ಯಕ್ಷ ಎ.ಜೆ. ಕಾಳೇಗೌಡ, ಜಿಲ್ಲಾ ಪ್ರತಿನಿಧಿ ಸುರೇಶ್, ಡ್ರಿಪ್ ಗುರುಸ್ವಾಮಿ, ದೇವಮ್ಮ, ಗಾಯಿತ್ರಿ, ಓ.ಕೆ. ಮಹೇಂದ್ರ, ಗುರುಸ್ವಾಮಿ, ಉಮೇಶ್, ನವೀನ್, ದೇವನಾಯಕ, ಸುರೇಶ್, ಚಿಕ್ಕ ಬೋರೆಗೌಡ, ಗುರುಸ್ವಾಮಿ, ವೇಂಕಟೆಗೌಡ, ಮಹೇಂದ್ರ, ಮನು, ವೆಂಕಟೇಗೌಡ, ಲೋಕೇಶ್, ಬಿಲ್ಲನಾಯಕ, ಉಮೇಶ್, ರಾಮಕೃಷ್ಣಪ್ಪ, ನೂರಾರು ರೈತರುಗಳು ಭಾಗವಹಿಸಿದ್ದರು.

ಕಾರಿನಲ್ಲಿ ಗಾಂಜಾ ಮಾರುತ್ತಿದ್ದ ಇಬ್ಬರ ಬಂಧನ

ಕೆ.ಆರ್.ನಗರ, ಡಿ.24– ಪಟ್ಟಣದಲ್ಲಿ ಮಾರುತಿ ಕಾರಿನಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರು ಯುವಕರನ್ನು ಅಬಕಾರಿ ಅಧಿಕಾರಿಗಳು ಬಂಧಿಸಿ, ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ಕೊಡುಗು ಜಿಲ್ಲೆಯ ಮಕ್ಕಂದೂರಿನ ರಾಜರಾಜೇಶ್ವರಿ ನಗರದ ಎಂ.ವಿ.ಮಹಮ್ಮದ್ ಮಿರ್ಶದ್(23) ಹಾಗೂ ಕುಶಾಲನಗರ ತಾಲೂಕಿನ ಯಡವನಾಡು ಅರಣ್ಯದ ಎಲ್.ಪದ್ಮನಾಭ (23) ಬಂಧಿತರಾಗಿದ್ದು, ಇವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.



ಬಂಧಿತ ಆರೋಪಿಗಳೊಂದಿಗೆ ಅಬಕಾರಿ ಅಧಿಕಾರಿಗಳು.

ಪಟ್ಟಣದ, ಚೀರಹಳ್ಳಿ ಮುಖ್ಯ ರಸ್ತೆಯ ಸಾಯಿ ಕನ್ವೆನ್ಷನ್ ಹಾಲ್ ಬಳಿ ಅಬಕಾರಿ ಅಧಿಕಾರಿಗಳು ಗಸ್ತು ನಡೆಸುತ್ತಿದ್ದಾಗ ಕೆ.ಆರ್.ನಗರ–ಮೈಸೂರು ಮುಖ್ಯ ರಸ್ತೆಯಲ್ಲಿರುವ ತೋಪಮ್ಮ ದೇವಸ್ಥಾನದ ಬಳಿ ಮಾರುತಿ 800 ಕಾರಿನಲ್ಲಿ (ಕೆಎ–19 ಎಂ–8366) ಒಣ ಗಾಂಜಾವನ್ನು ಇಟ್ಟುಕೊಂಡು ಮಾರಾಟದ ಮಾಡಲಾಗುತ್ತದೆ ಎಂದು ದೊರೆತ ಮಾಹಿತಿಯ ಮೇರೆಗೆ ದಾಳಿ ನಡೆಸಲಾಗಿ 974 ಗ್ರಾಂ ತೂಕದ ಬೀಜ ಮಿಶ್ರಿತ ಒಣ ಗಾಂಜಾವನ್ನು ವಶಕ್ಕೆ ಪಡಿಸಿಕೊಂಡಿದ್ದೇವೆ ಎಂದು ಪಟ್ಟಣದ ಅಬಕಾರಿ ಇನ್ಸ್‌ಪೆಕ್ಟರ್ ವೈ.ಎಸ್. ಲೋಕೇಶ್ ತಿಳಿಸಿದ್ದಾರೆ.

ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ್ತ ಬಸವರಾಜ ಹಡಪದ ಹಾಗೂ ಮೈಸೂರು ಜಿಲ್ಲೆ ಗ್ರಾಮಾಂತರ ಅಬಕಾರಿ ಉಪ ಆಯುಕ್ತರಾದ ಡಾ.ಮಹದೇವಿ ಬಾಯಿ, ಹುಣಸೂರಿನ ಅಬಕಾರಿ ಉಪಅಧೀಕ್ಷಕರಾದ ಎಂ.ಡಿ.ಮೋಹನ್ ಕುಮಾರ್ ಮಾರ್ಗದರ್ಶನದಲ್ಲಿ ಅಬಕಾರಿ ಸಬ್ ಇನ್ಸ್‌ಪೆಕ್ಟರ್ ಸಿ.ವಿ.ರಾಘವೇಂದ್ರ, ಮುಖ್ಯ ಪೇದೆ ಕೆ.ಪಿ.ಶಿವಕುಮಾರ್, ಅಬಕಾರಿ ಪೇದೆ ಶಿವಪ್ಪಮಾಳಪ್ಪ ಭಾನುಸಿ ಮತ್ತು ವಾಹನ ಚಾಲಕ ಮಹದೇವ.ಕೆ, ಗೃಹರಕ್ಷದಳ ಸಿಬ್ಬಂದಿ ರವೀಶ.ಆರ್ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಶಾಂತಿ, ಸೌಹಾರ್ದತೆಯಿಂದ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ ಆಚರಿಸಲು ಸಿಪಿಐ ಧನಂಜಯ್ ಮನವಿ



ಜಾತ್ರಾ ಮಹೋತ್ಸವ ಶಾಂತಿ ಸಭೆಯಲ್ಲಿ ಸಿಪಿಐ ಧನಂಜಯ್ ಮಾತನಾಡಿದರು.

ಮೂಗೂರು, ಡಿ.24– ಇದೇ ಜನವರಿ 3 ರಿಂದ 7 ರ ತನಕ ನಡೆಯುವ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದಲ್ಲಿ ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡಿದೆ ಶಾಂತಿ, ಸೌಹಾರ್ದತೆಯಿಂದ ಆಚರಿಸಿ ಎಂದು ತಿ.ನರಸೀಪುರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಧನಂಜಯ್ ಗ್ರಾಮಸ್ಥರಲ್ಲಿ ಮನವಿ ಮಾಡಿದರು.

ಗ್ರಾಮದ ಪೊಲೀಸ್ ಉಪ ಠಾಣೆಯ ಆವರಣದಲ್ಲಿ ನಡೆದ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ ಶಾಂತಿ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಇಲ್ಲಿ ನಡೆಯುವ ಪ್ರತಿಯೊಂದು ಧಾರ್ಮಿಕ ಕಾರ್ಯಗಳಲ್ಲಿ ಸೌಹಾರ್ದತೆ ಎದ್ದು ಕಾಣುತ್ತಿದೆ. ಇಲ್ಲಿನ ಎಲ್ಲಾ ಸಮುದಾಯದ ಜನತೆ ಭೇದ ಭಾವವಿಲ್ಲದೆ ಎಲ್ಲರೂ ಜಾತೀಯತೆ ಮರೆತು ಸೌಹಾರ್ದತೆಯಿಂದ ಆಚರಣೆ ಮಾಡಿ ಎಂದರು.

ಸಭೆಯಲ್ಲಿ ಮುಖಂಡ ಬಲ್ಲಯ್ಯ ಮಾತನಾಡಿ, ಬಂಡಿ ಉತ್ಸವದ ಸಂಧರ್ಭದಲ್ಲಿ ಬಂಡಿ ಎತ್ತುಗಳ ನಿಲುಗಡೆಗೆ ಪರ್ಯಾಯ ಸ್ಥಳವನ್ನು ವ್ಯವಸ್ಥೆ ಮಾಡಿ ಪೂಜೆಗೆ ಆಗಮಿಸುವ ಮಹಿಳೆಯರು ದೇಗುಲಕ್ಕೆ ಸಂಚರಿಸಲು ಅನುವು ಮಾಡಿಕೊಡಬೇಕು. ಕಳೆದ ವರ್ಷ ರಥೋತ್ಸವದ ವೇಳೆ ನಡೆದ ಘಟನೆಯಲ್ಲಿ ಭಾಗಿದ್ದವರ ಮೇಲಿರುವ ಮೊಕದಮೆಯನ್ನು ಖುಲಾಸೆ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಬಂಡಿಯ ರುದ್ರಾಕ್ಷಿ ಮಂಟಪ ಹಾಗೂ ರಥೋತ್ಸವದ ಮೇಲೆ ಕೆಲವೇ ಮಂದಿಗೆ ಮಾತ್ರ ಅವಕಾಶ ನೀಡಬೇಕು. ಜಾತ್ರೆಯ ಉತ್ಸವದ ವೇಳೆ ಯಾವುದೇ ಚಿತ್ರ ನಟರ ಭಾವಚಿತ್ರದ ಬಾವುಟ ಪ್ರದರ್ಶನವನ್ನು ನಿಷೇಧಿಸಿ, ಭಕ್ತರಿಗೆ ಕಿರಿಕಿರಿಯನ್ನುಂಟು ಮಾಡುವ ಪುಂಡರ ಗುಂಪುಗಳ ಮೇಲೆ ನಿಗಾ ವಹಿಸಬೇಕು. 5 ದಿನವೂ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸುವ ಮೂಲಕ ಜಾತ್ರಾ ಮಹೋತ್ಸವವನ್ನು ಯಶಸ್ವಿಗೊಳಿಸಿಕೊಡಬೇಕೆಂದು ಸಭೆಯಲ್ಲಿ ಮನವಿ ಮಾಡಿದರು.

ಗ್ರಾಮದ ಮುಖಂಡರ ಮನವಿಯನ್ನು ಆಲಿಸಿದ ಇನ್ಸ್‌ಪೆಕ್ಟರ್ ಧನಂಜಯ್ ಅವರು ಮಾತನಾಡಿ, ಗ್ರಾಮದ ಆಯಾಯ ಸಮುದಾಯದ ಮುಖಂಡರು ಜವಾಬ್ದಾರಿ ವಹಿಸಿಕೊಂಡು ಅತಿರೇಕವಾಗಿ ಪುಂಡಾಟಿಕೆಯಲ್ಲಿ ತೊಡಗಿದ ಯುವಕರಿಗೆ ಕಡಿವಾಣ ಹಾಕಬೇಕು, ಜಾತ್ರೆಯಲ್ಲಿ ಜನಸಾಮಾನ್ಯರಿಗೆ ಕರ್ಕಶ ಶಬ್ದದಿಂದ ಕಿರಿಕಿರಿ ಉಂಟುಮಾಡುವ ಸಾಮಗ್ರಿಗಳನ್ನು ನಿಷೇಧಿಸಿ, ಕಳೆದ ಬಾರಿ ರಥೋತ್ಸವದ ವೇಳೆ ಉಂಟಾದ ಅಹಿತಕರ ಘಟನೆ ಮರುಕಳಿಸದಂತೆ ಧಾರ್ಮಿಕ ಆಚರಣೆಗೆ ಧಕ್ಕೆ ಬಾರದ ರೀತಿಯಲ್ಲಿ ಕ್ರಮ ವಹಿಸಲಾಗುವುದು ಎಂದು ಸಭೆಯಲ್ಲಿ ಹೇಳಿದರು.

ಈ ಸಂದರ್ಭದಲ್ಲಿ ಗ್ರಾ ಪಂ ಅಧ್ಯಕ್ಷ ಎಂ.ಡಿ. ಲೋಕೇಶ್, ಗೌಡ್ರು ಎಂ.ಪಿ. ನಾಗರಾಜ್, ಪಾರುಪತ್ತೇಗಾರ ಎಂ.ಬಿ. ಸಾಗರ್, ಮುಖಂಡರಾದ ಎಂ.ಆರ್. ಸುಂದರ್, ಎಂ.ಪಿ.ಮರಿಸ್ವಾಮಿ, ಪುಟ್ಟ ಮಾದಯ್ಯ, ಉಪನ್ಯಾಸಕ ಕುಮಾರಸ್ವಾಮಿ, ದೇವರಾಜು, ನಾಗಸುಂದ್ರ, ಮಹದೇವ ಸ್ವಾಮಿ, ಸತೀಶ್, ಜಯಶಂಕರಮೂರ್ತಿ, ಚೌಲ್ಟ್ರಿ ಮಹೇಶ್, ಡೈರಿ ನಾಗೇಂದ್ರ, ಕೃಷ್ಣಸ್ವಾಮಿ, ಮೆಡಿಕಲ್ ಬಾಲು ಸೇರಿದಂತೆ ಗ್ರಾಮಸ್ಥರು ಪೊಲೀಸ್ ಸಿಬ್ಬಂದಿ ಇತರರು ಇದ್ದರು.

ಸರಗೂರಲ್ಲಿ ವಿಶೇಷಚೇತನರಿಗೆ ಕಾನೂನು ಅರಿವು ಕಾರ್ಯಕ್ರಮ



ಅಂತಾರಾಷ್ಟ್ರೀಯ ವಿಶೇಷ ವಿಕಲಚೇತನರ ಕಾನೂನು ಅರಿವು ಕಾರ್ಯಕ್ರಮದಲ್ಲಿ ಪ್ಯಾನೆಲ್ ವಕೀಲ ಹಾಗೂ ವಕೀಲರ ಸಂಘದ ಸಹ ಕಾರ್ಯದರ್ಶಿ ಮಣಿರಾಜು ಮಾತನಾಡಿದರು.


ಸರಗೂರು, ಡಿ.24–ವಿಕಲಚೇತನರ ಹಿತರಕ್ಷಣೆಗಾಗಿ ಇರುವ ಕಾನೂನಿನ ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯ ಎಂದು ಪ್ಯಾನೆಲ್ ವಕೀಲ ಹಾಗೂ ವಕೀಲರ ಸಂಘದ ಸಹ ಕಾರ್ಯದರ್ಶಿ ಮಣಿರಾಜು ಹೇಳಿದರು.

ಪಟ್ಟಣದ ತಾಲೂಕು ಪಂಚಾಯಿತಿ ಪಟ್ಟಣ ಪಂಚಾಯಿತಿ, ತಾಲೂಕು ಕಾನೂನು ಸೇವಾ ಸಮಿತಿ ತಾಲೂಕು ವಕೀಲರ ಸಂಘ ಹಾಗೂ ಸರ್ಕಾರಿ ಅಭಿಯೋಜನಾ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮತ್ತು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಇವರ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ವಿಶೇಷ ವಿಕಲಚೇತನರ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿಕಲಚೇತನರು ಸರ್ಕಾರದ ಉದ್ಯೋಗ ಹಾಗೂ ವಿವಿಧ ಸೌಲಭ್ಯ ಗಳು, ಸ್ಥಳೀಯ ನ್ಯಾಯಾಲಯದ ಉಚಿತ ಕಾನೂನು ನೆರವು ಪಡೆದುಕೊಳ್ಳಬೇಕು. ವಿಕಲಚೇತನರಿಗೆ ಸರಕಾರದಿಂದ ಸಿಗುವ ಅನುದಾನಗಳನ್ನು ಸಮರ್ಪಕವಾಗಿ ತಲುಪಿಸಲು ಎಲ್ಲರೂ ಶ್ರಮಿಸಬೇಕು ಎಂದು ತಿಳಿಸಿದರು,

ತಾಪಂ ಇಓ ಪ್ರೇಮ್‌ಕುಮಾರ್ ಮಾತನಾಡಿ, ವಿಕಲಚೇತನರಿಗೆ ನಾಲ್ಕು ರೀತಿಯ ಕಾರ್ಯಕ್ರಮಗಳನ್ನು, ಜಾರಿಗೊಳಿಸಬೇಕಾಗಿದೆ. ಮುಖ್ಯವಾಗಿ 0–6 ವರ್ಷದ ಮಕ್ಕಳಿಗೆ ಶೀಘ್ರ ಪತ್ತೆ ಹಚ್ಚುವಿಕೆ, 6 ರಿಂದ 14 ವರ್ಷದ ಮಕ್ಕಳಿಗೆ ಶಿಕ್ಷಣ ದೊರಕಿಸಿಕೊಡುವುದು, ಯುವಜನರಿಗೆ ಉದ್ಯೋಗಾದಾರಿತ ಕಾರ್ಯಕ್ರಮ, ಹಾಗೂ ಇತರರಿಗೆ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಿದೆ ಎಂದು ಸಲಹೆ ನೀಡಿದರು.

ವಿಕಲಚೇತನರ ಸಂಯೋಜಕ ದೇವರಾಜು ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ವಕೀಲ ಶ್ರೀಕಂಠ ಮೂರ್ತಿ, ಮಾತನಾಡಿದರು. ಕಾರ್ಯಕ್ರಮದಲ್ಲಿ ಪಪಂ ಅಧ್ಯಕ್ಷೆ ಚೈತ್ರ ಸ್ವಾಮಿ, ಉಪಾಧ್ಯಕ್ಷ ಶಿವಕುಮಾರ್ (ವೀರೇಶ್), ಪಪಂ ಮುಖ್ಯಾಧಿಕಾರಿ ಸಂತೋಷ ಕುಮಾರ್, ಆರೋಗ್ಯಾಧಿಕಾರಿ ಡಾ.ಪಾರ್ಥಸಾರತಿ, ವಿಕಲಚೇತನರ ಸಂಯೋಜಕ ಮಹಾದೇವ್, ತಾಲೂಕು ಕಾನೂನು ಸೇವೆ ಸಮಿತಿ ಸಿಬ್ಬಂದಿಗಳು ಕವಿತಾ, ಶೃತಿ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಾದ ಸೋಮೇಶ್, ಬಸವರಾಜು, ಮಾದೇವ ಮೂರ್ತಿ, ಕೆಂಡಗಣ್ಣ, ಸಂತೋಷ, ಚಿನ್ನಪ್ಪ, ನಾಗರಾಜು, ಕುಮಾರಸ್ವಾಮಿ ಇನ್ನಿತರರಿದ್ದರು.

ಸುರಗಹಳ್ಳಿಯಲ್ಲಿ ಅದ್ದೂರಿ ಹನುಮ ಜಯಂತಿ ಮೆರವಣಿಗೆ



ಬೆಟ್ಟದಪುರ, ಡಿ.24– ಪಿರಿಯಾಪಟ್ಟಣ ತಾಲೂಕಿನ ಸುರಗಹಳ್ಳಿ ಗ್ರಾಮದಲ್ಲಿ ಅದ್ದೂರಿಯಾಗಿ ಹನುಮ ಜಯಂತಿಯನ್ನು ಆಚರಿಸಲಾಯಿತು.

ಗ್ರಾಮದ ಮುಖಂಡರು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗ್ರಾಮದ ಪ್ರತಿ ಬೀದಿಯಲ್ಲಿ ಮೆರವಣಿಗೆ ಮಾಡಿ ಮನೆ ಮನೆಯಲ್ಲಿ ದೇವರಿಗೆ ಹಣ್ಣು ಕಾಯಿ ನೀಡಿ ಮಹಿಳೆಯರು ಮತ್ತು ಮಕ್ಕಳು ಭಕ್ತಿಯಿಂದ ನಮಸ್ಕರಿಸಿ ಹನುಮನಿಗೆ ಭಕ್ತಿ ಅರ್ಪಿಸಿದರು.

ನಂತರ ಗ್ರಾಮದಲ್ಲಿ ಅನ್ನ ದಾಸೋಹ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯತಿ ಸದಸ್ಯ ಶಂಕ್ರೇಗೌಡ, ಗ್ರಾಮ ಪಂಚಾಯತಿ ಮಾಜಿ ಸದಸ್ಯ ವಿದ್ಯಾಶಂಕರ್, ಎಪಿಎಂಸಿ ಮಾಜಿ ನಿರ್ದೇಶಕ ರವಿಗೌಡ, ಶಿವಣ್ಣೇಗೌಡ, ರಮೇಶ್ ಸೇರಿದಂತೆ ಎಲ್ಲಾ ಸಮಾಜದ ಮುಖಂಡರು, ಗ್ರಾಮದ ಮಹಿಳೆಯರು, ಯುವಕರು ಭಾಗವಹಿಸಿದ್ದರು.

ನಂ.ಗೂಡು ಟಿಎಪಿಸಿಎಂಎಸ್‌ಗೆ ಕೆ.ಜಿ.ಮಹೇಶ್ ಅಧ್ಯಕ್ಷ

ನಂಜನಗೂಡು, ಡಿ.24– ನಂಜನಗೂಡು ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕುರಹಟ್ಟಿ ಕೆ.ಜಿ.ಮಹೇಶ್, ಉಪಾಧ್ಯಕ್ಷರಾಗಿ ಹಳ್ಳಿದಿಡ್ಡಿ ಮಹದೇವ ಅವಿರೋಧವಾಗಿ ಆಯ್ಕೆಯಾದರು.

ಕಳೆದ ಕೆಲವು ದಿನಗಳ ಹಿಂದೆ ಟಿಎಪಿಸಿಎಂಎಸ್ ಸಂಘದ ನಿರ್ದೇಶಕರ ಆಯ್ಕೆಗಾಗಿ ಚುನಾವಣೆಯನ್ನು ನಡೆಸಲಾಗಿತ್ತು, ಟಿಎಪಿಸಿಎಂಎಸ್ ನಿರ್ದೇಶಕರ 12 ಸ್ಥಾನಕ್ಕೆ 12 ಸ್ಥಾನಗಳಲ್ಲೂ ಸಹ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದ್ದರು. ಬುಧವಾರ ಟಿಎಪಿಸಿಎಂಎಸ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಗಾಗಿ ಚುನಾವಣೆ ನಡೆಸಲಾಯಿತು.

ಚುನಾವಣೆಯಲ್ಲಿ ಕೆ.ಜಿ.ಮಹೇಶ್ ಅವರನ್ನು ಹೊರತುಪಡಿಸಿ ಯಾರೊಬ್ಬರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾ ಅಧಿಕಾರಿಯಾಗಿದ್ದ ತಹಶೀಲ್ದಾರ್ ಶಿವಕುಮಾರ್ ಕಾಸ್ನೂರು ಅವಿರೋಧ ಆಯ್ಕೆಯನ್ನು ಘೋಷಿಸಿದರು.



ನಂಜನಗೂಡು ಟಿಎಪಿಸಿಎಂಎಸ್‌ನ ನೂತನ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಉಪಾಧ್ಯಕ್ಷ ಹಳ್ಳಿದಿಡ್ಡಿ ಮಹದೇವ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ನೂತನ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್ ಮಾತನಾಡಿ, ನಂಜನಗೂಡು ಟಿಎಪಿಸಿಎಂಎಸ್‌ಗೆ ಹಲವಾರು ದಶಕಗಳ ಇತಿಹಾಸವಿದ್ದು, ನಮ್ಮ ಹಿರಿಯರು ಸಂಘವನ್ನು ಸದೃಢವಾಗಿ ಕಟ್ಟಿ ಬೆಳೆಸಿದ್ದಾರೆ. ಸಂಘದ ಎಲ್ಲಾ ಸದಸ್ಯರ ಸಹಕಾರದಿಂದಾಗಿ ನನಗೆ 4ನೇ ಅವಧಿಗೆ ಅಧ್ಯಕ್ಷರಾಗಿ ಸಂಘವನ್ನು ಮುನ್ನಡೆಸುವ ಅವಕಾಶ ದೊರಕಿದೆ. ನನ್ನ ಆಯ್ಕೆಗೆ ಸಹಕಾರ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ, ಟಿಎಪಿಸಿಎಂಎಸ್ ಸಂಘದೊಂದಿಗೆ ವ್ಯವಹಾರ ನಡೆಸಿಲ್ಲ ಎಂಬ ಕಾರಣದಿಂದ ಸರ್ಕಾರದ ನಿಯಮಾವಳಿಯಂತೆ ಸುಮಾರು 600 ಜನರಿಗೆ ಮತದಾನದ ಹಕ್ಕು ನೀಡಲಾಗಿಲ್ಲ. ಮುಂದಿನ ದಿನಗಳಲ್ಲಿ ಎಲ್ಲಾ ಸದಸ್ಯರು ಸಂಘದೊಂದಿಗೆ ವ್ಯವಹಾರ ನಡೆಸುವಂತೆ, ರೈತರಿಗೆ ನೆರವಾಗುವಂತೆ ಕೆಲಸ ನಿರ್ವಹಿಸುವ ಜೊತೆಗೆ ನೂತನ ಕಲ್ಯಾಣ ಮಂಟಪ ಮತ್ತು ಪೆಟ್ರೋಲ್ ಬಂಕ್ ನಿರ್ಮಾಣ ಕಾರ್ಯಕ್ಕೆ ಮುನ್ನುಡಿ ಬರೆಯುವ ಮೂಲಕ ಸಂಘವನ್ನು ಅಭಿವೃದ್ಧಿಯತ್ತ ಮುನ್ನಡೆಸುತ್ತೇನೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಮಾರುತಿ, ಸಂಘದ ನಿರ್ದೇಶಕರಾದ ವಿಜಯಕುಮಾರ್, ಮಂಜುಳಾ ಮಧು, ಶಿವಕುಮಾರ್, ಎನ್.ಶ್ರೀನಿವಾಸ್, ಎನ್.ಎಂ.ಪವಿತ್ರ, ಹೆಚ್.ಜಿ ಪರಶಿವ ಮೂರ್ತಿ, ಜಿ.ಕೆ .ಪ್ರಕಾಶ್, ಕೆ.ಎನ್ .ಮಲ್ಲೇಶ್, ಟಿ.ಎನ್. ಗುರುಮಲ್ಲೇಶ್, ಎಸ್‌ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉಪ್ಪಿನಹಳ್ಳಿ ಶಿವಣ್ಣ, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ ಕುಮಾರ್, ಕುರುಬರ ಸಂಘದ ನಿಕಟಪೂರ್ವ ಅಧ್ಯಕ್ಷ ಕೆಂಪಣ್ಣ, ಮುಖಂಡರಾದ ಕಳಲೆ ರಾಜೇಶ್, ಹೆಮ್ಮರಗಾಲ ಉಮೇಶ್, ನಂದೀಶ್, ಮಲ್ಲೇಶ್, ಜಿ.ಪಂ ಮಾಜಿ ಸದಸ್ಯೆ ಲತಾಸಿದ್ಧಶೆಟ್ಟಿ, ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಅನ್ನ ನೀಡುವ ರೈತರನ್ನು ನಾಡಿನ ಪ್ರತಿಯೊಬ್ಬರೂ ಗೌರವಿಸಬೇಕು

ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ

ತಿ.ನರಸೀಪುರ, ಡಿ.24– ಅನ್ನ ನೀಡುವ ರೈತರನ್ನು ನಾಡಿನ ಪ್ರತಿಯೊಬ್ಬರೂ ಗೌರವಿಸಬೇಕೆಂದು ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ ಹೇಳಿದರು. ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ 2025–26 ನೇ ಸಾಲಿನ ಆತ್ಮ ಯೋಜನೆ, ರೈತ ದಿನಾಚರಣೆ, ಕಿಸಾನ್ ಗೋಷ್ಠಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.



ತಿ.ನರಸೀಪುರ ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ರೈತ ದಿನಾಚರಣೆ ಕಿಸಾನ್ ಗೋಷ್ಠಿ ಕಾರ್ಯಕ್ರಮದಲ್ಲಿ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ ಮಾತನಾಡಿದರು.

ದೇಶದ ಬೆನ್ನೆಲುಬಾಗಿರುವ ರೈತರು ಆರ್ಥಿಕವಾಗಿ ಅಭಿವೃದ್ಧಿಗೊಂಡಾಗ ಮಾತ್ರ ಆ ದೇಶ ಸರ್ವಾಂಗೀಣವಾಗಿ ಮುಂದುವರೆಯಲು ಸಾಧ್ಯ. ಇದನ್ನು ಅರಿತು ನಮ್ಮ ಸರ್ಕಾರಗಳು ರೈತರಿಗೆ ಅನುಕೂಲವಾಗುವ ಯೋಜನೆಗಳನ್ನು ಜಾರಿಗೊಳಿಸಬೇಕಿದೆ. ಇತ್ತೀಚಿನ ದಿನ ಗಳಲ್ಲಿ ನಮ್ಮ ದೇಶದ ರೈತರು ಕೃಷಿ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡುತ್ತಿದ್ದಾರೆ. ಇದರಿಂದ ಜಗತ್ತಿಗೆ ಮಾದರಿಯಾಗಿದ್ದೇವೆ. ಇಂತಹ ರೈತರಿಗೆ ಬೇಕಾಗಿರುವ ನೀರು, ವಿದ್ಯುತ್ ಮತ್ತು ಅವರು ಬೆಳೆದ ಬೆಳೆಗೆ ವೈಜ್ಞಾನಿಕ ಬೆಂಬಲ ಬೆಲೆ ನೀಡಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ನಮ್ಮ ಸರ್ಕಾರ ಕಟ್ಟುನಿಟ್ಟಿನಕ್ರಮದ ಅವಶ್ಯಕತೆ ಬಹು ಮುಖ್ಯವಾಗಿದೆ ಎಂದರು.

ದಳ್ಳಾಳಿಗಳಿಂದ ಮಾರುಕಟ್ಟೆ ವ್ಯವಸ್ಥೆ ಹಾಳು: ಪ್ರಸಕ್ತ ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಸಿಗುತ್ತಿಲ್ಲ ಎಂದು ನಾವು ಕೈ ಕಟ್ಟಿ ಕೂರಬಾರದು. ಭತ್ತಕ್ಕೆ ಸಿಗುವ ಬೆಂಬಲ ಬೆಲೆ ದಿನದಿಂದ ದಿನಕ್ಕೆ ಏರುಪೇರಾಗುತ್ತಿದೆ. ದಳ್ಳಾಳಿಗಳು ಮಾರುಕಟ್ಟೆ ವ್ಯವಸ್ಥೆಯನ್ನು ಹಾಳು ಮಾಡುತ್ತಿದ್ದಾರೆ. ಹಾಗಾಗಿ ನಾವು ಬೆಳೆದ ಬೆಳೆಗಳಿಗೆ ನಾವೇ ಮಾರುಕಟ್ಟೆ ಸೃಷ್ಟಿ ಮಾಡಿಕೊಳ್ಳಬೇಕಿದೆ. ಭತ್ತ ಬೆಳೆದ ರೈತರು ಭತ್ತವನ್ನು ಬಿಡಿಸಿ ನಮ್ಮದೇ ಒಂದು ಬ್ರ್ಯಾಂಡ್ ಕ್ರಿಯೇಟ್ ಮಾಡಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರೆ ಹೆಚ್ಚು ಲಾಭ ಪಡೆಯಲು ಸಾಧ್ಯವಾಗುತ್ತದೆ. ಮುಖ್ಯವಾಗಿ ನಾವು ಬೆಳೆ ಬೆಳೆಗಳಿಗೆ ಮೌಲ್ಯವರ್ಧನೆ ಹೇಗೆ ಮಾಡಬೇಕೆಂಬ ತಿಳುವಳಿಕೆ ನಮಗೆ ಬರಬೇಕು ಎಂದರು. ಮುಂದಿನ ದಿನಗಳಲ್ಲಿ ರೈತ ಸಮುದಾಯಕ್ಕೆ ಆಗುತ್ತಿರುವ ಅನಾನುಕೂಲತೆಗಳನ್ನು ಬಗೆಹರಿಸಿ ಕೊಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಮಹದೇವಪ್ಪರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮನವಿ ಸಲ್ಲಿಸಲು ಕೃಷಿಕ ಸಮಾಜ ಪ್ರಾಮಾಣಿಕ ಪ್ರಯತ್ನ ಪಡಲಿದೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ತೋಟಗಾರಿಕೆ ಸಹಾಯಕ ನಿರ್ದೇಶಕಿ ಶಾಂತ, ಮೀನುಗಾರಿಕೆ ಸಹಾಯಕ ನಿರ್ದೇಶಕಿ ಶ್ವೇತಾ, ಕೆವಿಕೆ ವಿಜ್ಞಾನಿ ಡಾ.ಪ್ರಸಾದ್, ನಿವೃತ್ತ ಕೃಷಿ ಅಧಿಕಾರಿ ಸ್ವಾಮಿ, ತಾಂತ್ರಿಕ ಅಧಿಕಾರಿ ರಾಘವೇಂದ್ರ, ಕೃಷಿ ಅಧಿಕಾರಿ ವಿಶಾಲ್, ಆತ್ಮ ಯೋಜನಾಧಿಕಾರಿ ಶಿವಣ್ಣ, ರೈತ ಮುಖಂಡರಾದ ಕಳ್ಳೀಪುರ ಮಹದೇವ ಸ್ವಾಮಿ, ಅಲಗೂಡು ಮಹದೇವ, ಕುಪ್ಯ ಜಯರಾಂ, ಬನ್ನಳ್ಳಿ ಹುಂಡಿ ಜಯಶೀಲ ಸೇರಿದಂತೆ ಕೃಷಿ ಸಖಿಯರು ಹಾಗೂ ಕೃಷಿ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು.

ಕಡಕೊಳ ಪಪಂನಲ್ಲಿ ಪೌರಕಾರ್ಮಿಕರ ದಿನಾಚರಣೆ

ಪೌರಕಾರ್ಮಿಕರನ್ನು ಪ್ರೀತಿ-ವಾತ್ಸಲ್ಯದಿಂದ ಕಾಣಬೇಕಿದೆ: ಶಾಸಕ ಜಿ.ಟಿ.ದೇವೇಗೌಡ ಅಭಿಮತ



ಕಡಕೊಳ ಪಟ್ಟಣ ಪಂಚಾಯಿತಿಯಲ್ಲಿ ಮಂಗಳವಾರ ಆಯೋಜಿಸಿದ್ದ ಪೌರಕಾರ್ಮಿಕರ ದಿನಾಚರಣೆಯನ್ನು ಮಾಜಿ ಸಚಿವರೂ ಆದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಮೈಸೂರು, ಡಿ.24(ಎಂಕೆ)- ಪೌರಕಾರ್ಮಿಕರ ಸೇವೆ ಅನನ್ಯವಾಗಿದ್ದು, ಅವರನ್ನು ಪ್ರೀತಿ ಮತ್ತು ಗೌರವದಿಂದ ಕಾಣಬೇಕು ಎಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಡಕೋಳ ಪಟ್ಟಣ ಪಂಚಾಯಿತಿಯಲ್ಲಿ ಆಯೋಜಿಸಿದ್ದ 'ಪೌರಕಾರ್ಮಿಕರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಮನೆ ಮನೆಗೆ ತೆರಳಿ ಕಸ ಸಂಗ್ರಹಣೆ ಮೂಲಕ ಬೀದಿ, ಗ್ರಾಮ, ಪಟ್ಟಣ, ನಗರ, ರಾಜ್ಯ ಮತ್ತು ದೇಶವನ್ನೇ ಸ್ವಚ್ಛವಾಗಿಡುವ ಪೌರಕಾರ್ಮಿಕರನ್ನು ಗೌರವದಿಂದ ಕಾಣಬೇಕು ಎಂದರು.

ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪೌರಕಾರ್ಮಿಕರನ್ನು ಖಾಯಂ ಮಾಡುವ ಮೂಲಕ ಎಲ್ಲಾ ಸವಲತ್ತುಗಳನ್ನು ನೀಡಲಾಗಿದೆ. ಪೌರಕಾರ್ಮಿಕರು ತಮ್ಮ ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸ ಕೊಡಿಸಬೇಕು. ಸರ್ಕಾರಿ ನೌಕರಿ ಪಡೆಯುವ ಉದ್ದೇಶದೊಂದಿಗೆ ಮಕ್ಕಳು ಕೂಡ ಓದಬೇಕು. ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿದ ಶ್ರೇಷ್ಠ ಸಂವಿದಾನದ ಅಡಿಯಲ್ಲಿ ಸಮಾನತೆಯಿಂದ ಬದುಕಬೇಕು ಎಂದು ತಿಳಿಸಿದರು.


ಕ್ಷೇತ್ರದ ಅಭಿವೃದ್ಧಿಗೆ ಕ್ರಮ: ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಕಡಕೊಳ ಪಟ್ಟಣ ಪಂಚಾಯಿತಿಗಳಲ್ಲಿ ಆಗಬೇಕಿರುವ ಕೆಲಸಗಳ ಪಟ್ಟಿ ಮಾಡಿ ತಿಳಿಸಿದರೆ, ಸಂಬಂಧಿಸಿದವರೊಂದಿಗೆ ಚರ್ಚಿಸಿ ಅನುಮೋದನೆ ಕೊಡಿಸಲಾಗುವುದು ಎಂದು ಭರವಸೆ ನೀಡಿದರು.

ಕಬಿನಿಯಿಂದ ಕಡಕೊಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ, ಬಡಾವಣೆಗಳಿಗೆ ಸಮಗ್ರವಾಗಿ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿ ಪ್ರಾರಂಭವಾಗಿದ್ದು, ಮುಂದಿನ ದಿನಗಳಲ್ಲಿ ಈ ಭಾಗದ ಎಲ್ಲಾ ಗ್ರಾಮಗಳಿಗೆ ಬಡಾವಣೆಗಳಿಗೆ ಒದಗಿಸಲಾಗುವುದು ಎಂದು ಹೇಳಿದರು. ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಹೆಚ್.ಆರ್.ದೀಪಾ, ಮುಖಂಡರಾದ ಕಡಕೊಳ ನಾಗರಾಜು, ಪಟೇಲ್ ಜವರೇಗೌಡ, ಗೆಜ್ಜಗಳ್ಳಿ ಲೋಕೇಶ್, ಮಂಜುಳಾ ಮಂಜುನಾಥ್, ಶ್ರೀಕಂಠ, ಶಿವಕುಮಾರ್, ಹೊಸಹುಂಡಿ ರಮೇಶ್, ಕಡಕೊಳ ರಮೇಶ್, ಮಾದೇಶ್ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಕ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	5 ಪ್ರದರ್ಶನಗಳು
ಲಿಡೋ	
ಅಖಂಡ-2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
-	-
ಪ್ರಭಾ	
ಕಾಂತಾರ-2 (ಕ)	4 ಪ್ರದರ್ಶನಗಳು

ಜಯಲಕ್ಷ್ಮಿ ನಿಧನ



ಮೈಸೂರು,ಡಿ.24- ಹಿರಿಯ ವಕೀಲ ಎನ್.ಟಿ.ಶ್ರೀನಿವಾಸ್ ಅವರ ಧರ್ಮಪತ್ನಿ ಶ್ರೀಮತಿ ಜಯಲಕ್ಷ್ಮಿ (74) ಬುಧವಾರ ಸಂಜೆ ನಿಧನರಾದರು. ಮೃತರು ಪತಿ ಎನ್.ಟಿ. ಶ್ರೀನಿವಾಸ್, ಪುತ್ರರಾದ ಎನ್.ಎಸ್.ಜಗನ್ನಾಥ್, ಎನ್.ಎಸ್. ಭಾಸ್ಕರ್, ಎನ್.ಎಸ್.ತಾರನಾಥ್ ಸೇರಿದಂತೆ ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಗೋಕುಲಂ 2ನೇ ಹಂತದಲ್ಲಿರುವ ಮೃತರ ನಿವಾಸದ ಆವರಣದಲ್ಲಿ ಡಿ.25ರ ಗುರುವಾರ ಬೆಳಗ್ಗೆ 8.30ರವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಿದ್ದು, ಬಳಿಕ ಅಂತ್ಯಕ್ರಿಯೆಯು ಮಧ್ಯಾಹ್ನ 1 ಗಂಟೆಗೆ ಸಾಲಿಗ್ರಾಮ ತಾಲೂಕಿನ ನಾಟನಹಳ್ಳಿ ಗ್ರಾಮದಲ್ಲಿ ನೆರವೇರಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.



ಮಮ್ಮಿ-ಡ್ಯಾಡಿಯಿಂದ ಕನ್ನಡ ಧ್ವಂಸವಾಗುತ್ತಿದೆ

ಸಂಗೀತ ವಿವಿಯ ಕನ್ನಡ ರಾಜ್ಯೋತ್ಸವದಲ್ಲಿ ರಂಗಕರ್ಮಿ, ನಟ ಮಂಡ್ಯ ರಮೇಶ್ ಎಚ್ಚರಿಕೆ



ಸಂಗೀತ ವಿವಿಯಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ (ಎಡದಿಂದ ಕುಳಿತವರು) ಕರ್ನಾಟಕ ಸಂಗೀತ ವಿದ್ವಾಂಸರಾದ ಸುಕನ್ಯಾ ಪ್ರಭಾಕರ್, ಹಿರಿಯ ಭರತನಾಟ್ಯ ಕಲಾವಿದೆ ವಿದುಷಿ ಡಾ.ವಸುಂಧರಾ ದೊರೆಸ್ವಾಮಿ, ಗಾಯಕ ಕಿರಗಸೂರು ರಾಜಪ್ಪ, ಚಲನಚಿತ್ರ ನಿರ್ದೇಶಕ ಬಿ.ಸುರೇಶ್, ಅವರನ್ನು ಸನ್ಮಾನಿಸಲಾಯಿತು. (ಎಡದಿಂದ ನಿಂತವರು) ಸಂಗೀತ ವಿವಿ ಕುಲಸಚಿವ ಡಾ.ಎಂ.ಜಿ.ಮಂಜುನಾಥ್, ನಟ ಮಂಡ್ಯ ರಮೇಶ್, ಸಂಗೀತ ವಿವಿ ಕುಲಪತಿ ಡಾ.ನಾಗೇಶ್ ವಿ.ಬೆಟ್ಟಕೋಟೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಉಪಸ್ಥಿತರಿದ್ದರು.

ಮೈಸೂರು, ಡಿ.24(ಎಂಕೆ)- 'ಮಮ್ಮಿ-ಡ್ಯಾಡಿ'ಯಿಂದ ಕನ್ನಡ ಧ್ವಂಸವಾಗುತ್ತಿದ್ದು, ಆಡಳಿತದಲ್ಲಿ ಕನ್ನಡ ಕಡ್ಡಾಯಗೊಳಿಸಿ ಮಕ್ಕಳಿಗೆ ನೆಲದ ಸೊಗಡನ್ನು ಕಲಿಸದಿದ್ದರೆ ಕನ್ನಡ ಕೇವಲ ಘೋಷಣೆಯಾಗಿ ಉಳಿಯಲಿದೆ ಎಂದು ರಂಗಕರ್ಮಿ, ನಟ ಮಂಡ್ಯ ರಮೇಶ್ ಎಚ್ಚರಿಸಿದರು.

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಬುಧವಾರ 'ಉಸಿರಾಯಿತು ಕನ್ನಡ, ಬದುಕಾಗಲಿ ಕನ್ನಡ' ಶೀರ್ಷಿಕೆಯಡಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂಗ್ಲೀಷ್, ತಮಿಳು ಸೇರಿ ಎಲ್ಲಾ ಭಾಷೆಯನ್ನು ಕಲಿಯಿರಿ. ಆದರೆ, ಕನ್ನಡದಲ್ಲಿ ಬದುಕಿರಿ ಎಂದು ಸಲಹೆ ನೀಡಿದರು.

ನಟರು, ಕಲಾವಿದರು ಭಾಷೆಯ ರೂವಾರಿಯಾಗಿದ್ದು, ಚಲನಚಿತ್ರಗಳಲ್ಲಿನ ಕನ್ನಡ ಮುದ ನೀಡಿದರೆ, ರಂಗಭೂಮಿಯಲ್ಲಿ ಕನ್ನಡ ಶ್ರೇಷ್ಠತೆಯನ್ನು ಪಡೆದಿದೆ. ಕನ್ನಡ ಉಳಿವಿಗೆ ರಂಗಭೂಮಿಯೇ ಶ್ರೇಷ್ಠ ಮಾಧ್ಯಮವಾಗಿದ್ದು, ಮಕ್ಕಳನ್ನು ರಂಗಭೂಮಿ ಮತ್ತಿತರ ಕಲಾ ಪ್ರಕಾರಗಳಲ್ಲಿ ತೊಡಗಿಸಬೇಕು ಎಂದು ತಿಳಿಸಿದರು.

ಕನ್ನಡ ಉಳಿಗೆ ಶ್ರಮಿಸುತ್ತಿರುವ ಸಾಧಕರನ್ನು ಆಯ್ಕೆ ಮಾಡಿ ಗೌರವಿಸಬೇಕು. ಹಾಗೆಯೇ ಮಕ್ಕಳು ಪರಿಪೂರ್ಣ ವ್ಯಕ್ತಿತ್ವವನ್ನು ರೂಢಿಸಿಕೊಂಡು ಜೀವನದಲ್ಲಿ ಯಶಸ್ವಿಯಾಗಬೇಕಾದರೆ ರಂಗಭೂಮಿಯನ್ನು ಕಲಿಸಿ ಎಂದು ಕಿವಿಮಾತು ಹೇಳಿದರು.

ಸನ್ಮಾನ: ಇದೇ ಹಿರಿಯ ಭರತನಾಟ್ಯ ಕಲಾವಿದೆ ವಿದುಷಿ ಡಾ.ವಸುಂಧರಾ ದೊರೆಸ್ವಾಮಿ, ಚಲನಚಿತ್ರ ನಿರ್ದೇಶಕ ಬಿ.ಸುರೇಶ್, ಕರ್ನಾಟಕ ಸಂಗೀತ ವಿದ್ವಾಂಸರಾದ ಸುಕನ್ಯಾ ಪ್ರಭಾಕರ್, ಗಾಯಕ ಕಿರಗಸೂರು ರಾಜಪ್ಪ ಅವರನ್ನು ಸನ್ಮಾನಿಸಲಾಯಿತು. ಹಾಗೆಯೇ ಕಲಾವಾಹಿನಿ ವಾರ್ಷಿಕ ಸಂಚಿಕೆ ಬಿಡುಗಡೆಗೊಳಿಸಲಾಯಿತು. ಬಳಿಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿ ಡಾ.ನಾಗೇಶ್ ವಿ.ಬೆಟ್ಟಕೋಟೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಕುಲಸಚಿವ (ಪರೀಕ್ಷಾಂಗ) ಡಾ.ಎಂ.ಜಿ.ಮಂಜುನಾಥ್ ಇನ್ನಿತರರು ಉಪಸ್ಥಿತರಿದ್ದರು.

ಡಿ.27, 28ರಂದು ಶ್ರೀ ಬಲಮುರಿ ಗಣಪತಿ ದೇವಸ್ಥಾನದ 36ನೇ ವಾರ್ಷಿಕೋತ್ಸವ

- ಈ ಬಾರಿ ಅಷ್ಟದ್ರವ್ಯ ಸಮೇತ ಶ್ರೀ ಮಹಾಗಣಪತಿ ಹೋಮ
- ಸಂತಾನ ದೋಷ ಪರಿಹಾರಕ್ಕಾಗಿ ಮಂಗಳ ಕಾರ್ಯ



ಮೈಸೂರು, ಡಿ. 24- ಮೈಸೂರಿನ ರೈಲ್ವೆ ನಿಲ್ದಾಣದಲ್ಲಿರುವ ಶ್ರೀ ಬಲಮುರಿ ಗಣಪತಿ ದೇವಸ್ಥಾನದ 36ನೇ ವರ್ಷದ ವಾರ್ಷಿಕೋತ್ಸವವು ಡಿ.27 ಮತ್ತು 28ರಂದು ಅದ್ದೂರಿಯಾಗಿ ವಿಜೃಂಭಣೆಯಿಂದ ನೆರವೇರಲಿದೆ ಎಂದು ದೇವಸ್ಥಾನದ ಪ್ರಧಾನ ಅರ್ಚಕರಾದ ಜಿ.ಎಸ್.ನಾಗೇಶ್ ದೀಕ್ಷಿತ್, ಅರ್ಚಕರಾದ ಎನ್.ನಾಗೇಂದ್ರ ಪ್ರಸಾದ್ ದೀಕ್ಷಿತ್, ಎನ್.ಹೇಮಂತ್‌ಕುಮಾರ್ ದೀಕ್ಷಿತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಈ ಬಾರಿ ವಿಶೇಷವಾಗಿ ಅಷ್ಟದ್ರವ್ಯ ಸಮೇತ ಶ್ರೀ ಮಹಾಗಣಪತಿ ಹೋಮ ನೆರವೇರಲಿದೆ ಎಂದು ಹೇಳಿದ್ದಾರೆ.

ಡಿ.27ರ ಶನಿವಾರ ಸಂಜೆ ಶ್ರೀ ಗಣಪತಿ ಪೂಜೆ, ಪುಣ್ಯಾಹ, ಪಂಚಗವ್ಯ ನಂತರ ಕಳಸ ಸ್ಥಾಪನೆ ಪೂಜಾ ಕಾರ್ಯಕ್ರಮ ನೆರವೇರಲಿದೆ. ಶ್ರೀ ವಿಶ್ವಸುನಾಮ ಸಂವತ್ಸರೇ ದಕ್ಷಿಣಾಯನೇ ಹೇಮಂತ ಪುಷ್ಯ ಮಾಸೇ ಶುಕ್ಲಪಕ್ಷ ನವಮಿ, ರೇವತಿ ನಕ್ಷತ್ರ ಡಿ.28ರಂದು ಭಾನುವಾರ ಪ್ರಾತಃಕಾಲ ಶ್ರೀ ಮಹಾಗಣಪತಿ ಪೂಜೆ, ಪುಣ್ಯಾಹ, ಕಳಶಸ್ಥಾಪನೆ ನಂತರ ಪರಿವಾರ ದೇವತಾ ಹೋಮಗಳು, ಅಷ್ಟದ್ರವ್ಯ ಸಮೇತ ಶ್ರೀ ಮಹಾಗಣಪತಿ ಹೋಮ, ಶ್ರೀ ಸುಬ್ರಹ್ಮಣ್ಯ ಸ್ವಾಮಿ, ಶ್ರೀ ಧರ್ಮಶಾಸ್ತ್ರ ಹೋಮ, ಶ್ರೀ ಗುರು ದತ್ತಾತ್ರೇಯ ಹೋಮ, ಶ್ರೀ ಆಂಜನೇಯ ಹೋಮ, ಶ್ರೀ ಪರಮೇಶ್ವರಸ್ವಾಮಿ ಹೋಮ, ಶ್ರೀ ನವಗ್ರಹ ದೇವತಾ ಹೋಮ, ನಾಗದೇವತಾ ಹೋಮ, ಕುಂಭಾಭಿಷೇಕ ನೆರವೇರಲಿದ್ದು, ಈ ಮಂಗಳ ಕಾರ್ಯಕ್ಕೆ ಸಂತಾನ ದೋಷ ಪರಿಹಾರಕ್ಕಾಗಿ ಏರ್ಪಡಿಸಲಾಗಿದೆ ಎಂದು ತಿಳಿಸಿದ್ದಾರೆ. ಬೆಳಗ್ಗೆ 11ಕ್ಕೆ ಮಹಾಪೂರ್ಣಾಹುತಿ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ತೀರ್ಥಪ್ರಸಾದ ವಿನಿಯೋಗವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ ಮೊ. 9731871060, 0945836983, 9845525082 ಸಂಪರ್ಕಿಸುವುದು.

ಮೈಸೂರಿನ ಜಿಎಸ್‌ಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಶೃಂಗೇರಿ ಶಾರದಾ ಪೀಠದ ಅಧೀನಕ್ಕೆ

ಶ್ರೀ ವಿಧುಶೇಖರ ಭಾರತಿ ಸ್ವಾಮೀಜಿ ಘೋಷಣೆ



ಮೈಸೂರು,ಡಿ.24–ಗೀತಾ ಶಿಶು ಶಿಕ್ಷಣ ಸಂಘ, ಜಿಎಸ್‌ಎಸ್‌ಎಸ್ ಮೈಸೂರು ಸಂಸ್ಥೆಯ ಆಡಳಿತ ಮಂಡಳಿ ಅಧೀನದಲ್ಲಿರುವ ಎಲ್ಲಾ ಶಿಕ್ಷಣ ಸಂಸ್ಥೆಗಳು ಇನ್ನು ಮುಂದೆ ಶ್ರೀ ಶೃಂಗೇರಿ ಶಾರದಾ ಪೀಠದ ಆಶ್ರಯದಡಿ ಕಾರ್ಯನಿರ್ವಹಿಸಲಿವೆ.

ಜಿಎಸ್‌ಎಸ್‌ಎಸ್ ಮಹಿಳಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಗುರುವಂದನಾ ಸಮಾರಂಭದಲ್ಲಿ ಶ್ರೀ ವಿಧುಶೇಖರ ಭಾರತಿ ಸ್ವಾಮೀಜಿ ಈ ವಿಷಯವನ್ನು ಪ್ರಕಟಿಸಿದರು. ಈ ಐತಿಹಾಸಿಕ ನಿರ್ಣಯವು ಎರಡು ಸಂಸ್ಥೆಗಳ ಮಧ್ಯೆ ನಡೆದ 18 ತಿಂಗಳಿಗಿಂತಲೂ ಅಧಿಕ ಕಾಲದ ಚಿಂತನೆ ಮತ್ತು ಸಮಾಲೋಚನೆಗಳ ಫಲವಾಗಿದೆ. ಗೀತಾ ಶಿಶು ಶಿಕ್ಷಣ ಸಂಘವನ್ನು ಸ್ಥಾಪಿಸಿ ಬೆಳೆಸಿದ ದಿವಂಗತ ಪ್ರೊ.ಬಿ.ಎಸ್. ಪಂಡಿತ್ ಅವರ ದೂರದೃಷ್ಟಿ ಮತ್ತು ಅವಿರತ ಶ್ರಮದ ಫಲವಾಗಿ ನಿರ್ಮಿತವಾದ ಈ ಸಂಸ್ಥೆಗಳ ಭವಿಷ್ಯದ ಬೆಳವಣಿಗೆ, ಅಭಿವೃದ್ಧಿ ಹಾಗೂ ಆಡಳಿತದ ಹೊಣೆಗಾರಿಕೆಯನ್ನು ಶ್ರೀ ಶೃಂಗೇರಿ ಶಾರದಾ ಪೀಠ ವಹಿಸಿಕೊಳ್ಳಬೇಕೆಂಬ ವಿನಂತಿಯನ್ನು ಅಂದಿನ ಕಾರ್ಯದರ್ಶಿ ದಿವಂಗತ ವನಜಾ ಬಿ. ಪಂಡಿತ್ ಅವರ ನೇತೃತ್ವದಲ್ಲಿ ಜಿಎಸ್‌ಎಸ್‌ಎಸ್ ಆಡಳಿತ ಮಂಡಳಿಯು ಶ್ರೀ ಸನ್ನಿಧಾನಕ್ಕೆ ಸಲ್ಲಿಸಿತ್ತು.

ಈ ಪ್ರಕ್ರಿಯೆಯ ಮುಂದುವರಿದ ಭಾಗವಾಗಿ ಶ್ರೀ ಶೃಂಗೇರಿ ಶಾರದಾ ಪೀಠದ ಗುರುಸೇವಾನಿರತ ಆಡಳಿತಾಧಿಕಾರಿ ಮತ್ತು ಮುಖ್ಯಕಾರ್ಯ ನಿರ್ವಹಣಾಧಿಕಾರಿ ಪಿ.ಎ.ಮುರಳಿ ಅವರಿಗೆ ಅಗತ್ಯ ಸಂವಾದ ಹಾಗೂ ಪರಿಶೀಲನೆ ನಡೆಸುವ ಜವಾಬ್ದಾರಿಯನ್ನು ನೀಡಲಾಗಿತ್ತು. ಶ್ರೀ ಭಾರತೀ ತೀರ್ಥ ಸ್ವಾಮೀಜಿ ಹಾಗೂ ಶ್ರೀ ವಿಧುಶೇಖರ ಭಾರತಿ ಸ್ವಾಮೀಜಿ ಅನುಗ್ರಹದಿಂದ ಜಿಎಸ್‌ಎಸ್‌ಎಸ್ ಸಂಸ್ಥೆಗಳನ್ನು ಪೀಠದ ಅಧೀನಕ್ಕೆ ತರುವ ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು.

ಶ್ರೀ ಶೃಂಗೇರಿ ಶಾರದಾ ಪೀಠದ ಮಾರ್ಗದರ್ಶನ ಮತ್ತು ನಿರ್ದೇಶನದಲ್ಲಿ ಸಿದ್ಧಾರ್ಥನಗರದಲ್ಲಿರುವ ಗೀತಾ ಭಾರತಿ ಸ್ಕೂಲ್ ಆಫ್ ಎಕ್ಸಲೆನ್ಸ್, ಬಂಟ್ವಾಳ್ ಮಾಧವ ಶೆಣೈ ಪ್ರೌಢಶಾಲೆ, ಬದ್ರಿ ಪ್ರಸಾದ್ ಜಿ ಪದವಿ ಪೂರ್ವ ಕಾಲೇಜು ಹಾಗೂ ಮೇಟಗಳ್ಳಿಯಲ್ಲಿರುವ ಜಿಎಸ್‌ಎಸ್‌ಎಸ್ ಸಿಂಹಸುಬ್ಬ ಮಹಾಲಕ್ಷ್ಮೀ ಪ್ರಥಮ ದರ್ಜೆ ಕಾಲೇಜು, ಜಿಎಸ್‌ಎಸ್‌ಎಸ್ ಮಹಿಳಾ ತಾಂತ್ರಿಕ ಮಹಾವಿದ್ಯಾಲಯ, ಜಿಎಸ್‌ಎಸ್‌ಎಸ್ ಮಹಿಳಾ ವಾಸ್ತುಶಿಲ್ಪ ಮಹಾವಿದ್ಯಾಲಯವನ್ನು ನಿರ್ವಹಣೆ ಮಾಡಲಾಗುವುದು.

ಜಿಎಸ್‌ಎಸ್‌ಎಸ್ ಅಧ್ಯಕ್ಷ ಡಾ.ಎಂ. ಜಗನ್ನಾಥ ಶೆಣೈ, ಉಪಾಧ್ಯಕ್ಷ ಬಿ.ವಿ. ಶ್ರೀನಿವಾಸ ಗುಪ್ತ, ಕಾರ್ಯದರ್ಶಿ ಅನುಪಮ ಬಿ.ಪಂಡಿತ್, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಆರ್.ಕೆ.ಭರತ್, ಮಂಡಳಿ ಸದಸ್ಯ ಬಿ.ಕೆ.ನಟರಾಜ್ ಮುಂತಾದವರು ಈ ವೇಳೆ ಉಪಸ್ಥಿತರಿದ್ದರು.

ಸಂಸತ್ತಿನಲ್ಲಿ ಡಿಜಿಟಲ್ ಸಾಧನಗಳನ್ನು ಬಳಸಬೇಡಿ: ಸಂಸದರಿಗೆ ಸೂಚನೆ

ನವದೆಹಲಿ, ಡಿ. 24– ಸಂಸತ್ ಸಂಕೀರ್ಣದಲ್ಲಿ ಸ್ಮಾರ್ಟ್ ಕನ್ನಡಕ, ಪೆನ್ ಕ್ಯಾಮೆರಾ ಮತ್ತು ಸ್ಮಾರ್ಟ್ ಕೈಗಡಿಯಾರಗಳಂತಹ ಡಿಜಿಟಲ್ ಸಾಧನಗಳನ್ನು ಬಳಸದಂತೆ ಲೋಕಸಭಾ ಸಚಿವಾಲಯ ಬುಧವಾರ ಎಲ್ಲಾ ಸಂಸದರಿಗೆ ಸೂಚಿಸಿದೆ.

ಏಕೆಂದರೆ ಈ ಡಿಜಿಟಲ್ ಸಾಧನಗಳು ಸಂಸದರ ಗೌಪ್ಯತೆಗೆ ಧಕ್ಕೆ ತರಬಹುದು ಮತ್ತು ಸಂಸದೀಯ ನಿಯಮಗಳನ್ನು ಉಲ್ಲಂಘಿಸಬಹುದು ಎಂದು ಎಚ್ಚರಿಸಲಾಗಿದೆ. ಈ ಸಾಧನಗಳಲ್ಲಿ ಕೆಲವು, ಸದಸ್ಯರ ಗೌಪ್ಯತೆಯಲ್ಲಿ ರಾಜಿ ಮಾಡಿಕೊಳ್ಳುವ ಮತ್ತು ಸಂಸತ್ತಿನ ನಿಯಮಗಳನ್ನು ಉಲ್ಲಂಘಿಸುವ ರೀತಿಯಲ್ಲಿ ಬಳಸಬಹುದು ಎಂದು ಸರ್ಕಾರ ಎಚ್ಚರಿಸಿದೆ. ಆದ್ದರಿಂದ ಸಂಸತ್ತಿನ ಸಂಕೀರ್ಣದ ಯಾವುದೇ ಭಾಗದಲ್ಲಿ ಸದಸ್ಯರ ಭದ್ರತೆ, ಸವಲತ್ತುಗಳು ಮತ್ತು ಗೌಪ್ಯತೆಗೆ ಧಕ್ಕೆ ತರುವ ಯಾವುದೇ ರೀತಿಯಲ್ಲಿ ಅಂತಹ ಸಾಧನಗಳನ್ನು ಬಳಸದಂತೆ ಸದಸ್ಯರಿಗೆ ವಿನಂತಿಸಲಾಗಿದೆ ಎಂದು ಬುಲೆಟಿನ್ ತಿಳಿಸಿದೆ.



4ನೇ ವರ್ಷದ ಪುಣ್ಯ ಸ್ಮರಣೆ



ದಿ|| ಸುನೀಲ್ ಎನ್
ಮರಣ: 24–12–21

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷವಾದರೂ ಸದಾ ನಿಮ್ಮನ್ನು ಸ್ಮರಿಸುತ್ತಾ
ನಿಮ್ಮ ನೆನಪಿನಲ್ಲಿ: ಲೇಟ್ ಸಿಂಗ್ರೇಗೌಡರ ಕುಟುಂಬವರ್ಗ ಹಾಗೂ ಸ್ನೇಹಿತರು ಮಂಚೇಗೌಡನ ಕೊಪ್ಪಲು.

18ನೇ ವರ್ಷದ ಸವಿನೆನಪು



ಶ್ರೀ ಆರ್.ರಾಮಚಂದ್ರ
(ಆಜಾಕ್) ಗಂಗಾ ಸೋಡಾ ಫ್ಯಾಕ್ಟರಿ ಮಾಲೀಕರು

ನೀವು ನಮ್ಮನ್ನಗಲಿ ಇಂದಿಗೆ 18 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು : ಪತ್ನಿ ಮಹದೇವಮ್ಮ, ಮತ್ತು ಮಕ್ಕಳು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷೀದಾರರು ಅದರ ಮಾಲೀಕರಾದ, ಮೈಸೂರು ಜಿಲ್ಲೆ–571107, ಪಿರಿಯಾಪಟ್ಟಣ ಟೌನ್, ಎನ್.ಜಿ.ಒ.ಎಸ್ ಲೇಔಟ್, ನಂಬರ್ 136 ರ ವಾಸಿಯಾದ ಶ್ರೀ. ಪಿ. ಸುರೇಶ ಬಾಬು ಬಿನ್. ರಂಗಯ್ಯ, ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ, ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿ ದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್

ಮೈಸೂರು ನಗರ, ದೇವರಾಜ ಮೊಹಲ್ಲಾ, ವಿಜಯನಗರ 4ನೇ ಹಂತ, 2 ನೇ ಫೇಸ್, ಇಲ್ಲಿರುವ ಪೂರ್ವ–ಪಶ್ಚಿಮ: 24 ಮೀಟರ್, ಉತ್ತರ–ದಕ್ಷಿಣ: 15 ಮೀಟರ್, ಒಟ್ಟು ವಿಸ್ತೀರ್ಣ: 360 ಚದರ ಮೀಟರ್ ಅಳತೆಯ ನಿವೇಶನ ಸಂಖ್ಯೆ: 5499 (ನಮೂನೆ–3 ರ ಪ್ರಕಾರ ಸ್ವತ್ತಿನ ಸಂಖ್ಯೆ 8241571876) ಇದಕ್ಕೆ ಚಕ್ಕುಬಂದಿ, ಪೂರ್ವಕ್ಕೆ:– ನಿವೇಶನ ಸಂಖ್ಯೆ: 5532, ಪಶ್ಚಿಮಕ್ಕೆ:– ರಸ್ತೆ ಉತ್ತರಕ್ಕೆ: ನಿವೇಶನ ಸಂಖ್ಯೆ: 5498, ದಕ್ಷಿಣಕ್ಕೆ:–ನಿವೇಶನ ಸಂಖ್ಯೆ: 5500

M.N Prakash Kalappa
KAR-1996-2000
Advocate & Leagal Consultant
2-3, First Floor, PRI Complex,
67/7A, New Sayyajirao Road,
Fort Mohalla, Mysore-570004
ದಿನಾಂಕ: 24/12/2025, ಮೈಸೂರು

16ನೇ ವರ್ಷದ ಸವಿನೆನಪು



ಹೆಚ್.ಬಿ.ಕಾರ್ತಿಕ್
(ಅಜಯ್)
19.4.1991–25.12.2009

ಪಾಪು ನೀನು ನಮ್ಮನ್ನಗಲಿ ಇಂದಿಗೆ 16 ವರ್ಷಗಳೇ ಕಳೆದರೂ ನಿನ್ನ ಸವಿನೆನಪು ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ ನಿನಗಾಗಿ ಕಾದಿರುವವು ಮತ್ತೊಮ್ಮೆ ಹುಟ್ಟಿಬಾ, ಪಾಪು ಭಗವಂತನು ನಿನ್ನ ಆತ್ಮಕ್ಕೆ ಶಾಂತಿ ನೀಡಲೆಂದು ಸದಾ ಪ್ರಾರ್ಥಿಸುವ ದುಃಖತಪ್ತರು
ತಂದೆ: ಪಿ.ಬಸವಯ್ಯ ಹೊಸಹುಂಡಿ, ತಾಯಿ: ವಿಶಾಲಾಕ್ಷಿ, ಅಕ್ಕ ಅಣ್ಣ ಹಾಗೂ ಕುಟುಂಬವರ್ಗದವರು

25ನೇ ವರ್ಷದ ಸವಿನೆನಪು



ಪಲ್ಲವಿ .ಎನ್
ಆತ್ಮಕ್ಕೆ ಶಾಂತಿ ಕೋರುವವರು:
ತಂದೆ, ತಾಯಿ ಹಾಗೂ ಕುಟುಂಬವರ್ಗದವರು

ಕರ್ನಾಟಕ ಸರ್ಕಾರ
ತಾಲ್ಲೂಕು ಪಂಚಾಯತ್ ಕಾರ್ಯಾಲಯ, ಕೆ.ಆರ್.ಪೇಟೆ
ದೂ:08230–262230 E-mail ID : tpkrpet@gmail.com
ಸಂ:ತಾಪಂಕೆ:ಲೆಶಾ:ಟೆಂಡರ್:ಸಿಆರ್:2025–26 ದಿ:22.12.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2025–26 ನೇ ಸಾಲಿನ ಕೆ.ಆರ್.ಪೇಟೆ ತಾಲ್ಲೂಕು ಪಂಚಾಯಿತಿಯಲ್ಲಿ ರಾಜ್ಯ ಹಣಕಾಸು ಆಯೋಗದ ಅನಿರ್ಬಂಧಿತ ಅನುದಾನದಡಿ ವಿಶೇಷ ಚೇತನರಿಗೆ 10 ತ್ರಿಚಕ್ರ ವಾಹನ ಖರೀದಿಸಲು ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ.
ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು ದಿ:22.12.2025 ರಿಂದ 06.01.2026 ರವರೆಗೆ Website: https://kppp.karnataka.gov.in/ ನಲ್ಲಿ ಪಡೆಯಬಹುದಾಗಿದೆ. e-portal ನಲ್ಲಿ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:06.01.2026 ರ ಸಂಜೆ 5.30 ಗಂಟೆಗೆ ನಿಗಧಿಪಡಿಸಿದೆ.

ಸಹಿ/–ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಕೆ.ಆರ್.ಪೇಟೆ
ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/675/2025–26

